# ಸ್ತ್ರೀಯರ ಪರಿಣಾಮಕಾರಿ ರಚನೆ

Women’s Impact Network

# ಶಿಷ್ಯತ್ವ ಮ್ಯಾನುವಲ್

**Presented by:**
Association for International
Discipleship Advancement **(AIDA)**
in collaboration with **Educational Resources**

ಹೆಸರು: ______________________

ಸ್ಥಳ: ______________________

ರಾಜ್ಯ: ______________________

ದಿನಾಂಕ: ______________________

WIN DISCIPLESHIP MANUAL

Copyright © Association for International
Discipleship Advancement (AIDA)
New Delhi, India
2013

*ಸ್ತ್ರೀಯರ ಪರಿಣಾಮಕಾರಿ ರಚನೆ (WIN) ಗಾಗಿ ಬರೆಯಲಾಗಿರುವ ಈ ಮ್ಯಾನುವಲ್, ಯೇಸು ಕ್ರಿಸ್ತನ ನಿಜವಾದ ಶಿಷ್ಯೆಯರಾಗಿ ಜೀವಿಸುವ ತಮ್ಮ ಸಮರ್ಪಣೆಯನ್ನು ಸ್ಥಾಪಿಸಿಕೊಳ್ಳಲು/ನವೀಕರಿಸಿಕೊಳ್ಳಲು ಸ್ತ್ರೀಯರನ್ನು ಪ್ರೋತ್ಸಾಹಪಡಿಸುತ್ತದೆ; ನಂತರ ಅವರನ್ನು ಸಾಹಿತ್ಯ ಹಾಗೂ ಪ್ರಯೋಗಿಕ ನಿಯೋಜನೆಗಳ ಮೂಲಕ, ಇತರ ಸ್ತ್ರೀಯರ ಮೇಲೆ ಪ್ರಬಲವಾದ, ಸತ್ಯವೇದನುಸಾರ ಆತ್ಮೀಕ ರಚನೆಯ ಮೂಲಕ ಪ್ರಭಾವ ಬೀರುವಂತೆ ಮಾಡುತ್ತದೆ – ಇದರಿಂದ ಇತರ ಸ್ತ್ರೀಯರು ಅವಿಶ್ವಾಸಿಗಳನ್ನು ಕ್ರಿಸ್ತನ ಕಡೆಗೆ ನಡೆಸುತ್ತಾರೆ ಹಾಗೂ ವಿಶ್ವಾಸಿಗಳು ಸಮರ್ಪಣೆಯುಳ್ಳ ಶಿಷ್ಯತ್ವದಲ್ಲಿ ಮುಂದುವರೆಯಲು ಸಹಾಯ ಮಾಡುವವರಾಗಿರುತ್ತಾರೆ.*

*ಈ ಶಿಷ್ಯತ್ವದ ಮ್ಯಾನುವಲ್‌ನಲ್ಲಿರುವ
ವಿಷಯಗಳನ್ನು ಬರೆದಿರುವ
ER/AIDA ಸದಸ್ಯರ ಹೆಸರುಗಳು:*

**ರೆವ. ಶಾಂತ ರಾವತೆ**
**ಶ್ರೀಮತಿ. ರೋಂಥಾ ಡ್ರಾಗೊಮಿರ್**
**ಶ್ರೀಮತಿ. ಕ್ಯಾರೋಲಿನ್ ಅಕ್ಟರ್**
**ಶ್ರೀಮತಿ. ಶೀಬಾ ಬೈಜು**
**ಶ್ರೀಮತಿ. ಮಾರ್ಥಾ ಸ್ಟಾರ್ಕ್ಸ್**
**ರೆವ. ಸ್ಟೀಫನ್ ಲಿವರ್‌ಸೆಡ್ಜ್**
**ರೆವ. ರೊಲ್ಯಾಂಡ್ ಬೌಮ್ಯಾನ್**
**ರೆವ. ಪೌಲ್ ಬೌನ್**
**ರೆವ. ಸ್ಟೀಫನ್ ರಾವರೆ**

**ಮಾರಾಟಕ್ಕಲ್ಲ: ಖಾಸಗಿ ಉಪಯೋಗಕ್ಕೆ ಮಾತ್ರ**

# ಅನುಕ್ರಮಣಿಕೆ


ಸಮರ್ಪಣೆ

1. ಶಿಷ್ಯತ್ವದ ಆಜ್ಞೆ ........ 1
2. ಶಿಷ್ಯೆಯ ವಿಶೇಷ ಗುಣಗಳು ........ 7
3. ಬೆಥಾನ್ಯದ ಮರಿಯಳು: ಒಳ್ಳೆಯ ಶಿಷ್ಯೆ ........16
4. ಶಿಷ್ಯೆಯ ಜೀವನ ಶೈಲಿ ........22
5. ಕ್ರಿಸ್ತನಲ್ಲಿ ........32
6. ಶಿಷ್ಯೆ ಮತ್ತು ಆಕೆಯ ಸಂಬಂಧಗಳು ........ 37
7. ಶಿಷ್ಯೆ ಮತ್ತು ಆತ್ಮಗಳನ್ನು ಗೆಲ್ಲುವದು ........45
   - ಆತ್ಮಗಳನ್ನು ಗೆಲ್ಲಲು ಕಾರಣಗಳು ........45
   - ನಿಮ್ಮ ವೈಯಕ್ತಿಕ ಸಾಕ್ಷಿ ........47
   - ಐದು–ಬೆರಳಿನ ಸುವಾರ್ತಿಕರಣ ........50
   - ರೋಮನ್ ದಾರಿ ........ 52
   - ಪದಗಳಿಲ್ಲದ ಪುಸ್ತಕ ........53
8. ಸಮಾರ್ಯದ ಸ್ತ್ರೀ: ........ 59
   ಆತ್ಮಗಳನ್ನು ಗೆದ್ದವಳು/ಸಾಕ್ಷಿ
9. ನವೋಮಿ ಮತ್ತು ರೂತಳು: ........66
   ಒಳ್ಳೆಯ ಶಿಷ್ಯತ್ವಕ್ಕೆ ವಿಶ್ವಸನೀಯ ಸಲಹೆ
10. ಪ್ರಿಸ್ಕಿಲ್ಲ: ಶಿಷ್ಯೆಯರನ್ನು ರೂಪಿಸುವವಳು ........ 72
11. ವಿನ್ ಮತ್ತು ವಿನ್ನರ್ಸ್ ........78
12. ವಿನ್ ತಂಡವನ್ನು ಮುನ್ನಡೆಸುವದು ........82

ಅನುಬಂಧ



# ಸಮರ್ಪಣೆ

ತೆಲ್ಮಾ "ಮಾಮ" ಬೌನ್ ರವರು ತಮ್ಮ 90ನೇ ಹುಟ್ಟು ಹಬ್ಬಕ್ಕೂ ಒಂದು ತಿಂಗಳ ಮುಂಚೆ ಅಂದರೆ ಆಗಸ್ಟ್ 13, 2009ರಂದು ಈ ಭೂಲೋಕದ ಯಾತ್ರೆಯನ್ನು ಕೊನೆಗೊಳಿಸಿದರು. ಅವರು ತಮ್ಮ 13ನೇ ವಯಸ್ಸಿನಲ್ಲಿ ಮೂರು ಸಭೆಗಳಿಗೆ ಸಭಾಪಾಲಕಿಯಾಗುವದರ ಮೂಲಕ ತಮ್ಮ ಸೇವೆಯನ್ನು ಪ್ರಾರಂಭಿಸಿದರು, ಕಾಲೇಜ್ ವಿದ್ಯಾಭ್ಯಾಸದ ನಂತರ, ತಮ್ಮ ಪತಿ ಡಾ. ವಿಲ್ಲಿಸ್ ಕೆ. ಬೌನ್‌ರೊಂದಿಗೆ ಸುಮಾರು 45 ವರ್ಷಗಳ ಕಾಲ ಆಫ್ರಿಕಾದಲ್ಲಿ ಸೌವಾರ್ತಿಕಳಾಗಿ ಸೇವೆ ಸಲ್ಲಿಸಿದರು.

ಮಾಮ ಬೌನ್‌ರವರು AIDA Women's Conferences ಗಳನ್ನು ಭಾರತದಲ್ಲಿ ಪ್ರಾರಂಭಿಸಿದರು. ತಮ್ಮ ಜೀವಿತದ ಕಡೇ ಮೂರು ವರ್ಷಗಳಲ್ಲಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾಗ್ಯೂ ಸಭೆಯ ಸ್ತ್ರೀಯರನ್ನು ಸಾಕ್ಷಿಯಾಗಿ ನಿಲ್ಲಲು ಹಾಗೂ ಸುವಾರ್ತಿಕರಣಕ್ಕಾಗಿ ಬಲಗೊಳಿಸಲು ಭಾರತದ ಹಲವು ರಾಜ್ಯಗಳು ಹಾಗೂ ನೇಪಾಳ್, ಬಾಂಗ್ಲಾದೇಶ್, ಮತ್ತು ಮಾಯನ್ಮಾರ್ ದೇಶಗಳಿಗೆ ಪ್ರಯಾಣಿಸಿದರು. ವೇದಿಕೆಯ ಮೇಲಿನ ಅವರ ಪ್ರಸನ್ನತೆಯೇ ಮಹದಾದ ಪ್ರೇರಣೆ ಮತ್ತು ಸಂದೇಶವಾಗಿರುತ್ತಿತ್ತು.

ಅವರ ಜೀವಿತ ಇತರರ ಮೇಲೆ ಹೇಗೆ ಪರಿಣಾಮ ಬೀರಿತ್ತು ಎಂಬದಕ್ಕೆ ಕೆಳಗೆ ಕೊಡಲಾಗಿರುವ ಹೇಳಿಕೆಗಳೇ ಸಾಕ್ಷಿಯಾಗಿವೆ:

"ಮಾಮ ಬೌನ್ ರವರು ತಮ್ಮ ಈ ಪ್ರಾಯದಲ್ಲಿಯೂ ಕರ್ತನ ಸೇವೆ ಮಾಡುತ್ತಿರುವದರಿಂದ, ನಾನು ಸಹ ಯಾವುದೇ ಸಮಯದಲ್ಲಾದರೂ, ಯಾವ ಸ್ಥಳ, ಪರಿಸ್ಥಿತಿಯಲ್ಲಾದರೂ, ಯಾವುದೇ ಪ್ರಾಯದಲ್ಲಾದರೂ ಕರ್ತನ ಸೇವೆಯನ್ನು ಮಾಡಬಹುದೆಂದು ಕಲಿತುಕೊಂಡಿದ್ದೇನೆ." (ರೆವ. ಜೇನ್ ಥಾಮಸ್, ಹಿಮಾಚಲ್ ಪ್ರದೇಶ)

"ಮಾಮ ಬೌನ್ ರವರು ಏಳು ಸಮುದ್ರಗಳನ್ನು ದಾಟಿ ಬಂದು ಕರ್ತನ ಸೇವೆಯನ್ನು ಮಾಡುತ್ತಿರುವಾಗ, ನಾನೂ ಸಭಾ ಕಾರ್ಯಚಟುವಟಿಕೆಗಳಲ್ಲಿ ನಿರತವಾಗಿ ನನ್ನನ್ನೇ ತೊಡಗಿಸಿಕೊಳ್ಳಬೇಕೆಂದು ತೀರ್ಮಾನಿಸಿಕೊಂಡಿದ್ದೇನೆ." (ರೋಶನಿ ಫಿಲಿಫ್ಸ್, ವಾರಣಾಸಿ, ಉತ್ತರ ಪ್ರದೇಶ).

"ಮಾಮ ಬೌನ್ ರವರು ಇಡೀ ದಿನ ಕುಳಿತುಕೊಂಡಿರುವ, ನಮ್ಮೆಲ್ಲರೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ವಿಷಯವು ಸುವಾರ್ತಾ ಕೆಲಸವು ಮುಂದುವರೆಸಿಕೊಂಡು ಹೋಗುವಂತೆ ನನ್ನನ್ನು ಬಹಳವಾಗಿ ಪ್ರೋತ್ಸಾಹಪಡಿಸಿದೆ." (ಕ್ಯಾರೋಲಿನ್ ಅಕ್ಬರ್, ನಾಗಪುರ, ಮಹಾರಾಷ್ಟ್ರ)

ಮಾಮಾ ಬೌನ್ ರವರ ಕಡೆಯ ಸಂದೇಶದ ಸಾರಾಂಶ, **"ಸುವಾರ್ತೀಕರಣದ ಕಾರ್ಯವು ಇನ್ನೂ ಮುಗಿದಿಲ್ಲ. ಅದಿನ್ನೂ ಪೂರ್ಣಗೊಳ್ಳಬೇಕಿದೆ. ಪೆರು ಅಥವಾ ವೆಸ್ಟ್ ಬೆಂಗಾಲ್ ಅಥವಾ ಕರ್ತನ ಶುಭ ಸಂದೇಶವನ್ನು ಕೇಳಲು ಎದುರುನೋಡುತ್ತಿರುವ ಲೋಕದ ಯಾವುದೇ ದೇಶವಾಗಲಿ ಅವುಗಳಿಗೆ ಸುವಾರ್ತೆಯನ್ನು ಸಾರುವದೇ ಈ ಭೂಲೋಕದಲ್ಲಿ ನಮಗಿರುವ ಮಹದಾದ ಕೆಲಸವಾಗಿದೆ. ನೆನಪಿನಲ್ಲಿಟ್ಟುಕೊಳ್ಳಿರಿ, ಕೆಲಸವು ಇನ್ನೂ ಪೂರ್ಣಗೊಂಡಿಲ್ಲ. ಶುಭವಾರ್ತೆಯನ್ನು ಸಾರಲು ನೀವು ಪಡುವ ಪ್ರತಿಯೊಂದು ಪ್ರಯಾಸದಲ್ಲಿಯೂ ದೇವರು ನಿಮ್ಮನ್ನು ಆಶೀರ್ವದಿಸಲಿ."**

ಸುವಾರ್ತಿಕರಣದ ಕೆಲಸವು ನಿಜವಾಗಿಯೂ ಇನ್ನೂ ಪೂರ್ಣಗೊಂಡಿಲ್ಲ! ಯೇಸು ಕ್ರಿಸ್ತನ ಪ್ರತಿಯೊಬ್ಬ ಶಿಷ್ಯೆಯು ಆತನ ಸಾಕ್ಷಿಯಾಗಿರಬೇಕು. ಆತನು ಅಥವಾ ಆಕೆ ಯಾರೇ ಆದರೂ ಇತರರನ್ನು ಯೇಸು ಕ್ರಿಸ್ತನ ಕಡೆಗೆ ನಡೆಸುವದು ನಿಜವಾದ ಶಿಷ್ಯೆಯ ವಿಶೇಷವಾದ ಗುಣವಾಗಿರುತ್ತದೆ. ದೇವರ ಕೃಪಾಭರಿತವಾದ ಬಲಪಡಿಸುವಿಕೆಯ ಮೂಲಕ, ಪ್ರತಿಯೊಬ್ಬ ವಿನ್ನರ್ ಆತ್ಮಗಳನ್ನು ಸಂಪಾದಿಸುವವಳಾಗಿ–ಆತನಿಗಾಗಿ ಫಲಕೊಡುವವಳಾಗಲಿ (ಯೋಹಾನ 15:1–2,6) ಎಂದು ನಾವು ಪ್ರಾರ್ಥಿಸುತ್ತೇವೆ.

# 1 ಶಿಷ್ಯತ್ವದ ಆಜ್ಞೆ

**ಕೀ ವಚನ: 1 ಕೊರಿಂಥ 9:19**

"ನಾನು ಎಲ್ಲಾ ವಿಷಯದಲ್ಲಿ ಸ್ವತಂತ್ರನಾಗಿದ್ದರೂ ಹೆಚ್ಚು ಜನರನ್ನು ಸಂಪಾದಿಸಿಕೊಳ್ಳಬೇಕೆಂದು ನನ್ನನ್ನು ಎಲ್ಲರಿಗೂ ಅಧೀನಮಾಡಿದೆನು."

ಯೇಸು ಕ್ರಿಸ್ತನು ತನ್ನ ಶಿಷ್ಯೆಯರಿಗೆ ಕೊಟ್ಟ ಅಂತಿಮವಾದ ಆಜ್ಞೆ, **"...ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯೆಯರನ್ನಾಗಿ ಮಾಡಿರಿ..."** (ಮತ್ತಾಯ 28:19). ಶಿಷ್ಯೆಯರು ಎಂಬ ಪದದ ಅರ್ಥ ಕಲಿಯುವವರು: ಕಲಿತುಕೊಳ್ಳಲು ಬರುವವರು. ನಿಜವಾಗಿ ನೋಡುವದಾದರೆ, ಸತ್ಯವೇದದ ಹಲವಾರು ಅವತರಣಿಕೆಗಳಲ್ಲಿ ಈ ವಾಕ್ಯವನ್ನು ಈ ರೀತಿಯಾಗಿ ಬರೆಯಲಾಗಿದೆ, **"ಹೋಗಿರಿ...., ಎಲ್ಲಾ ದೇಶಗಳಿಗೂ ಉಪದೇಶ ಮಾಡಿರಿ..."** 20ನೇ ವಚನವು ಈ ಉಪದೇಶದ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ: **"....ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ."** ಯೇಸು ಕ್ರಿಸ್ತನ ಶಿಷ್ಯೆಯರಾದವರು ಆತನ ಉಪದೇಶವನ್ನು ಕಲಿತುಕೊಳ್ಳುವವರು ಮಾತ್ರವಲ್ಲ ಬದಲಾಗಿ ಅವುಗಳನ್ನು ಕಾಪಾಡಿಕೊಳ್ಳುವವರೂ ಆಗಿರುತ್ತಾರೆ. ಆತನ ಉಪದೇಶವು ಮಹಾಆಜ್ಞೆಯನ್ನು ಸಹ ಒಳಗೊಂಡಿರುವದರಿಂದ, ಅಂತಿಮವಾಗಿ ಇತರರನ್ನು ಶಿಷ್ಯೆಯರನ್ನಾಗಿ ಮಾಡುವವರು ಮತ್ತು ಆತನು ಆಜ್ಞಾಪಿಸಿರುವದನ್ನೆಲ್ಲಾ ಕಾಪಾಡಿಕೊಳ್ಳುವಂತೆ ಉಪದೇಶ ಮಾಡುವವರು ನಿಜವಾದ ಶಿಷ್ಯೆಯರಾಗಿರುತ್ತಾರೆ.

ಯೇಸು ಕ್ರಿಸ್ತನು ಭೂಲೋಕದಲ್ಲಿ ಸೇವೆಯನ್ನು ಮಾಡುವ ಸಮಯದಲ್ಲಿ ಅನೇಕರು ಆತನನ್ನು ಹಿಂಬಾಲಿಸಿದರು. ಸ್ವಸ್ಥತೆ ಹೊಂದಲು ಜನರು ಗುಂಪುಗುಂಪಾಗಿ ಆತನನ್ನು ಮುತ್ತಿಕೊಳ್ಳುತ್ತಿದ್ದರು (ಮತ್ತಾಯ 8:16). ಆತನು ಮಾಡಿದ ಅದ್ಭುತಕಾರ್ಯಗಳನ್ನು ಕಂಡದ್ದರಿಂದ ಸಾವಿರಾರು ಜನರು ಆತನನ್ನು ಹಿಂಬಾಲಿಸುತ್ತಿದ್ದರು (ಯೋಹಾನ 6:2). ಆತನನ್ನು ಹಿಂಬಾಲಿಸುತ್ತಿದ್ದ ಅನೇಕರು, ನಾವು ಆತನ ಶಿಷ್ಯೆಯರಾಗಲು ಮತ್ತು ಆತನಿಂದ ಕಲಿತುಕೊಳ್ಳಲು ಬಯಸುತ್ತೇವೆ ಎಂದು ಹೇಳುತ್ತಿದ್ದರು. ಕಾಲಕ್ರಮೇಣ ಅನೇಕರು ಆತನನ್ನು ಹಿಂಬಾಲಿಸುವದನ್ನು ಬಿಟ್ಟುಬಿಟ್ಟರು (ಯೋಹಾನ 6:66). ಆದರೂ, ಆತನಿಗೋಸ್ಕರ ಎಲ್ಲವನ್ನು ಬಿಟ್ಟು ಆತನ ಭೂಲೋಕದ ಸೇವೆಯ ಕೊನೆಯವರೆಗೂ, ಮತ್ತು ತಮ್ಮ ಜೀವಿತದ ಕೊನೆಯವರೆಗೂ ಆತನನ್ನು ಹಿಂಬಾಲಿಸಿದವರೇ ಆತನ ನಿಜವಾದ ಶಿಷ್ಯೆಯರಾಗಿದ್ದಾರೆ (ಮಾರ್ಕ 10:28). ಅವರು ಆತನನ್ನು ಹಿಂಬಾಲಿಸಿದರು ಮತ್ತು ಆತನೊಂದಿಗೆ ನಿಕಟವಾದ ಸಂಬಂಧವುಳ್ಳವರಾಗಿ ಜೀವಿಸಿದರು, ಆಳವಾದ ರಹಸ್ಯಗಳನ್ನು ಕಲಿತುಕೊಂಡರು ಮತ್ತು ಆತನಿಗಾಗಿ **"ಮನುಷ್ಯರನ್ನು ಹಿಡಿಯುವ ಬೆಸ್ತರಾದರು."**

ಅಮೆರಿಕನ್ ಟ್ರಾಕ್ ಸೊಸೈಟಿ ಡಿಕ್ಷನರಿ ಪ್ರಕಾರ, "ಯೇಸು ಕ್ರಿಸ್ತನ ಶಿಷ್ಯೆಯನ್ನು ಈಗ ಆತನ ಸಿದ್ಧಾಂತಗಳನ್ನು ನಂಬುವವಳು, ಆತನ ತ್ಯಾಗವನ್ನು ಆತುಕೊಳ್ಳುವವಳು, ಆತನ ಅತ್ಮದಲ್ಲಿ ಲೀನಗೊಂಡವಳು, ಆತನ ಮಾದರಿಯನ್ನು ಅನುಸರಿಸುವವಳು ಮತ್ತು ಆತನ ಕಾರ್ಯವನ್ನು ಮಾಡಲು ಜೀವಿಸುವವಳು" ಎಂಬದಾಗಿ ವ್ಯಾಖ್ಯಾನಿಸಬಹುದಾಗಿದೆ. ಶಿಷ್ಯತ್ವವು ರಕ್ಷಣೆಯ ನಂತರದ ಹೆಜ್ಜೆಯಾಗಿದೆ ಎಂಬದನ್ನು ಇದು ತೋರಿಸುತ್ತದೆ; ರಕ್ಷಣೆಯು ಶಿಷ್ಯೆಯಾಗುವದರ ಪ್ರಾರಂಭ ಮಾತ್ರವಾಗಿದೆ. ರಕ್ಷಣೆ ಹೊಂದುವದಕ್ಕಾಗಿಯೇ ಮಾನವರು ಯೇಸು ಕ್ರಿಸ್ತನನ್ನು ನಂಬುತ್ತಾರೆ. ರಕ್ಷಣೆಯು **"ನಂಬಿಕೆಯ ಮೂಲಕ.....ಕೃಪೆಯಿಂದ"** ಮಾತ್ರ; **"ಅದು ನಮ್ಮಿಂದ ಉಂಟಾದದ್ದಲ್ಲ, ದೇವರ ವರವೇ"** (ಎಫೆಸ 2:8). ಆದರೆ ನಮ್ಮ ರಕ್ಷಕನಾದ ಕರ್ತನ ಉದಾಹರಣೆ ಮತ್ತು ಆಜ್ಞೆಗಳ ಮೇರೆಗೆ, ಆತನ ಸೇವೆ ಮಾಡುತ್ತಾ ಮರಣವು ನಮ್ಮನ್ನು ಆತನ ಪ್ರಸನ್ನತೆಗೆ ವರ್ಗಾಯಿಸುವವರೆಗೂ ನಂಬಿಗಸ್ಥರಾಗಿರುವಂತೆ ನಮ್ಮ ಜೀವಿತವನ್ನು ರೂಪಿಸುವದೇ ಶಿಷ್ಯತ್ವದ ಕಾರ್ಯವಾಗಿದೆ.

ಶಿಷ್ಯತ್ವವು ಒಬ್ಬ ವಿಶ್ವಾಸಿಯ ಕಡೆಯಿಂದ ಶಿಸ್ತು ಮತ್ತು ಸಮರ್ಪಣೆಯನ್ನು ಎದುರುನೋಡುತ್ತದೆ. ಶಿಷ್ಯತ್ವವು ಉಪದೇಶ ಮತ್ತು ಕಲಿತುಕೊಳ್ಳುವಿಕೆ ಎರಡನ್ನೂ ಒಳಗೊಂಡಿರುತ್ತದೆ. ಶಿಷ್ಯೆಯನ್ನು ಮಾಡುವವನು ಕಲಿಸುತ್ತಾನೆ ಅದೇ ಸಮಯದಲ್ಲಿ ಶಿಷ್ಯೆಯು ಕಲಿಯುವಂತೆ ನೋಡಿಕೊಳ್ಳುತ್ತಾನೆ. ಯೇಸು ಕ್ರಿಸ್ತನು ತನ್ನ ಶಿಷ್ಯೆಯರಿಗೆ ಕಲಿಸಿದ ವಿಧಾನವನ್ನು ನಾಲ್ಕು ಸುವಾರ್ತೆಗಳಲ್ಲಿ ನಾವು ಓದುತ್ತೇವೆ; ಹೊಸ ವಿಶ್ವಾಸಿಗಳು ಅಪೊಸ್ತಲನಾದ ಪೌಲನು ಯೇಸು ಕ್ರಿಸ್ತನ ವಾಕ್ಯಗಳ ಕುರಿತು ಉಪದೇಶಗಳನ್ನು ಕೇಳಿ ಯಥಾರ್ಥಚಿತ್ತರಾಗಿ ನಡೆದುಕೊಂಡ ರೀತಿಯನ್ನು ಅಪೊಸ್ತಲರ ಕೃತ್ಯಗಳಲ್ಲಿ ನಾವು ಓದುತ್ತೇವೆ. ಶಿಷ್ಯೆಯರು ಶಿಷ್ಯೆಯರನ್ನು ಮಾಡಿದರು; ಮತ್ತು ಎಲ್ಲರನ್ನೂ ಕ್ರೈಸ್ತೆಯರೆಂದು ಕರೆಯಲಾಯಿತು (ಅ.ಕೃ 11:26). ಮತ್ತು ಹೊಸ ಒಡಂಬಡಿಕೆಯ ಉಳಿದ ಭಾಗಗಳೆಲ್ಲವೂ (ಈಗಲೂ) ಕ್ರೈಸ್ತೀಯ ಶಿಷ್ಯೆಯರಿಗೆ ಕೊಡಲಾಗಿರುವ ದೇವರ ವಾಕ್ಯಗಳಾಗಿವೆ. ಹೀಗೆ ಶಿಷ್ಯತ್ವವೆಂದರೆ ಕ್ರೈಸ್ತೀಯ ರಚನೆಗನುಸಾರವಾಗಿ–ವಾಕ್ಯಗಳಲ್ಲಿ ಬರೆಯಲ್ಪಟ್ಟಿರುವ ಜೀವನ ಶೈಲಿಗನುಸಾರವಾಗಿ ಜೀವಿಸುವದಾಗಿದೆ.

ದೇವರು ಮಾತ್ರವೇ ಕೊಡುವಂಥ ರಕ್ಷಣೆಯ ನಡುವಿನ ವ್ಯತ್ಯಾಸವನ್ನು ನೋಡುವದಾದರೆ, ಶಿಷ್ಯತ್ವವು ದೇವರು ಮತ್ತು ನಮ್ಮ ನಡುವಿನ ಜೊತೆಯಾಟವಾಗಿದೆ. ನಾವು ದೇವರಿಂದ ರಕ್ಷಣೆ ಹೊಂದುವಾಗ, ನಾವು ದೇವರ ಪವಿತ್ರಾತ್ಮನಿಂದ ತುಂಬಲ್ಪಡುತ್ತೇವೆ, ನಾವು ದೇವರಿಗೆ ಮೆಚ್ಚಿಕೆಯುಳ್ಳವರಾಗಿ ಜೀವಿಸುವಂತೆ ಈತನು ನಮ್ಮನ್ನು ಬಲಪಡಿಸುತ್ತಾನೆ (ಯೋಹಾನ 14:26; ಅ.ಕೃ 5:32; 1 ಕೊರಿಂಥ 12:3ಬಿ). ರಕ್ಷಣೆ ಹೊಂದಲು ನಮ್ಮಿಂದ ಏನೂ ಮಾಡಿಕೊಳ್ಳಲಿಕ್ಕಾಗದಿರುವಾಗ, ಶಿಷ್ಯೆಯರಾಗಲು ಪವಿತ್ರಾತ್ಮನು ನಮ್ಮನ್ನು ಬಲಪಡಿಸುವಾಗ ನಾನು ಏನನ್ನಾದರೂ ಮಾಡುವವರಾಗಿರಬೇಕು. ಪವಿತ್ರಾತ್ಮನ ಯೇಸು ಕ್ರಿಸ್ತನ ವಿಷಯದಲ್ಲಿ ಸಾಕ್ಷಿ ಹೇಳುತ್ತಾನೆ ಮತ್ತು ಆತನಿಗೆ ಮಹಿಮೆಯನ್ನುಂಟುಮಾಡುತ್ತಾನೆ ಎಂದು ಸತ್ಯವೇದವು ಹೇಳುತ್ತದೆ (ಯೋಹಾನ 15:26; 16:13–14). ಶಿಷ್ಯತ್ವವು ಕೋರುವದನ್ನು ಮಾಡಲು ನಮ್ಮನ್ನು ಬಲಪಡಿಸುವ ಪವಿತ್ರಾತ್ಮನಿಂದಿಗೆ ನಾವು ಸಕ್ರಿಯವಾದ ಜೊತೆಯಾಟದಲ್ಲಿ ಮತ್ತು ಸಹಕಾರದಲ್ಲಿ ನಡೆದುಕೊಳ್ಳದಿರುವದಾದರೆ ಒಳ್ಳೆಯ ಶಿಷ್ಯೆಯರಾಗಲು ನಮ್ಮಿಂದ ಎಂದೂ ಸಾಧ್ಯವಿಲ್ಲ. ನಮ್ಮ ಜೀವಿತಗಳಲ್ಲಿ ದೇವರ ವಾಕ್ಯಗಳನ್ನು ಉಪಯೋಗಿಸಿಕೊಳ್ಳುವದರಿಂದ ಆತನು ಈ ಕಾರ್ಯವನ್ನು ಮಾಡುತ್ತಾನೆ (ಯೋಹಾನ 16:13–15).

ಯೇಸು ಕ್ರಿಸ್ತನ ಶಿಷ್ಯೆಯಾಗಿರಬೇಕೆಂದು ಒಂದುವೇಳೆ ನೀವು ಬಯಸುವದಾದರೆ, ದೇವರ ವಾಕ್ಯಗಳಿಂದ ಸೂಚನೆಗಳನ್ನು ಕೊಡುವಾಗ ಮತ್ತು ಪವಿತ್ರಾತ್ಮನ ಸಹಾಯದಿಂದ, ಆತನ ಶಿಷ್ಯೆಯಾಗಲು ಆಜ್ಞಾಪಿಸಿರುವದನ್ನೆಲ್ಲಾ ಕಲಿತುಕೊಳ್ಳಲು ಮತ್ತು ಅವುಗಳನ್ನು ಕಾಪಾಡಿಕೊಳ್ಳಲು ನೀವು ಶಕ್ತರಾಗುತ್ತೀರ. ಆತನನ್ನು ಹಿಂಬಾಲಿಸುವದಕ್ಕಾಗಿ ನಿಮ್ಮ ಶಿಲುಬೆಯನ್ನು ಹೊರುವವರು ಮತ್ತು ನಿಮ್ಮನ್ನೇ ನಿರಾಕರಿಸಿಕೊಳ್ಳುವವರು ನೀವೇ ಆಗಿರುತ್ತೀರ (ಮಾರ್ಕ 8:38). ದೇವರ ರಕ್ಷಣೆಯ ಕೃಪೆಯನ್ನು ಅನುಭವಿಸಿರುವವರಾದ ನೀವು ನಿಮ್ಮ ದೇಹವನ್ನು ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸುತ್ತೀರ (ರೋಮಾ 12:1). ಲೋಕವನ್ನು ಮತ್ತು ಲೋಕದಲ್ಲಿರುವ ವಸ್ತುಗಳನ್ನು ಪ್ರೀತಿಸುವದನ್ನು ನಿಲ್ಲಿಸುವವರು ನೀವೇ (1 ಯೋಹಾನ 2:15). ಇಹಲೋಕದ ನಡುವಳಿಕೆಯನ್ನು, ಸ್ವಭಾವಗಳು, ಸಿದ್ಧಾಂತಗಳು ಅಥವಾ ಪದ್ಧತಿಗಳನ್ನು ಅನುಸರಿಸದೆ ದೇವರ ಪರಿಪೂರ್ಣವಾದ ಚಿತ್ತಕ್ಕನುಸಾರವಾಗಿ ಜೀವಿಸುವ ತೀರ್ಮಾನವನ್ನು ತೆಗೆದುಕೊಳ್ಳುವವರು ಮತ್ತು ನಿಮ್ಮನ್ನೇ ಶಿಸ್ತಿಗೆ ಒಳಪಡಿಸಿಕೊಳ್ಳುವವರೂ ನೀವೇ ಆಗಿದ್ದೀರ (ರೋಮಾ 12:2). ನೀವು ನಿಮ್ಮನ್ನೇ ಒಪ್ಪಿಸಿಕೊಟ್ಟು **"**ಯೇಸು ಕ್ರಿಸ್ತನಲ್ಲಿದ್ದಂಥ**"** ಜೀವನ ಶೈಲಿಯನ್ನು ನಿಮ್ಮಲ್ಲಿಯೂ ರೂಪಿಸಲು ಪವಿತ್ರಾತ್ಮನಿಗೆ ಅವಕಾಶವನ್ನು ಕೊಡುವಾಗ, ನಿಮ್ಮಲ್ಲಿ ರಕ್ಷಣೆಯ ಒಳ್ಳೇ ಕಾರ್ಯವನ್ನು ಪ್ರಾರಂಭಿಸಿದ ದೇವರು, ಖಂಡಿತವಾಗಿಯೂ ಅದನ್ನು ಪರಿಪೂರ್ಣಗೊಳಿಸುತ್ತಾನೆ (ಫಿಲಿ 1:6). ಮತ್ತು ನಿಮ್ಮ ಶಿಷ್ಯತ್ವದ ಫಲವು ಕೇವಲ ಕ್ರಿಸ್ತನಲ್ಲಿದ್ದಂಥ ಸ್ವಭಾವ ನಿಮ್ಮಲ್ಲಿ ಕಾಣಿಸಿಕೊಳ್ಳುವದು ಮಾತ್ರವಲ್ಲ, ಬದಲಾಗಿ ನೀವು ಮಾಡುವಂಥ ಅನೇಕ ಶಿಷ್ಯೆಯರೂ **"**ಮನುಷ್ಯರನ್ನು ಹಿಡಿಯುವ ಬೆಸ್ತರಾಗುತ್ತಾರೆ.**"** ಶಿಷ್ಯತ್ವದ ನಿಮ್ಮ ಜೀವನ ಶೈಲಿಯು ನಿಮ್ಮನ್ನು ಶಿಷ್ಯೆಯರನ್ನು–ಮಾಡುವವರನ್ನಾಗಿ ಮಾಡುತ್ತದೆ, ಹೆಚ್ಚು ನಿಜವಾದ ಶಿಷ್ಯೆಯರನ್ನು ಮಾಡಲು ನಿಮ್ಮನ್ನೇ ಪುನರ್‌ಉತ್ಪಾದಿಸುತ್ತದೆ. ಪ್ರತಿಯೊಬ್ಬ ಕ್ರೈಸ್ತನಿಗಾಗಿಯೂ ಮಾಡಲ್ಪಟ್ಟಿರುವ ಸಭೆಯ ಜೀವನ ಚಕ್ರ ಇದುವೇ ಆಗಿದೆ. ಮಹಾಆಜ್ಞೆಯಲ್ಲಿ ಯೇಸು ಕ್ರಿಸ್ತನ ಉದ್ದೇಶ ಇದುವೇ ಆಗಿದೆ.

ನಮ್ಮ ಸಂಸ್ಕೃತಿಯಲ್ಲಿ ಕಡಿಮೆ ಪ್ರತಿಶತಃ ಕ್ರೈಸ್ತರಿರಿದ್ದಾರಾದರೂ, ಅದರ ಬಹುಪಾಲನ್ನು ತಲುಪಬೇಕಾದ ದೊಡ್ಡ ಜವಾಬ್ದಾರಿ ನಮ್ಮ ಮುಂದಿದೆ – ಎಲ್ಲಾ ಜನಾಂಗ, ಜನರು ಮತ್ತು ಭಾಷೆಗಳನ್ನಾಡುವವರಿಂದ, ನಿತ್ಯವಾದ ನಾಶನದ ಅಪಾಯದಲ್ಲಿರುವವರನ್ನು ಕಸಿದುಕೊಂಡು ಯೇಸು ಕ್ರಿಸ್ತನ ಶಿಷ್ಯೆಯರನ್ನಾಗಿ ಮಾಡಬೇಕು. ಏನೇಆಗಲಿ ನಮ್ಮ ದೇಶದ ಚಿತ್ರಣವು ನಮ್ಮ ಮುಂದೆ ಮೂರು ಸವಾಲುಗಳನ್ನು ಇಡುತ್ತದೆ:

**(1) ಜನಸಂಖ್ಯೆ:** **"**ಲೋಕದ ಬೇರೆ ಯಾವುದೇ ದೇಶಕ್ಕಿಂತಲೂ ಭಾರತದಲ್ಲಿ ಹೆಚ್ಚು (ಮತ್ತು ಅತ್ಯಧಿಕ) ಕ್ರೈಸ್ತರಿಲ್ಲದ ಜನರ ಗುಂಪುಗಳು, ಸಭೆಗಳು ಅಥವಾ ಕಾರ್ಯಕರ್ತರಿದ್ದಾರೆ.... ಲೋಕದ ಬೇರೆ ಯಾವುದೇ ದೇಶದಲ್ಲಿಯೂ ಸುವಾರ್ತೆ ಕೇಳದಿರುವ ಜನರ ಸಂಖ್ಯೆ ಭಾರತದಲ್ಲಿರುವಷ್ಟಿಲ್ಲ**"** (Operation World, 7th Edition, 2010, pp. 405-417). ಸದ್ಯಕ್ಕೆ ಸೇವೆಯಲ್ಲಿರುವ ಪೂರ್ಣಾವಧಿ ಸೌವಾರ್ತಿಕರು ಮತ್ತು ಸಭಾಪಾಲಕರ ಮೂಲಕ, ನಮ್ಮ ಮುಂದಿರುವ ಕಾರ್ಯವನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ.

**(2) ಲಿಂಗ ಮನೋವೃತ್ತಿ:** ಭಾರತದಲ್ಲಿರುವ ಸ್ತ್ರೀಯರು ತಮ್ಮವರಿಂತಲೂ ಮತ್ತು ಹೊರಗಿನವರಿಂದಲೂ ತಮ್ಮ ಸುರಕ್ಷೆ ಮತ್ತು ಆರೋಗ್ಯದ ವಿಷಯದಲ್ಲಿ ಅಭದ್ರತೆಯನ್ನು ಹೆಚ್ಚಾಗಿ ಕಾಣುತ್ತಿರುವದರಿಂದ ತಮ್ಮ ಸ್ವಾತಂತ್ರ್ಯಕ್ಕೆ ಇನ್ನೂ ಅಡೆತಡೆಗಳನ್ನು ಎದುರಿಸುತ್ತಲೇ ಇದ್ದಾರೆ. ಆಧುನಿಕ ಜೀವನ ಶೈಲಿಯ ಅಗಧವಾದ ಬದಲಾವಣೆಗಳಾಗಿರುವ ಈಗಿನ ದಿವಸಗಳಲ್ಲಿಯೂ, ಅನೇಕರು ಸಹಕಾಯಕರಾಗಿಯೂ ಮತ್ತು ನಿರೀಕ್ಷೆಯಿಲ್ಲದವರಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ಅವರು ನ್ಯಾಯಾಲಯದ ಮುಂದೆ ಅಳುತ್ತಿದ್ದಾರೆ, ಬೇಡಿಕೆಗಳನ್ನಿಡುತ್ತಿದ್ದಾರೆ ಮತ್ತು ಮನವಿಗಳನ್ನು ಸಲ್ಲಿಸುತ್ತಿದ್ದಾರೆ. ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ, ತಮಗೂ ಮನ್ನಣೆ ದೊರೆಯಬೇಕು ಎಂದು ವಿನಂತಿಸಿಕೊಳ್ಳುತ್ತಿದ್ದಾರೆ. ಆದರೆ ಅವರ ಪ್ರಾಥಮಿಕ ಆದ್ಯತೆ ಸ್ವಾಭಾವಿಕವಾಗಿ ಆತ್ಮೀಕ ಮತ್ತು ನಿತ್ಯವಾದದ್ದು ಎಂಬದನ್ನು ಅರ್ಥಮಾಡಿಕೊಳ್ಳದವರಾಗಿದ್ದಾರೆ. ನಮಗೋಸ್ಕರ ಪ್ರಾಣವನ್ನೇ ಅರ್ಪಿಸಿ, ಅವರಿಗೆ ನಿಜವಾದ ಬೆಲೆಯನ್ನು ಕೊಡಲು ಈಗಲೂ ಜೀವಿಸುತ್ತಿರುವವನ ಬೆಳಕಿನಡೆಗೆ ಯಾರು ನಡೆಸುತ್ತಾರೆ?

**(3) ತಿಳುವಳಿಕೆಯ ಕೊರತೆ:** ದೇವರು ಈಗಿನ ದಿನಗಳಲ್ಲಿ ಅತ್ಯದ್ಭುತವಾಗಿ ಕಾರ್ಯ ಮಾಡುತ್ತಿದ್ದಾನೆ ಮತ್ತು ಅನೇಕರು ಯೇಸು ಕ್ರಿಸ್ತನ ಕಡೆಗೆ ಬರುತ್ತಿದ್ದಾರೆ. ಆತನ ಶಿಷ್ಯೆಯರಾಗುವದು ಹೇಗೆ ಎಂಬದನ್ನು ಹೊಸ ವಿಶ್ವಾಸಿಗಳ ನಡುವೆ ಬಹುಪ್ರಮಾಣದಲ್ಲಿರುವ ಸ್ತ್ರೀಯರಿಗೆ ಕಲಿಸಿಕೊಡಬೇಕಾಗಿದೆ. ದೇವರ ಒಳ್ಳೇತನದಲ್ಲಿ ಅವರು ನಂಬಿಕೆಯಲ್ಲಿ ಬೆಳೆಯುತ್ತಿದ್ದಾರಾದರೂ, ಆತನ ವಾಕ್ಯಗಳ ಬೋಧನೆಯ ಕೊರತೆಯನ್ನು ಎದುರಿಸುತ್ತಿದಾರೆ ಎಂಬದನ್ನು ಗಂಭೀರವಾದ ಅಧ್ಯಯನವು ತಿಳಿಯಪಡಿಸುತ್ತದೆ. ಜೀವಿತದ ಆಸೆಭೋಗಗಳು ಮತ್ತು ವಿರೋಧಿಗಳಿಂದ ಹಿಂಸೆಗಳು ಕಾಣಿಸಿಕೊಳ್ಳುವಾಗ ಅನೇಕರು ತಮ್ಮ ನಂಬಿಕೆಯಿಂದ ಹಿಂಜರಿಯುತ್ತಾರೆ. ಮತ್ತೊಂದು ಕಡೆಯಲ್ಲಿ, ಒಂದುವೇಳೆ ಅವರನ್ನು ನಿಜವಾದ ಶಿಷ್ಯೆಯರನ್ನಾಗಿ ತರಭೇತಿಗೊಳಿಸುವದಾದರೆ, ಅವರನ್ನು ದೇವರ ರಾಜ್ಯಕ್ಕಾಗಿ ಸಜ್ಜುಗೊಳಿಸಬಹುದು, ಜೇನ್ನೊಣಗಳ ದಂಡಿನ ಹಾಗೆ–ನಿಯೋಜಿಸಲ್ಪಟ್ಟವರು, ಕಠಿಣವಾಗಿ ದುಡಿಯುವವರು ಮತ್ತು ಇತರರನ್ನು ಕ್ರಿಸ್ತನ ಕಡೆಗೆ ನಡೆಸುವವರು.

ಆದ್ದರಿಂದಲೇ ದೇವರಿಗಾಗಿ ಹೆಚ್ಚು ಕೆಲಸಗಾರ್ತಿಯರು, ಯೇಸು ಕ್ರಿಸ್ತನಿಗಾಗಿ ಹೆಚ್ಚು ಸಾಕ್ಷಿಗಳು ಮತ್ತು ಸ್ತ್ರೀಯರ ನಡುವೆ ಶಿಷ್ಯೆಯರನ್ನಾಗಿ ಮಾಡುವ ಅನೇಕ ಸ್ತ್ರೀಯರ ಅವಶ್ಯಕತೆ ನಮಗಿದೆ. ಸ್ತ್ರೀಯರು ಪುರುಷರಿಗಿಂತಲೂ ಉತ್ತಮ ಮತ್ತು ಹೆಚ್ಚು ಪರಿಣಾಮಕಾರಿಯಾದ ಸುವಾರ್ತಾ ಸೇವಕಿಯರಾಗಿದ್ದಾರೆಂದು ಅನೇಕ ಸಭಾ ನಾಯಕರು ಮನವರಿಕೆ ಮಾಡಿಕೊಂಡಿದ್ದಾರೆ ಮತ್ತು ಹೇಳಿಕೊಂಡಿದ್ದಾರೆ. ಸ್ತ್ರೀಯರು ಕೇವಲ ಸ್ತ್ರೀಯರನ್ನು ಮಾತ್ರವಲ್ಲ ಬದಲಾಗಿ ಮಕ್ಕಳು, ಯೌವನಸ್ಥರು ಮತ್ತು ವಯಸ್ಸಾದವರಿಗೂ ಸುವಾರ್ತೆ ಸಾರುವವರಾಗಿದ್ದಾರೆ. ಶಿಷ್ಯೆಯರನ್ನು ಮಾಡುವವರಾಗಿ ಸ್ತ್ರೀಯರ ಸಾಮರ್ಥ್ಯವು ಅತ್ಯಧಿಕವಾದದ್ದಾಗಿದೆ.

ಕೆಲಸದ ಅವಸರತೆಯು ಎರಡು ಕಾರ್ಯಗಳನ್ನು ಮಾಡುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. **ಮೊದಲನೆಯದಾಗಿ,** ಕ್ರಿಸ್ತನ ನಿಜವಾದ ಶಿಷ್ಯೆಯರಾಗಲು ನಾವು ನಮ್ಮನ್ನೇ ಪ್ರಾರ್ಥನಾಪೂರ್ವಕವಾಗಿ ಪರಿಶೀಲಿಸಿಕೊಳ್ಳಬೇಕು ಮತ್ತು ನಮ್ಮ ಜೀವಿತಗಳನ್ನು ಹೊಸದಾಗಿ

ಪುನರ್-ಸಮರ್ಪಿಸಿಕೊಳ್ಳಬೇಕು (ಯೋಹಾನ 8:31). **ಎರಡನೆಯದಾಗಿ,** ಆತ್ಮಭಾರವುಳ್ಳ ಸಾಕ್ಷಿಗಳು ಮತ್ತು ಶಿಷ್ಯೆಯರನ್ನು ಮಾಡುವವರಾಗಲು ನಮ್ಮನ್ನೇ ನಾವು ಸಮರ್ಪಿಸಬೇಕು. ವಿನ್ ಈ ಎರಡೂ ಕಾರ್ಯಗಳನ್ನು ಕಾರ್ಯಗಳನ್ನು ನೆರವೇರಿಸುತ್ತದೆ. ವಿನ್ ನಲ್ಲಿ ಭಾಗವಹಿಸುವಂಥ ಪ್ರತಿಯೊಬ್ಬ ಸ್ತ್ರೀಯೂ ಮಹಾಆಜ್ಞೆಯ ನೆರವೇರಿಕೆಗೆ ನಿರ್ವಹಿಸಬೇಕಾದ ಪಾತ್ರವಿರುತ್ತದೆ. ದೇವರು ನಿಮ್ಮನ್ನು ಆರಿಸಿಕೊಂಡಿದ್ದಾನೆ! ಇದಕ್ಕಿಂತಲೂ ದೊಡ್ಡ ಭಾಗ್ಯ ಮತ್ತೊಂದಿಲ್ಲ.

**ವಿನ್ ಕ್ರೈಸ್ತೀಯ ಸ್ತ್ರೀಯರ ಭವಿಷ್ಯವನ್ನು ಸತ್ಯವೇದದನುಸಾರ ಇತ್ಯರ್ಥಿಸುತ್ತದೆ, ಆಳವಾದ ಶಿಷ್ಯತ್ವದ ಹೆಬ್ಬಯಕೆಯನ್ನು ಹುಟ್ಟಿಸುತ್ತದೆ, ಇತರ ಸ್ತ್ರೀಯರೊಂದಿಗೆ ಕೂಡಿ, ಅವರಲ್ಲಿ ಪ್ರಬಲವಾದ ಆತ್ಮೀಕ ಚೇತನವನ್ನು ರೂಪಿಸುವದರ ಮೂಲಕ ಶಿಷ್ಯೆಯರನ್ನು ರೂಪಿಸುವವರನ್ನಾಗಿ ಮಾಡುವಂತೆ ಬಲಗೊಳಿಸುತ್ತದೆ. ನಾವು "ವಿ-ನ್ನರ್ಸ್!" ಗಳಾಗಿರೋಣ.**

ದೇವರಿಗೇ ಎಲ್ಲಾ ಮಹಿಮೆಯು ಸಲ್ಲಲಿ,

ಯೇಸು ಕ್ರಿಸ್ತನ ಶಿಷ್ಯೆಯರ ಜೀವಿತಗಳಲ್ಲಿ ನಡೆಯುವ ಎಲ್ಲಾ ಒಳ್ಳೇ ಕಾರ್ಯಗಳಿಗೆ ಆತನ ಕೃಪೆಯೇ ಮೂಲ,

ಯೇಸು ಕ್ರಿಸ್ತನಿಗಾಗಿ ನಿಮ್ಮವರಾದ

– ವಿನ್ ವಿಷನರೀಸ್



# ನೋಟ್ಸ್

# 2 ಶಿಷ್ಯೆಯ ವಿಶೇಷವಾದ ಗುಣಗಳು

**ಕೀ ವಾಕ್ಯ: ಕೊಲೊಸ್ಸೆ 1:10**

"...ಆತನಿಗೆ ಯೋಗ್ಯರಾಗಿ ನಡೆದು....ನೀವು ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ, ದೇವಜ್ಞಾನದಿಂದ ಅಭಿವೃದ್ಧಿಯಾಗುತ್ತಿರಬೇಕೆಂತಲೂ..."

**ಪರಿಚಯ**

1. ಯೇಸು ಕ್ರಿಸ್ತನನ್ನು ಅನೇಕರು ನಂಬುತ್ತಾರೆ, ಆದರೆ ಶಿಷ್ಯೆಯಾದವಳು ಆತನನ್ನು ಪ್ರೀತಿಸುತ್ತಾಳೆ ಮತ್ತು ನಿಕಟವಾಗಿ ಆತನನ್ನು ಹಿಂಬಾಲಿಸುವವಳಾಗಿರುತ್ತಾಳೆ.

   ಎ. ಜನರ ಗುಂಪು ಗುಂಪಾಗಿ ಯೇಸು ಕ್ರಿಸ್ತನನ್ನು ಆಹಾರ, ಅದ್ಭುತಗಳು, ಸ್ವಸ್ಥತೆ, ಬಿಡುಗಡೆ ಮತ್ತು ರಾಜಕೀಯ ಸ್ವತಂತಕ್ಕಾಗಿ ಹಿಂಬಾಲಿಸುತ್ತಿದ್ದರು. ಅವರು ಯೇಸು ಕ್ರಿಸ್ತನ ಶಿಷ್ಯೆಯಾರಾಗಿದ್ದರೇ (ಯೋಹಾನ 6:14–15)?

   ಬಿ. ಹನ್ನೆರಡು ಮಂದಿ ಅಪೊಸ್ತಲರು ತಮ್ಮ ವೈಯಕ್ತಿಕ ಜೀವಿತವನ್ನು ಯೇಸು ಕ್ರಿಸ್ತನೊಂದಿಗೆ ಜೀವಿಸಲು ಮತ್ತು ಹಿಂಬಾಲಿಸಲು ಕೊಟ್ಟಿದ್ದರು. ಅವರು ಶಿಷ್ಯರಾಗಿದ್ದರೇ (ಮತ್ತಾಯ 4:19–20)?

2. ಈ ಪಾಠದಲ್ಲಿ ಯೇಸು ಕ್ರಿಸ್ತನ ನಿಜವಾದ ಶಿಷ್ಯೆಯ ವಿಶೇಷವಾದ ಗುಣಗಳನ್ನು ನಾವು ತಿಳಿದುಕೊಳ್ಳೋಣ ಮತ್ತು ನಿಜವಾದ ಶಿಷ್ಯೆಯರಾಗಿರುವದನ್ನು ಕಲಿತುಕೊಳ್ಳೋಣ.

**ಯೇಸು ಕ್ರಿಸ್ತನ ನಿಜವಾದ ಶಿಷ್ಯೆಯ ಗುಣಗಳು**

1. ನಿಜವಾದ ಶಿಷ್ಯೆಯು **ಬೇರೆ ಎಲ್ಲಾ ಪ್ರೀತಿಗಳಿಗಿಂತಲೂ ದೇವರನ್ನು ಹೆಚ್ಚಾಗಿ ಪ್ರೀತಿಸುತ್ತಾಳೆ** (ಲೂಕ 14:16–26)

   ಎ. ದೇವರ ಮೇಲಿನ ಪ್ರೀತಿಯು ಒಬ್ಬ ಶಿಷ್ಯೆಯ ಜೀವಿತದ ಅತೀಮುಖ್ಯವಾದ ಗುಣವಾಗಿರುತ್ತದೆ. ಯೇಸು ಕ್ರಿಸ್ತನ ಮೇಲಿರುವ ನಮ್ಮ ಪ್ರೀತಿಗೆ ಬೇರೆ ಯಾವ ಪ್ರೀತಿಯಿಂದಲೂ ಸ್ಪರ್ಧೆ ಎದುರಾಗಬಾರದು. ಯೇಸು ಕ್ರಿಸ್ತನ ಮೇಲಿರುವ ನಮ್ಮ ಪ್ರೀತಿಯು, ನಮ್ಮನ್ನು ನಾವು

ಪ್ರೀತಿಸಿಕೊಳ್ಳುವದಕ್ಕಿಂತಲೂ ಹೆಚ್ಚಿನದಾಗಿರಬೇಕು; ನಮ್ಮ ಸ್ವಂತ ಬಯಕೆಗಳು ಮತ್ತು ಕನಸುಗಳು, ನಮ್ಮ ಹವ್ಯಾಸಗಳು ಮತ್ತು ಅಭ್ಯಾಸಗಳು ಮತ್ತು ನಮ್ಮ ವಿಶ್ರಾಂತಿ ಮತ್ತು ಸಂತೋಷಕ್ಕಿಂತಲೂ ಹೆಚ್ಚಾಗಿ ನಾವು ಆತನನ್ನು ಪ್ರೀತಿಸಬೇಕು.

ಬಿ. ಯೇಸು ಕ್ರಿಸ್ತನ ಮೇಲೆ ಶಿಷ್ಯಗಿರುವ ಪ್ರೀತಿಗೆ ಹೋಲಿಸುವದಾದರೆ, ಬೇರೆ ಎಲ್ಲಾ ಪ್ರೀತಿಗಳೂ ಹಗೆಯಂತಿರಬೇಕು.

- ನಿಜವಾಗಿಯೂ ನಾವು ನಮ್ಮ ಕುಟುಂಬಗಳನ್ನು ದ್ವೇಷಿಸುವವರಾಗಿರಬಾರದು ಎಂಬದು ನಮಗೆ ಗೊತ್ತಿದೆ. ಉದಾಹರಣೆಗೆ, ಪೇತ್ರನು ಸೇವೆಗೆ ತನ್ನ ಹೆಂಡತಿಯನ್ನು ಜೊತೆಯಲ್ಲಿ ಕರೆತಂದಿದ್ದನು (1 ಕೊರಿ 9:5).

- ನಮ್ಮ ಕುಟುಂಬ ಮತ್ತು ನಮ್ಮ ಸಂಬಂಧಿಕರನ್ನು ನೋಡಿಕೊಳ್ಳಬೇಕು ಎಂಬದು ನಮಗೆ ಗೊತ್ತಿದೆ. ನೋಡಿಕೊಳ್ಳದವನು "ನಂಬದವನಿಗಿಂತ ಕಡಿಮೆಯಾದವನಾಗಿದ್ದಾನೆ" ಎಂದು ಸತ್ಯವೇದವು ಹೇಳುತ್ತದೆ (1 ತಿಮೊಥೆ 5:8).

- ಸ್ತ್ರೀಯು ಜಯಶೀಲಳಾಗಿರಬೇಕು, ದೇವರಲ್ಲಿ ಭಯಭಕ್ತಿಯುಳ್ಳವಳಾಗಿರಬೇಕು ಮತ್ತು ತನ್ನ ಮನೆವರನ್ನು ಚೆನ್ನಾಗಿ ನೋಡಿಕೊಳ್ಳುವವಳಾಗಿರಬೇಕು ಎಂದು ಜ್ಞಾನೋಕ್ತಿ 31:10–31 ಪ್ರಬೋಧಿಸುತ್ತದೆ. 1 ತಿಮೊಥೆ 2:9–10 ಮತ್ತು 1 ಪೇತ್ರ 3:1–6 ಈ ಹಳೆಯ ಒಡಂಬಡಿಕೆಯ ಪ್ರಬೋಧನೆಯ ಕ್ಲುಪ್ತವಾದ ರೂಪವಾಗಿದೆ.

- ಲೂಕ 14:26ರಲ್ಲಿ ಬರೆಯಲ್ಪಟ್ಟಿರುವ ಹಗೆ ಎಂಬ ಪದದ ಅರ್ಥ ಕಡಿಮೆ ಪ್ರೀತಿ. ಕ್ರಿಸ್ತನ ಮೇಲೆ ನಮಗಿರುವ ಪ್ರೀತಿಗಿಂತ ನಮ್ಮ ಕುಟುಂಬ ಮತ್ತು ಬಂಧುಗಳ ಮೇಲಿನ ಪ್ರೀತಿ ಕಡಿಮೆಯಾಗಿರಬೇಕು.

  – ನಮ್ಮ ಕುಟುಂಬ ಮತ್ತು ಬಂಧುಗಳಿಗಿಂತ ಹೆಚ್ಚಾದ ಆದ್ಯತೆಯನ್ನು ನಾವು ಯೇಸು ಕ್ರಿಸ್ತನಿಗೆ, ಆತನ ಸೇವೆಗೆ ಮತ್ತು ವಾಕ್ಯಗಳಿಗೆ ಕೊಡಬೇಕು.

  – ಆತನು ನಮ್ಮನ್ನು ಕರೆದು ಸುವಾರ್ತೆಯನ್ನು ಸಾರಲು ಕಳುಹಿಸಿಕೊಡುವದಾದರೆ ಇವರನ್ನು ತ್ಯಜಿಸಲು ನಾವು ಸಿದ್ಧರಾಗಿರಬೇಕು.

  – ಆತನು ಒಂದುವೇಳೆ ಇವರನ್ನು ನಮ್ಮಿಂದ ತೆಗೆದುಕೊಂಡರೆ ನಾವು ಗುಣಗುಟ್ಟದೇ ನಮ್ಮನ್ನು ಆತನಿಗೆ ಒಪ್ಪಿಸಿಕೊಡಬೇಕು.

ಸಿ. ಯೇಸು ಕ್ರಿಸ್ತನು ಮತ್ತಾಯ 10:37ರಲ್ಲಿ ಸುವಿಸ್ತಾರವಾಗಿ ಹೇಳುವದರ ಮೂಲಕ ಈ ಸತ್ಯವನ್ನು ವ್ಯಕ್ತಪಡಿಸಿದನು. ಯೇಸು ಕ್ರಿಸ್ತನನ್ನು ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರೀತಿಸಬೇಕು ಎಂಬದಾಗಿ ಈ ವಾಕ್ಯವನ್ನು ಅರ್ಥಮಾಡಿಕೊಳ್ಳಬೇಕು. ಒಂದುವೇಳೆ ಇಲ್ಲವಾದರೆ, ಆತನ ಶಿಷ್ಯೆಯರು ಅಥವಾ ಕ್ರೈಸ್ತೆಯರೆಂದು ನಾವು ಕರೆಯಲ್ಪಡುವದಿಲ್ಲ.

ಡಿ. ಯೇಸು ಕ್ರಿಸ್ತನಿಗೆ ತನ್ನ ಜೀವಿತದಲ್ಲಿ ಪ್ರಥಮ ಸ್ಥಾನವನ್ನು ಕೊಡುವ ಶಿಷ್ಯೆಗೆ ಬಹುಮಾನವು ಸಿಗುವದು (ಮತ್ತಾಯ 6:33, ಮಾರ್ಕ 10:28–30).

2. ನಿಜವಾದ ಶಿಷ್ಯೆಯು **ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಳ್ಳುತ್ತಾಳೆ** (ಲೂಕ 14:17, ಮಾರ್ಕ 8:34–35).

ಎ. ಆದಿ ಸಭೆಯಲ್ಲಿ, ಶಿಲುಬೆಯನ್ನು ಮರಣದ ಸಂಕೇತವೆಂದು ಪರಿಗಣಿಸಲಾಗುತ್ತಿತ್ತು. ಒಂದುವೇಳೆ ಒಬ್ಬ ಸ್ತ್ರೀ ಯೇಸು ಕ್ರಿಸ್ತನ ಶಿಷ್ಯೆಯಾಗಿರಲು ತೀರ್ಮಾನಿಸಿಕೊಳ್ಳುವದಾದರೆ, ಆಕೆಯು ತನ್ನ ಶಿಲುಬೆಯನ್ನು ಪ್ರತಿದಿನ ಹೊತ್ತುಕೊಳ್ಳಬೇಕು.

ಬಿ. ಇದು ಪೌಲನಲ್ಲಿದ್ದಂಥ ಸ್ವಭಾವಕ್ಕೆ ಹೋಲಿಕೆಯಾಗಿದೆ: "ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವದು ನನಗೆ ಲಾಭವೇ" (ಫಿಲಿ 1:21). ಯೇಸು ಕ್ರಿಸ್ತನು ಮತ್ತು ಆತನ ಸೇವೆಯ ನಿಮಿತ್ತ ತನ್ನ ಪ್ರಾಣವನ್ನು ಕಳೆದುಕೊಳ್ಳಲೂ ಆಕೆ ಸಿದ್ಧಳಾಗಿರಬೇಕು.

ಸಿ. ಶರೀರದ ಆಸೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಆಕೆಯು ತನ್ನನ್ನೇ ನಿರಾಕರಿಸಿಕೊಳ್ಳಬೇಕು. ಯೇಸು ಕ್ರಿಸ್ತನ ಹಿಂಬಾಲಕರು ಲೌಕಿಕ ಇಚ್ಛೆಗಳು ಅಥವ ಅಭಿವೃದ್ಧಿಗಳಿಗಾಗಿ ಆಶಿಸಬಾರದು ಬದಲಾಗಿ ಶಿಸ್ತನ್ನು ಪಾಲಿಸುವವರಾಗಿರಬೇಕು. ಆಕೆಯು ಸ್ವ–ನಿರಾಕರಣೆಯನ್ನು ಅಭ್ಯಾಸಿಸುವವಳಾಗಿರಬೇಕು ಮತ್ತು ಎಲ್ಲವನ್ನೂ ಅಂದರೆ ಯೇಸು ಕ್ರಿಸ್ತನ ನಿಮಿತ್ತ ಲೌಕಿಕ ಸವಲತ್ತುಗಳನ್ನು ಮತ್ತು ಸಂತೋಷಗಳನ್ನು ತ್ಯಾಗ ಮಾಡಲು ಸಿದ್ಧಳಾಗಿರಬೇಕು.

ಡಿ. ಕ್ರೈಸ್ತೀಯ ಸೇವೆಯ ನಿಮಿತ್ತ ದೇವರು ಅವಳ ಮೇಲೆ ಹಾಕುವ ಎಲ್ಲಾ ಭಾರವನ್ನು ಹಾಗೆಯೇ ತನ್ನ ಕುಟುಂಬದ ಜವಾಬ್ದಾರಿಕೆಗಳ ಭಾರವನ್ನು ಧೈರ್ಯವಾಗಿ ಮತ್ತು ಸಂತೋಷವಾಗಿ ಹೊರುವವಳಾಗಿರಬೇಕು.

- ಇದನ್ನು ಮಾಡುತ್ತಿರುವಾಗ, ದೇವರು ವಹಿಸುವ ಭಾರಗಳು ಮತ್ತು ತನ್ನ ಅಥವಾ ಇತರರ ಪಾಪಕೃತ್ಯಗಳಿಂದ ವಹಿಸಲ್ಪಟ್ಟಿರುವ ಭಾರದ ನಡುವೆಯಿರುವ ವ್ಯತ್ಯಾಸವನ್ನು ಶಿಷ್ಯೆಯು ಅರ್ಥಮಾಡಿಕೊಳ್ಳುವದು ಪ್ರಾಮುಖ್ಯವಾಗಿದೆ.

- ಶಿಷ್ಯೆಯು ಯೇಸು ಕ್ರಿಸ್ತನೊಂದಿಗೆ ನೊಗವನ್ನು ಹೊತ್ತುಕೊಂಡಿದ್ದಾಳೆ (ಮತ್ತಾ 11:30). ಭಾರವನು ಅತೀಯಾಗಿದೆ ಎನಿಸುವಾಗ, ಪಾಪದ ಫಲವಾಗಿ ದೊರೆತಿರುವ ಭಾರವನ್ನು ಕೊತ್ತೊಗೆಯಲು ಮತ್ತು ಆತನು ಹೊರಿಸುವ ಭಾರವನ್ನು ಹೊರಲು ಸಹಾಯ ಮಾಡುವಂತೆ ತಿಳುವಳಿಕೆ ಹಾಗೂ ಸಹಾಯಕ್ಕಾಗಿ ಯೇಸು ಕ್ರಿಸ್ತನನ್ನು ಬೇಡಿಕೊಳ್ಳಬೇಕು.

3. ನಿಜವಾದ ಶಿಷ್ಯೆಯು **ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಾಳೆ** (ಲೂಕ 14:27).

   ಎ. ಯೇಸು ಕ್ರಿಸ್ತನನ್ನು ಹಿಂಬಾಲಿಸುವದೆಂದರೆ ಆತನ ಆಜ್ಞೆಗಳನ್ನು ಕಾಪಾಡಿಕೊಳ್ಳುವದಾಗಿದೆ. ಯೇಸು ಕ್ರಿಸ್ತನನ್ನು ಪ್ರೀತಿಸುವವರೆಲ್ಲರೂ ಆತನ ಉಪದೇಶಗಳಿಗೆ ವಿಧೇಯರಾಗುತ್ತಾರೆ. ಮತ್ತು ಆತನ ಆಜ್ಞೆಗಳಿಗೆ ವಿಧೇಯರಾಗುವವರೆಲ್ಲರೂ, ಆತನ ಪ್ರೀತಿಯಲ್ಲಿ ನೆಲೆಗೊಂಡಿರುತ್ತಾರೆ (ಯೋಹಾನ 14:23; ಯೋಹಾನ 15:10).

   ಬಿ. ಯೇಸು ಕ್ರಿಸ್ತನನ್ನು ಹಿಂಬಾಲಿಸುವದೆಂದರೆ ಆತನ ಮಾದರಿಯನ್ನು ಅನುಸರಿಸುವದು. ನಿಜವಾದ ಶಿಷ್ಯೆಯು ಯೇಸು ಕ್ರಿಸ್ತನ ಜೀವನ ಮತ್ತು ಬೋಧನೆಗಳನ್ನು ಸತತವಾಗಿ ಧ್ಯಾನಿಸುತ್ತಾಳೆ. ಆತನ ಮಾದರಿಯ ನಿಯಮ ಮತ್ತು ಪದ್ಧತಿಗನುಸಾರವಾಗಿ ಆಕೆಯು ಪ್ರತಿದಿನ ತನ್ನ ಜೀವಿತವನ್ನು ಸರಿಪಡಿಸಿಕೊಳ್ಳುವ ಹಾಗು ಪುನಶ್ಚೇತನಪಡಿಸಿಕೊಳ್ಳುವದು ಆಕೆಯ ಅಭ್ಯಾಸವಾಗಿರುತ್ತದೆ.

   ಸಿ. ಕ್ರಿಸ್ತನನ್ನು ಹಿಂಬಾಲಿಸುವದೆಂದರೆ ಆತನ ಉದ್ದೇಶಗಳಿಗಾಗಿ ನಮ್ಮನ್ನೇ ಸಂಪೂರ್ಣವಾಗಿ ಒಪ್ಪಿಸಿಕೊಡುವದಾಗಿದೆ. ಮತ್ತೊಮ್ಮೆ ಇದು ಪೌಲನ ಒಪ್ಪಿಸಿಕೊಡುವಿಕೆಯಂತಿದೆ ಆತನು ಹೇಳಿದ್ದೇನೆಂದರೆ, **"**ನನಗಂತೂ ಬದುಕುವದೆಂದರೆ ಕ್ರಿಸ್ತನೇ**"** (ಫಿಲಿ 1:21).

   ಡಿ. ಕ್ರಿಸ್ತನನ್ನು ಹಿಂಬಾಲಿಸುವದೆಂದರೆ ಬದುಕಿರುವವರೆಗೂ ಆತನಿಗೆ ನಂಬಿಗಸ್ಥರಾಗಿರುವದು. ತಾನೆಂದಿಗೂ ಆತನನ್ನು ಅಲ್ಲಗಳೆಯುವದಿಲ್ಲ ಎಂಬ ಭರವಸೆಯೊಂದಿಗೆ, ಶಿಷ್ಯೆಯು ಯೇಸು ಕ್ರಿಸ್ತನಲ್ಲಿರುವ ತನ್ನ ನಂಬಿಕೆಯಲ್ಲಿ ದೃಢವಾಗಿ ನಿಂತಿರುತ್ತಾಳೆ. ಕೇವಲ ಪ್ರಾರಂಭಿಸಿದರೆ ಸಾಲದು ಬದಲಾಗಿ ಕೊನೆಗೊಳಿಸುವವನೇ ಕಿರೀಟವನ್ನು ಪಡೆಯುತ್ತಾನೆ (ಫಿಲಿ 3:11–14; ಪ್ರಕ 2:10).

4. ನಿಜವಾದ ಶಿಷ್ಯೆಯು **ತನಗಿರುವದನ್ನೆಲ್ಲಾ ಬಿಟ್ಟುಬಿಡಲು ಸಿದ್ಧಳಾಗಿರುತ್ತಾಳೆ** (ಲೂಕ 14:33, ಮಾರ್ಕ 10:21).

   ಎ. ಶಿಷ್ಯೆಯರು ತಾವೇ ತಮ್ಮ ಜೀವಿತದ ಯಜಮಾನಿಯರಾಗಿರುವದಿಲ್ಲ; ಅವರು ತಮ್ಮ ಮೇಲೆ ಕೇವಲ ಮನೆವಾರ್ತೆಯವರು ಮಾತ್ರವಾಗಿರುತ್ತಾರೆ (1 ಕೊರಿ 6:19).

ಬಿ. ಬೆಥಾನ್ಯದ ಮರಿಯಳು ಅತ್ಯಂತ ಬೆಲೆ ಬಾಳುವ ಸುಗಂಧ ತೈಲವನ್ನು–ತನ್ನಲ್ಲಿದ್ದ ಅಮೂಲ್ಯವಾದ ಆಸ್ತಿಯನ್ನು–ಯೇಸು ಕ್ರಿಸ್ತನ ಪಾದಗಳ ಮೇಲೆ ಹಾಕಿ ಅಭಿಷೇಕಿಸಿದಳು (ಯೋಹಾನ 12:3).

ಸಿ. ಐಶ್ವರ್ಯವಂತನಾಗಿದ್ದ ಯೌವನಸ್ಥನಾದ ಅಧಿಕಾರಿಗೆ ಒಂದು ಕೊರತೆಯಿತ್ತು: ಯೇಸು ಕ್ರಿಸ್ತನ ಮೇಲಿನ ಪ್ರೀತಿಗಿಂತ ಆತನು ತನ್ನ ಆಸ್ತಿಯ ಮೇಲೆ ಹೆಚ್ಚಿನ ಪ್ರೀತಿಯಿಟ್ಟಿದ್ದನು. ಈ ಕಾರಣದಿಂದಲೇ ಆತನು ಯೇಸು ಕ್ರಿಸ್ತನನ್ನು ಹಿಂಬಾಲಿಸಲಿಲ್ಲ (ಮಾರ್ಕ 10:21–22).

5. ನಿಜವಾದ ಶಿಷ್ಯೆಯು **ದೇವರ ವಾಕ್ಯವನ್ನು ತಿಳಿದುಕೊಂಡಿರುತ್ತಾಳೆ ಮತ್ತು ಅದರಲ್ಲಿ ಬೆಳೆಯುತ್ತಾಳೆ** (ಯೋಹಾನ 8:31).

ಎ. ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಿದ್ದ ಅನೇಕರು ಪ್ರಾರಂಭದಲ್ಲಿ ಆತನಲ್ಲಿ ನಂಬಿಕೆಯನ್ನಿಟ್ಟರು, ಆದರೆ ನಂತರದಲ್ಲಿ ಹಿಂಜರಿದುಬಿಟ್ಟರು (ಯೋಹಾನ 6:6). ನನ್ನ ವಾಕ್ಯಗಳಲ್ಲಿ ನೆಲೆಗೊಂಡಿರುವವಳೇ ನಿಜವಾದ ಶಿಷ್ಯೆ ಎಂದು ಯೇಸು ಕ್ರಿಸ್ತನು ಪ್ರಕಟಿಸಿದನು. ಆತನ ವಾಕ್ಯಗಳಲ್ಲಿ ಎಡಬಿಡದ ನಂಬಿಕೆ ಮತ್ತು ಅಭಿವೃದ್ಧಿ ಹೊಂದುವ ವಿಧೇಯತೆಯೇ ಯೇಸು ಕ್ರಿಸ್ತನ ಮೇಲಿರುವ ನಮ್ಮ ಪ್ರೀತಿಗೆ ಎದುರಾಗುವ ನಿಜವಾದ ಪರೀಕ್ಷೆಯಾಗಿದೆ.

ಬಿ. ಹೊಸದಾಗಿ ಹುಟ್ಟಿದ ಶಿಶುವು ಹಾಲಿಗಾಗಿ ಹಂಬಲಿಸುವ ಹಾಗೆ ಒಬ್ಬ ಶಿಷ್ಯೆಯು ದೇವರ ವಾಕ್ಯಗಳಿಗಾಗಿ ಹಂಬಲಿಸುತ್ತಿರುತ್ತಾಳೆ (1 ಪೇತ್ರ 2:2).

ಸಿ. ಒಬ್ಬ ಶಿಷ್ಯೆಯು ಜೀವಿಸಲು ದೇವರ ವಾಕ್ಯಗಳನ್ನು ಸೇವಿಸುತ್ತಿರುವವಳಾಗಿರಬೇಕು – ಆತ್ಮೀಕವಾಗಿ ಬೆಳೆಯಲು ಮತ್ತು ಸೈತಾನನನ್ನು ಸೋಲಿಸಲು. ದೇವರ ವಾಕ್ಯಗಳನ್ನು ಸೇವಿಸುವದರ ಮೂಲಕ ನಾವು ಯೇಸು ಕ್ರಿಸ್ತನನ್ನೇ ಸೇವಿಸುವವರಾಗಿರುತ್ತೇವೆ (ಮತ್ತಾ 4:4; ಯೋಹಾನ 6:35).

ಡಿ. ಯೇಸು ಕ್ರಿಸ್ತನ ಶಿಷ್ಯೆಯು ಆತನ ನೊಗವನ್ನು ಹೊತ್ತುಕೊಳ್ಳುತ್ತಾಳೆ ಮತ್ತು ಆತನ ಆಜ್ಞೆಗಳಿಗೆ ವಿಧೇಯಳಾಗುವದು ಹೇಗೆ ಹಾಗೂ ಆತನ ವಾಕ್ಯಗಳಲ್ಲಿ ಪ್ರಕಟಪಡಿಸಲಾಗಿರುವ ಚಿತ್ತವನ್ನು ನೆರವೇರಿಸುವದು ಹೇಗೆ ಎಂಬ ಎರಡೂ ವಿಷಯಗಳನ್ನು ಕಲಿತುಕೊಳ್ಳುತ್ತಾಳೆ (ಮತ್ತಾ 11:29–30).

6. ನಿಜವಾದ ಶಿಷ್ಯೆಯು **ಪರಿಶುದ್ಧವಾಗಿ ಜೀವಿಸುವದರ ಮೂಲಕ ದೇವರನ್ನು ಮೆಚ್ಚಿಸಲು ಮುಂದಾಗುತ್ತಿರುತ್ತಾಳೆ** (1 ಪೇತ್ರ 1:15).

ಎ. ದೇವರು ಯೇಸು ಕ್ರಿಸ್ತನ ಶಿಷ್ಯೆಯರನ್ನು ಪರಿಶುದ್ಧರಾಗಿ ಜೀವಿಸಲು ಕರೆದಿದ್ದಾನೆ (1 ಥೆಸ 4:7).

ಬಿ. ನಮ್ಮ ರಕ್ಷಣೆಯ ಸಮಯದಲ್ಲಿ, ಕರ್ತನಾದ ಯೇಸು ಕ್ರಿಸ್ತನಲ್ಲಿ ನಮ್ಮನ್ನು ಪರಿಶುದ್ಧರನ್ನಾಗಿ ಮಾಡಿದ್ದಾನೆ ಮತ್ತು ಸತತವಾಗಿ ಶುದ್ಧೀಕರಿಸಲ್ಪಡುವದಕ್ಕಾಗಿ ಕರೆದಿದ್ದಾನೆ (1 ಕೊರಿ 1:2).

ಸಿ. **"ಪರಿಶುದ್ಧರು"** ಎಂಬ ಪದದ ಅರ್ಥ ನಾವು ನಮ್ಮ ಸುತ್ತಮುತ್ತ ವಾಸಿಸುವ ಅವಿಶ್ವಾಸಿಗಳ ಜೀವನ ಶೈಲಿಗಳಿಂದ ಬೇರ್ಪಡಿಸಲ್ಪಟ್ಟವರಾಗಿದ್ದೇವೆ, ಮತ್ತು ದೇವರಿಗೆ ಹಾಗೂ ಆತನ ಕಾರ್ಯಗಳಿಗೆ ಸಮರ್ಪಿತರಾಗಿದ್ದೇವೆ. ಒಬ್ಬ ಶಿಷ್ಯೆಯು ಶಿಷ್ಯೆಯರಲ್ಲದವರಿಗಿಂತಲೂ ವಿಭಿನ್ನವಾದವಳಾಗಿರಬೇಕು; ಆಕೆಯು ಪರಿಶುದ್ಧನಾದ ದೇವರಿಗಾಗಿ ಜೀವಿಸುವ ಸಮರ್ಪಣೆಯುಳ್ಳವಳಾಗಿರುತ್ತಾಳೆ.

ಡಿ. ಪರಿಶುದ್ಧತೆಯು ಶಿಷ್ಯೆಯ ಜೀವಿತದಲ್ಲಿ ದೇವರ ರಕ್ಷಣೆ ಮತ್ತು ಆತನ ಪ್ರಸನ್ನತೆಗೆ ಸಾಕ್ಷಿಯಾಗಿದೆ (1 ಯೋಹಾನ 3:6–9).

7. ನಿಜವಾದ ಶಿಷ್ಯೆಯು **ಇತರ ಶಿಷ್ಯೆಯರನ್ನು ಪ್ರೀತಿಸುವವಳಾಗಿರುತ್ತಾಳೆ**

(ಯೋಹಾನ 13:34–35).

ಎ. ಸಹೋದರಿಯರ ಪ್ರೀತಿಯು ಮೊದಲನೆ ಶತಮಾನದ ಕ್ರೈಸ್ತರ ಅತ್ಯಂತ ವಿಶಿಷ್ಟವಾದ ಗುಣವಾಗಿತ್ತು, ಆದ್ದರಿಂದಲೇ ಚರಿತ್ರೆಕಾರನೊಬ್ಬನು ಅವರ ಪ್ರೀತಿಯನ್ನು ವಿವರಿಸುತ್ತಾ ಹೇಳಿರುವದೇನಂದರೆ, "ಅವರು ಪರಸ್ಪರ ಪರಿಚಿತರಾಗುವದಕ್ಕೆ ಮೊದಲೇ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು." ಅವರು **ಯೇಸು ಕ್ರಿಸ್ತನ ಹಿಂಬಾಲಕರಾಗಿದ್ದರು ಎಂಬದಕ್ಕೆ ಇದುವೇ ಸಾಕ್ಷಿಯಾಗಿದೆ.**

ಬಿ. **ತಂದೆಯಾದ ದೇವರ ಮಹದಾದ ಪ್ರೀತಿಯು ಯೇಸು ಕ್ರಿಸ್ತನಲ್ಲಿ ವ್ಯಕ್ತವಾಗಿರುವದೇ, ಶಿಷ್ಯೆಯರು ಒಬ್ಬರನ್ನೊಬ್ಬರು ಪ್ರೀತಿಸಲು ಕಾರಣ.**

ಸಿ. ಯೇಸುವೇ ಕ್ರಿಸ್ತನಾಗಿದ್ದಾನೆಂಬದನ್ನು ನಂಬುವ ಪ್ರತಿಯೊಬ್ಬಳೂ ದೇವರ ಮಗಳಾಗಿದ್ದಾಳೆ. ಮತ್ತು ತಂದೆಯನ್ನು ಪ್ರೀತಿಸುವ ಪ್ರತಿಯೊಬ್ಬರೂ ಆತನ ಮಕ್ಕಳನ್ನೂ ಪ್ರೀತಿಸುತ್ತಾರೆ (1 ಯೋಹಾನ 5:1).

ಡಿ. ಗ್ರೀಕ್ ಭಾಷೆಯಲ್ಲಿ "ಪ್ರೀತಿ" ಎಂಬ ಪದಕ್ಕೆ ಮೂರು ಪದಗಳನ್ನು ಕೊಡಲಾಗಿದೆ "ಎರೋಸ್, ಫಿಲಿಯೋ, ಅಗಾಫೆ." 1 ಯೋಹಾನದಲ್ಲಿ ಉಪಯೋಗಿಸಲಾಗಿರುವ "ಅಗಾಫೆ" ಎಂದರೆ ನಿಸ್ವಾರ್ಥವಾದ ಪ್ರೀತಿ. ಶಿಷ್ಯೆಯರು ಒಬ್ಬರನ್ನೊಬ್ಬರು ದೇವರ ನಿಸ್ವಾರ್ಥವಾದ ಪ್ರೀತಿಯಂತೆಯೇ ಪ್ರೀತಿಸಬೇಕು (1 ಯೋಹಾನ 3:16–18). **ಭದ್ರತೆಯ ಭಾವವನ್ನು ಹುಟ್ಟಿಸುವದರ ಮೂಲಕ ಇದು ನಮ್ಮನ್ನು, ನಿಜವಾದ ಅನ್ಯೋನ್ಯತೆಗೆ ನಡೆಸುತ್ತದೆ.**

8. ನಿಜವಾದ ಶಿಷ್ಯೆಯು **ಹೆಚ್ಚು ಫಲವನ್ನು ಕೊಡುವವಳಾಗಿರುತ್ತಾಳೆ** (ಯೋಹಾನ 15:5).

   ಎ. ದೇವರು ತೋಟಗಾರನಾಗಿದ್ದಾನೆ, ಯೇಸು ಕ್ರಿಸ್ತನು ದ್ರಾಕ್ಷೆಬಳ್ಳಿಯಾಗಿದ್ದಾನೆ ಮತ್ತು ಶಿಷ್ಯೆಯರು ಫಲ ಕೊಡುವ ಕೊಂಬೆಗಳಾಗಿದ್ದಾರೆ. ಫಲಕೊಡದೆ ಇರುವವರನ್ನು ಕಡಿದು ಬೆಂಕಿಯಲ್ಲಿ ಸುಡಲಾಗುತ್ತದೆ. ದೇವರಿಗಾಗಿ ಫಲ ಕೊಡುವದು ಕ್ರೈಸ್ತೀಯ ಶಿಷ್ಯತ್ವದ ನಿಜವಾದ ಪರೀಕ್ಷೆಯಾಗಿದೆ (ಯೋಹಾನ 15:1–2,6).

   ಬಿ. **"ಹೆಚ್ಚು ಫಲ ಕೊಡಿರಿ"** ಎಂದರೆ ಒಳ್ಳೇ ಕಾಯಗಳಲ್ಲಿ ಫಲಭರಿತರಾಗಿರುವದು ಮತ್ತು ಯಾವಾಗಲೂ ದೇವರ ಕಾರ್ಯಗಳಲ್ಲಿ ನಿರತರಾಗಿರುವದು. **ನಮ್ಮ ನಂಬಿಕೆ, ರೂಪಾಂತರ, ನಿತ್ಯವಾದ ರಕ್ಷಣೆ ಇವೆಲ್ಲವೂ ನಮ್ಮ ಪುಣ್ಯಕಾರ್ಯಗಳಿಂದ ದೊರೆತಿರುವದಲ್ಲ ಬದಲಾಗಿ ದೇವರು ಕೊಟ್ಟಿರುವ ಉಚಿತಾರ್ಥವಾದ ಕೃಪಾವರವಾಗಿದೆ.** ಏನೇಆದರೂ, ನಮ್ಮ ನೂತನ ಜನನ ಮೂಲಕವಾಗಿ, ಆತನು ಪೂರ್ವಭಾವಿಯಾಗಿ ನಮಗಾಗಿ ಸಿದ್ಧಮಾಡಿಟ್ಟಿರುವ ಒಳ್ಳೇ ಕಾರ್ಯಗಳನ್ನು ಮಾಡುವದಕ್ಕಾಗಿ ದೇವರು ನಮ್ಮನ್ನು ಯೇಸು ಕ್ರಿಸ್ತನಲ್ಲಿ ಸೃಷ್ಟಿಸಿದ್ದಾನೆ (ಎಫೆಸ 2:10).

   ಸಿ. ಶಿಷ್ಯೆಯು ಪವಿತ್ರಾತ್ಮನ ಫಲಗಳನ್ನು ವ್ಯಕ್ತಪಡಿಸುವವಳಾಗಿರುತ್ತಾಳೆ (ಗಲಾತ್ಯ 5:22–25).

   ಡಿ. ಶಿಷ್ಯೆಯರು ಶಿಷ್ಯೆಯರನ್ನೇ ಕೊಡುತ್ತಾರೆ–ಇತರರನ್ನು ಯೇಸು ಕ್ರಿಸ್ತನ ಕಡೆಗೆ ನಡೆಸುತ್ತಾರೆ ಮತ್ತು ಆಜ್ಞಾಪಿಸಿರುವದನ್ನೆಲ್ಲಾ ಕಾಪಾಡಿಕೊಳ್ಳಲು ಉಪದೇಶ ಮಾಡುತ್ತಾರೆ (ಮತ್ತಾ 28:18–20).

**ಮುಕ್ತಾಯ**

1. ಯೇಸು ಕ್ರಿಸ್ತನು ನಮ್ಮನ್ನು ತನ್ನ ಶಿಷ್ಯೆಯರಾಗಿರಲು–ಮತ್ತು ಶಿಷ್ಯೆಯರನ್ನು ಮಾಡಲು ಕರೆದಿದ್ದಾನೆ. ದುಃಖಕರವಾದ ಸಂಗತಿ ಎಂದರೆ ಎಲ್ಲಾ "ಕ್ರೈಸ್ತೆಯರು" ಶಿಷ್ಯೆಯರಲ್ಲ.

2. ಶಿಷ್ಯೆಯು ಶಿಸ್ತನ್ನು ಪಾಲಿಸುವವಳಾಗಿರುತ್ತಾಳೆ; ಇದರ ಅರ್ಥ ಆಕೆಯು ಒಬ್ಬ ವಿಶ್ವಾಸಿಯಾಗಿ ತನ್ನ ಮನಸ್ಸಿಗೆ ಬಂದದ್ದನ್ನು ಮಾಡುವವಳಾಗಿರದೆ, ತನ್ನ ಯಜಮಾನಿಗೆ ಬೇಕಾದವುಗಳನ್ನು ಮಾಡುತ್ತಾಳೆ.

3. ತನ್ನನ್ನು ಕ್ರಯಕ್ಕೆ ಕೊಂಡುಕೊಳ್ಳಲಾಗಿದೆ, ತನ್ನ ಜೀವಿತವು ತನ್ನ ಸ್ವಂತ ಸ್ವತ್ತಲ್ಲ ಅದು ದೇವರದ್ದು ಎಂಬದಾಗಿ ಆಕೆಗೆ ಗೊತ್ತಿರುತ್ತದೆ.

4. ಯೇಸು ಕ್ರಿಸ್ತನೇ ಶಿಷ್ಯೆಯ ಜೀವಿತದಲ್ಲಿ ಕರ್ತನಾಗಿರುತ್ತಾನೆ ಅಂದರೆ ಆಕೆಯ ಜೀವಿತದ ಒಡೆಯನು ಮತ್ತು ಯಜಮಾನನಾಗಿರುತ್ತಾನೆ.

**ಚರ್ಚಾ ಪ್ರಶ್ನೆಗಳು**

1. ನಿಜವಾದ ಶಿಷ್ಯೆಯು ಬೇರೆ ಎಲ್ಲಾ ಪ್ರೀತಿಗಳಿಗಿಂತಲೂ ದೇವರನ್ನು ಪ್ರೀತಿಸುತ್ತಾಳೆ. ದೇವರಿಗಿಂತ ಬೇರೆಯವುಗಳನ್ನು ಹೆಚ್ಚಾಗಿ ಪ್ರೀತಿಸುವಂತೆ ಶಿಷ್ಯಳಿಗೆ ಎದುರಾಗುವ ಶೋಧನೆಗಳಾವುವು?

2. ನೀವು ಮಾಡುವ ಯಾವ ಕಾರ್ಯಗಳು ನೀವು ದೇವರನ್ನು ಪ್ರೀತಿಸುತ್ತೀರ ಎಂಬದನ್ನು ವ್ಯಕ್ತಪಡಿಸುತ್ತವೆ? ನೀವು ಜನರನ್ನು ಪ್ರೀತಿಸುತ್ತೀರ ಎಂಬದು ವ್ಯಕ್ತವಾಗುವಂತೆ ನೀವು ಯಾವ ಕಾರ್ಯಗಳನ್ನು ಮಾಡುತ್ತಿದ್ದೀರ?

3. ಯಾರನ್ನಾದರೂ ಶಿಷ್ಯೆಯನ್ನಾಗಿ ಮಾಡುವದರ ಮೂಲಕ ನೀವು ಫಲಕೊಡುತ್ತಿದ್ದೀರ? ನೀವು ಯಾರೊಂದಿಗಾದರೂ ಸಾಕ್ಷಿ ಹಂಚಿಕೊಂಡು ಕಳೆದ ಒಂದು ತಿಂಗಳಲ್ಲಿ ಕರ್ತನ ಕಡೆಗೆ ನಡೆಸಿದ್ದೀರ? ಒಂದುವೇಳೆ ಇಲ್ಲವಾದರೆ ಯಾಕೆ?

**ಪ್ರಾರ್ಥನೆ**

*ಪ್ರಿಯ ತಂದೆಯೇ, ನನ್ನ ಕರ್ತನಾದ ಯೇಸು ಕ್ರಿಸ್ತನ ನಿಜವಾದ ಶಿಷ್ಯೆಯಾಗಿ, ಆತನನ್ನು ಅತ್ಯಧಿಕವಾಗಿ ಪ್ರೀತಿಸುತ್ತಾ, ನನ್ನನ್ನು ನಿರಾಕರಿಸಿಕೊಂಡು ಆತನನ್ನು ಪೂರ್ಣಹೃದಯದಿಂದ ಹಿಂಬಾಲಿಸುವಂತೆ ನನಗೆ ಸಹಾಯ ಮಾಡು. ಆತನ ನಿಮಿತ್ತ ಎಲ್ಲವನ್ನೂ, ಅಂದರೆ ನನ್ನ ಜೀವಿತವನ್ನು ಆತನಿಗಾಗಿ ತ್ಯಾಗಮಾಡುತ್ತಾ, ಆತನ ವಾಕ್ಯಗಳಲ್ಲಿ ನೆಲೆಗೊಂಡು ಹೆಚ್ಚು ಫಲ ಕೊಡುವವಳಾಗಿರಬೇಕು. ಆಮೆನ್.*

## ನೋಟ್ಸ್

# 3 ಬೆಥಾನ್ಯದ ಮರಿಯಳು: ಒಳ್ಳೆಯ ಶಿಷ್ಯೆ

**ಕೀ ವಚನ: ಯೋಹಾನ 12:3**

"ಆಗ ಮರಿಯಳು ಬಹು ಬೆಲೆಯುಳ್ಳ ಅಚ್ಚ ಜಟಾಮಾಂಸಿ ತೈಲವನ್ನು ಒಂದು ಸೇರಷ್ಟು ತಂದು ಯೇಸುವಿನ ಪಾದಕ್ಕೆ ಹಚ್ಚಿ ತನ್ನ ತಲೆಕೂದಲಿನಿಂದ ಆತನ ಪಾದಗಳನ್ನು ಒರೆಸಿದಳು. ಆ ತೈಲದ ಪರಿಮಳವು ಮನೆಯಲ್ಲೆಲ್ಲಾ ತುಂಬಿಕೊಂಡಿತು."

**ಬೆಥಾನ್ಯದ ಮರಿಯಳ ಹೆಸರು ಬರೆಯಲ್ಪಟ್ಟಿರುವ ಕೆಲವು ವಾಕ್ಯಗಳು:** ಲೂಕ 10:38–42; ಯೋಹಾನ 11:1–45; ಯೋಹಾನ 12:1–8.

**ಬೆಥಾನ್ಯದ ಮರಿಯಳ ಹೆಸರು ಬರೆಯಲ್ಪಡದೇನೇ ಆತನ ಬಗ್ಗೆ ಹೇಳುವ ವಾಕ್ಯಗಳು:** ಮತ್ತಾಯ 26:6–13; ಮಾರ್ಕ 14:3–9.

**ಒಳ್ಳೆಯ ಶಿಷ್ಯೆಯರಾಗುವದು ಹೇಗೆ ಎಂದು ಬೆಥಾನ್ಯದ ಮರಿಯಳು ತೋರಿಸಿಕೊಟ್ಟಿರುವ ಏಳು ಮಾರ್ಗಗಳು:**

1. **ಮರಿಯಳು ಯೇಸು ಕ್ರಿಸ್ತನೊಂದಿಗೆ ವೈಯಕ್ತಿಕವಾದ ಸ್ನೇಹ ಹೊಂದಿದ್ದಳು.**

   ಎ. ಮರಿಯಳು, ಅವಳ ಸಹೋದರಿ ಮಾರ್ಥಳು ಮತ್ತು ಅವರ ಸಹೋದರನಾದ ಲಾಜ಼ರನು, ಯೇಸು ಕ್ರಿಸ್ತನನ್ನು ತಮ್ಮ ಮನೆಗೆ ಸ್ವಾಗತಿಸಿದರು (ಲೂಕ 10:38–39).

   ಬಿ. ಮರಿಯಳಿಗೆ ಯೇಸು ಕ್ರಿಸ್ತನಲ್ಲಿ ಭರವಸೆಯಿತ್ತು. ಯೇಸು ತಮಗೆ ಸಹಾಯ ಮಾಡುವ ತಮ್ಮ ನಿಜವಾದ ಸ್ನೇಹಿತನು ಎಂದು ಮರಿಯಳು ನಂಬಿದ್ದಳು. ತನ್ನ ಸಹೋದರನ ಮರಣದ ಸಮಯದಲ್ಲಿ ಯೇಸು ಕ್ರಿಸ್ತನು ಇದ್ದಿದ್ದರೆ ಖಂಡಿತವಾಗಿಯೂ ಸಹಾಯ ಮಾಡುತ್ತಿದ್ದನು ಎಂಬ ನಿಶ್ಚಯ ಅವಳಿಗಿತ್ತು (ಯೋಹಾನ 11:32).

   ಸಿ. ಯೇಸು ಕ್ರಿಸ್ತನು ಸರ್ವಶಕ್ತನು, ತನ್ನ ಸಹೋದರ ಮರಣವನ್ನು ಸಹ ತಪ್ಪಿಸುವಷ್ಟು ಶಕ್ತನು ಎಂಬದು ಮರಿಯಳ ನಂಬಿಕೆಯಾಗಿತ್ತು (ಯೋಹಾನ 11:32). ಯೇಸು ಕ್ರಿಸ್ತನನ್ನು ವೈಯಕ್ತಿಕವಾಗಿ ಅರಿತುಕೊಳ್ಳುವದೇ ಶಿಷ್ಯೆಯಾಗಲು ಬೇಕಾಗಿರುವ ಮೊದಲನೆಯ ಅರ್ಹತೆ. ನಾವು ನಮ್ಮ

ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಯೇಸು ಕ್ರಿಸ್ತನನ್ನು ನಮ್ಮ ಜೀವಿತಗಳೊಳಗೆ ಸ್ವಾಗತಿಸಿಕೊಳ್ಳಬೇಕು. ಆತನಲ್ಲಿ ಭರವಸೆಯನ್ನಿಡುವದು ಎರಡನೆಯ ಅರ್ಹತೆ.

2. **ಮರಿಯಳು ಯೇಸು ಕ್ರಿಸ್ತನ ಪಾದಗಳ ಬಳಿ ಸ್ಥಳವನ್ನು ಆರಿಸಿಕೊಂಡಳು.**

ಎ. ಯೇಸು ಕ್ರಿಸ್ತನು ಕಲಿಸುವ ವಿಷಯವನ್ನು ಕೇಳಿಸಿಕೊಳ್ಳುತ್ತಾ ಮರಿಯಳು ಆತನ ಪಾದಗಳ ಬಳಿಯಲ್ಲಿ ಕುಳಿತುಕೊಂಡಳು. ಶಿಷ್ಯೆಯು ದೇವರ ವಾಕ್ಯಗಳಾಗಿರುವ ಸತ್ಯವೇದವನ್ನು ಓದುತ್ತಾಳೆ, ಪ್ರಾರ್ಥನೆ ಮಾಡುತ್ತಾಳೆ ಮತ್ತು ದೇವರ ಕೊಡುವ ಸೂಚನೆಗಳನ್ನು ಕೇಳಿಸಿಕೊಳ್ಳುತ್ತಾಳೆ (ಲೂಕ 10:39).

ಬಿ. ಮರಿಯಳು ಯೇಸು ಕ್ರಿಸ್ತನನ್ನು ತನ್ನ ಸಹೋದರನಾದ ಲಾಜರನ ಸಮಾಧಿಯ ಹತ್ತಿರ ಸಂಧಿಸಿದಾಗ ದೀನತೆಯೊಡನೆ ಆತನ ಪಾದಗಳಿಗೆ ಅಡ್ಡಬಿದ್ದಳು. ದೇವರು ಸರ್ವಶಕ್ತನು ಎಂಬದನ್ನು ಮರಿಯಳು ನಂಬಿದಳು ಮತ್ತು ದೀನತೆಯಿಂದ ಸಹಾಯವನ್ನು ಬೇಡಿಕೊಂಡಳು. ಒಬ್ಬ ಶಿಷ್ಯೆಯು ತನ್ನ ಪ್ರತಿಯೊಂದು ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಯೇಸು ಕ್ರಿಸ್ತನ ಪಾದಗಳ ಬಳಿಗೆ ಬರುತ್ತಾಳೆ (ಯೋಹಾನ 11:32).

ಸಿ. ಮರಿಯಳು ಯೇಸು ಕ್ರಿಸ್ತನನ್ನು ತೈಲದಿಂದ ಅಭಿಷೇಕಿಸಿದಳು ಮತ್ತು ಆತನ ಪಾದಗಳ ಮೇಲಿನ ತೈಲವನ್ನು ತನ್ನ ತಲೆಕೂದಲಿನಿಂದ ಒರೆಸಿದಳು (ಯೋಹಾನ 12:3).

3. **ಮರಿಯಳು ತನ್ನ ನಂಬಿಕೆಗನುಸಾರವಾಗಿ ಅನುದಿನ ಜೀವಿಸುತ್ತಿದ್ದಳು.**

ಎ. ಮರಿಯಳು ಕುಟುಂಬದ ಸದಸ್ಯೆಯಾಗಿದ್ದು, ತನ್ನ ಅನುದಿನದ ಜೀವಿತದಲ್ಲಿ ಆತನಿಗಾಗಿ ಜೀವಿಸುತ್ತಿದ್ದಲು (ಲೂಕ 10:38–42).

ಬಿ. ಮರಿಯಳು ಯೇಸು ಕ್ರಿಸ್ತನ ನಿಜವಾದ ಹಿಂಬಾಲಕಳಾಗಿದ್ದರಿಂದ ಆಕೆಯ ಸ್ವಂತ ಕುಟುಂಬದಿಂದಲೂ ಯಾರೂ ಆಕೆಯನ್ನು ದೂಷಿಸಲಿಲ್ಲ (ಲೂಕ 10:38–40).

ಸಿ. ಮರಿಯಳು ಯೇಸು ಕ್ರಿಸ್ತನ ನಿಜವಾದ ಹಿಂಬಾಲಕಳಾಗಿದ್ದರೂ ಜೀವಿತದಲ್ಲಿ ಎದುರಾಗುವ ಕಷ್ಟಗಳಿಂದ ತಪ್ಪಿಸಿಕೊಳ್ಳಲಾಗಲಿಲ್ಲ (ಲಾಜರನ ಕಥೆಯನ್ನು ನೋಡಿರಿ, ಯೋಹಾನ 11:1–44).

ಡಿ. ಶಿಷ್ಯೆಯಾಗಿರುವದಿಂದ ಸಾರ್ವಜನಿಕ ಟೀಕೆಗಳಿಂದ ತಪ್ಪಿಸಿಕೊಳ್ಳಲಾಗಲಿಲ್ಲ (ಮತ್ತಾ 26:8–9; ಮಾರ್ಕ 14:4–5; ಯೋಹಾನ 12:4–6). ಶಿಷ್ಯೆಯು ತನ್ನನ್ನೇ ನಿರಾಕರಿಸಿಕೊಳ್ಳುತ್ತಾಳೆ ಮತ್ತು ಆತನಲ್ಲಿ ಪರಿಪೂರ್ಣ ನಂಬಿಕೆಯನ್ನಿಟ್ಟು ತನ್ನ ಅನುದಿನದ ಜೀವಿತದಲ್ಲಿ ದೇವರ ಚಿತ್ತವನ್ನು ಅಂಗೀಕರಿಸಿಕೊಳ್ಳುತ್ತಾಳೆ.

4. **ಮರಿಯಳನ್ನು ಅವಳ ಕ್ರಿಯೆಗಳಿಗಾಗಿ ಗುರುತಿಸಲಾಗುತ್ತದೆ.**

ಎ. ಯೇಸು ಕ್ರಿಸ್ತನು ತನ್ನನ್ನು ಕರೆಯುತ್ತಿದ್ದಾನೆಂಬದನ್ನು ಮರಿಯಳು ಕೇಳಿಸಿಕೊಂಡ ಕೂಡಲೇ, ಆತನಿದ್ದ ಸ್ಥಳಕ್ಕೆ ಓಡಿ ಹೋದಳು. ತನಗಾಗಿರುವ ಯೇಸು ಕ್ರಿಸ್ತನ ಚಿತ್ತ ಮತ್ತು ಬಯಕೆಯನ್ನು ಶಿಷ್ಯೆಯು ತಿಳಿದುಕೊಳ್ಳುವ ಕೂಡಲೇ ವಿಧೇಯಳಾಗುತ್ತಾಳೆ (ಯೋಹಾನ 11:28–29).

ಬಿ. ಮರಿಯಳು ಯೇಸು ಕ್ರಿಸ್ತನಿಗೆ ತನ್ನಲ್ಲಿದ್ದ ಉತ್ತಮವಾದ, ಅತ್ಯಂತ ಬೆಲೆಬಾಳುವ ಕೊಡುಗೆಯನ್ನು ಕೊಟ್ಟಳು. ಯೇಸು ಕ್ರಿಸ್ತನು ನಮಗಾಗಿ ಎಣಿಸಲಾಗದಷ್ಟು ಕಾರ್ಯಗಳನ್ನು ಮಾಡಿದ್ದಾನೆ; ಆತನು ನಮ್ಮ ಅತ್ಯುತ್ತಮವಾದ ಕಾರ್ಯಗಳನ್ನು ಮತ್ತು ಪರಿಶ್ರಮಗಳನ್ನು ಎದುರುನೋಡುವವನಾಗಿದ್ದಾನೆ (ಯೋಹಾನ 12:3).

ಸಿ. ಮರಿಯಳು ಯೇಸು ಕ್ರಿಸ್ತನಿಗೆ ಕಾಣಿಕೆಯಾಗಿ ನೀಡಿದ ಅತ್ಯಂತ ಬೆಲೆಬಾಳುವ ತೈಲವು, ಅವಳನ್ನು ಯೇಸು ಕ್ರಿಸ್ತನ ಸೇವೆಗಾಗಿ ತನ್ನನ್ನೇ ಸಮರ್ಪಿಸುವ ಹೊಸ ಹಂತಕ್ಕೆ ತಲುಪಿಸಿತು. ಶಿಷ್ಯೆಯರು ತಾವಾಗಿಯೇ ಕೊಡುವವರಾಗಿರುತ್ತಾರೆ. ಪ್ರೀತಿ, ಭಯಭಕ್ತಿ, ಮತ್ತು ಯೇಸು ಕ್ರಿಸ್ತನ ಸೇವೆಗಾಗಿ ಹಚ್ಚಬಹುದಾದ ಅಮೂಲ್ಯವಾದ ಸುಗಂಧ ತೈಲವು ನಾವೇ ಆಗಿದ್ದೇವೆ (ಯೋಹಾನ 12:3).

ಡಿ. ಮರಿಯಳು ಭರಣಿಯನ್ನು ಒಡೆದು ಪರಿಮಳ ತೈಲವನ್ನು ಯೇಸು ಕ್ರಿಸ್ತನಿಗೆ ಹಚ್ಚಿದಳು. ಮರಿಯಳ ಹಾಗೆ ಶಿಷ್ಯೆಯರು ತಮ್ಮ ಜೀವಿತಗಳನ್ನು ತೆರೆದು ತಮ್ಮನ್ನೇ ಯೇಸು ಕ್ರಿಸ್ತನಿಗೆ ಒಪ್ಪಿಸಿಕೊಡುತ್ತಾರೆ (ಮಾರ್ಕ 14:3).

5. **ಮರಿಯಳನ್ನು ಅವಳ ಫಲಭರಿತವಾದ ಜೀವಿತಕ್ಕಾಗಿ ಗುರುತಿಸಲಾಗುತ್ತದೆ.**

ಎ. ಮರಿಯಳ ಸ್ನೇಹಿತೆಯರು ಆಕೆಯನ್ನು ಸಂಧಿಸಲು ಬಂದಾಗ ಯೇಸು ಕ್ರಿಸ್ತನನ್ನು ಸಂಧಿಸಿದರು. ಯೇಸು ಕ್ರಿಸ್ತನ ಮಾಡಿದ ಕಾರ್ಯಗಳನ್ನು ನೋಡಿದಾಗ, ಅವರು ಆತನಲ್ಲಿ ನಂಬಿಕೆಯನ್ನಿಡುವವರಾದರು. ಶಿಷ್ಯೆಯು ಆತ್ಮಗಳನ್ನು–ಸಂಪಾದಿಸುವವಳಾಗಿರುತ್ತಾಳೆ (ಯೋಹಾನ 11:45).

ಬಿ. ಮರಿಯಳು ಪರಿಮಳ ತೈಲವನ್ನು ಯೇಸು ಕ್ರಿಸ್ತನ ಮೇಲೆ ಹೊಯ್ದಾಗ, ಸುಗಂಧ ಸುವಾಸನೆಯು ಮನೆಯನ್ನೆಲ್ಲಾ ತುಂಬಿಕೊಂಡಿತು (ಯೋಹಾನ 12:3). ಶಿಷ್ಯೆಯ ಜೀವನ ಶೈಲಿಯು ದೇವರ ಪವಿತ್ರಾತ್ಮನ ಸುಮಧುರವಾದ ಫಲಗಳಾದ–ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ (ಗಲಾ 5:22–23) ಯನ್ನು ವ್ಯಕ್ತಪಡಿಸುತ್ತದೆ.

**6. ಯೇಸು ಕ್ರಿಸ್ತನು ಮರಿಯಳಿಗೆ ಕೊಟ್ಟ ಪ್ರತ್ಯುತ್ತರಕ್ಕಾಗಿ ಅವಳನ್ನು ಗುರುತಿಸಲಾಗುತ್ತದೆ.**

ಎ. ಮರಿಯಳ ಸಹೋದರಿಯಾದ ಮಾರ್ಥಳು ಮರಿಯಳನ್ನು ಟೀಕಿಸಿದಾಗ, ಯೇಸು ಕ್ರಿಸ್ತನು ಮರಿಯಳ ಪರ ಮಾತನಾಡಿದನು (ಲೂಕ 10:42).

ಬಿ. ಆಕೆಯ ಸಹೋದರನ ಮರಣದ ನಂತರ ಯೇಸು ಕ್ರಿಸ್ತನು ಬೆಥಾನ್ಯಕ್ಕೆ ಬಂದಾಗ, ಆಕೆಯನ್ನು ನೋಡಬೇಕು ಎಂದು ಹೇಳಿದನು (ಯೋಹಾನ 11:28).

ಸಿ. ಮರಿಯಳ ದುಃಖವನ್ನು ಕಂಡಾಗ, ಆತನು ಮನಮರುಗಿದನು. ಆತನೂ ಆಕೆಯೊಂದಿಗೆ ಕಣ್ಣೀರಿಟ್ಟನು (ಯೋಹಾನ 11:33,35).

ಡಿ. ಲಾಜರನ ಮರಣದ ನಿಮಿತ್ತ ಮರಿಯಳು ಮತ್ತು ಆತನ ಕುಟುಂಬದವರು ಶೋಕಸಾಗರದಲ್ಲಿದ್ದಾಗ, ಆತನನ್ನು ಬದುಕಿಸುವುದರ ಮೂಲಕ ಯೇಸು ಕ್ರಿಸ್ತನು ಅವರನ್ನು ಸಂತೈಸಿದನು (ಯೋಹಾನ 11:38–44).

ಇ. ಅತ್ಯಂತ ಬೆಲೆಬಾಳುವ ಪರಿಮಳ ತೈಲವನ್ನು ಹಚ್ಚಿದ್ದರಿಂದ ಮರಿಯಳು ಟೀಕೆಗೊಳಗಾದಾಗ, ಯೇಸು ಕ್ರಿಸ್ತನು ಆಕೆಯ ಪರವಾಗಿ ಮಾತನಾಡಿದನು (ಯೋಹಾನ 12:7–8).

ಎಫ್. ಮರಿಯಳು ಮತ್ತು ಆಕೆಯ ಸಹೋದರಿಯಾದ ಮಾರ್ಥಳು ಯೇಸು ಕ್ರಿಸ್ತನಿಗೆ ತಮ್ಮ ಮನೆಯ ಬಾಗಿಲನ್ನು ತೆರೆದಾಗ, ಆತನು ಸಂತೋಷವಾಗಿ ಅಂಗೀಕರಿಸಿಕೊಂಡನು (ಲೂಕ 10:38–39).

- ಯೇಸು ಕ್ರಿಸ್ತನು ನಮ್ಮ ಉಡುಗೊರೆಗಳನ್ನು ಆನಂದದಿಂದ ಸ್ವೀಕರಿಸಿಕೊಳ್ಳುತ್ತಾನೆ (ಯೋಹಾನ 12:2).
- ಯೇಸು ಕ್ರಿಸ್ತನು ನಮ್ಮ ಸೇವಾ ಉಡುಗೊರೆಗಳನ್ನು, ತನ್ನ ಪ್ರಸನ್ನತೆಯಿಂದ ಅಭಿನಂದಿಸುವದರ ಹಾಗೂ ಆಶೀರ್ವಾದವನ್ನು ಸುರಿಸುವದರ ಮೂಲಕ ಸ್ವೀಕರಿಸಿಕೊಳ್ಳುತ್ತಾನೆ (ಮಾರ್ಕ 14:8; ಯೋಹಾನ 12:2).
- ಯೇಸು ಕ್ರಿಸ್ತನು ತನ್ನ ಶಿಷ್ಯೆಯರ ಸ್ನೇಹವನ್ನು ಎದುರುನೋಡುತ್ತಾನೆ (ಯೋಹಾನ 11:28).
- ಯೇಸು ಕ್ರಿಸ್ತನು ತನ್ನನ್ನು ಪ್ರೀತಿಸುವವರೊಂದಿಗೆ ಅನ್ಯೋನ್ಯತೆಯನ್ನು ಬಯಸುತ್ತಾನೆ (ಲೂಕ 10:38).

7. **ಮರಿಯಳ ಜೀವಿತದಲ್ಲಿ ಯೇಸು ಕ್ರಿಸ್ತನ ನಂಬಿಗಸ್ಥಿಕೆಗಾಗಿ ಅವಳನ್ನು ಗುರುತಿಸಲಾಗುತ್ತದೆ.**

   ಎ. ಮರಿಯಳ ಆರಾಧನಾ ವಿಧಾನವನ್ನು ತಪ್ಪಾಗಿ ಅರ್ಥಿಸಿಕೊಂಡು ಅವಳನ್ನು ಕಠೋರವಾಗಿ ಟೀಕಿಸಲಾಯಿತು. ನಡೆಯುತ್ತಿದ್ದ ಘಟನೆಯನ್ನು ವೀಕ್ಷಿಸುತ್ತಿದ್ದ ಯೇಸು ಕ್ರಿಸ್ತನು ಆಕೆಯ ಪರವಾಗಿ ಮಾತನಾಡಿದನು (ಮಾರ್ಕ 14:4–9).

   ಬಿ. ಮರಿಯಳು ಸನ್ಮಾನಕ್ಕೆ ಯೋಗ್ಯಳಾಗುವಳು ಎಂದು ಯೇಸು ಕ್ರಿಸ್ತನು ಮುಂದಾಗಿ ತಿಳಿಸಿದ ಮಾತು ನೆರವೇರಿತು. ಮರಿಯಳು ಕಥೆ ಮತ್ತು ಯೇಸು ಕ್ರಿಸ್ತನು ಮುಂದಾಗಿ ಹೇಳಿದ ಮಾತುಗಳನ್ನು ಸೇರಿಸುವಂತೆ ಪವಿತ್ರಾತ್ಮನು ಮತ್ತಾಯ ಮತ್ತು ಮಾರ್ಕನಿಗೆ ಸೂಚಿಸಿದನು. ಸತ್ಯವೇದವನ್ನು ಓದುವ ಪ್ರತಿಯೊಬ್ಬರೂ ಮರಿಯಳು ಮಾಡಿದ ಕಾರ್ಯವನ್ನು ಮತ್ತು ಅವಳ ಕ್ರಿಯೆಗೆ ಯೇಸು ಕ್ರಿಸ್ತನಿಗೆ ಸೂಚಿಸಿದ ಸಮ್ಮತಿಯನ್ನು ಓದುವವರಾಗಿದ್ದಾರೆ (ಮತ್ತಾ 26:13; ಮಾರ್ಕ 14:9). ಯೇಸು ಕ್ರಿಸ್ತನು ನಮಗಾಗಿಟ್ಟಿರುವ ಬಿಡುಗಡೆ ಅಥವಾ ನಮ್ಮ ಕೆಲಸಗಳಿಗಾಗಿ ಕೊಡುವ ಬಹುಮಾನವು ಶೀಘ್ರವಾಗಿ ಸಿಗುವದಿಲ್ಲ. ಪರಲೋಕದವರೆಗೂ ಒಂದುವೇಳೆ ಅದು ವಿಳಂಬವಾಗಬಹುದು. ಆದರೆ ಆತನು ತನ್ನ ಶಿಷ್ಯೆಯರನ್ನು ಖಂಡಿತವಾಗಿಯೂ ಸನ್ಮಾನಿಸುತ್ತಾನೆ ಮತ್ತು ಅವರಿಗೆ ಸಹಾಯ ಮಾಡುತ್ತಾನೆ (ಮತ್ತಾ 19:29).

**ಚರ್ಚಾ ಪ್ರಶ್ನೆಗಳು**

1. ಒಳ್ಳೆಯ ಶಿಷ್ಯೆಯಾಗಲು ಪಾಪಗಳಿಗಾಗಿ ಪಶ್ಚಾತ್ತಾಪಪಡುವ ಮತ್ತು ಕರ್ತನಾದ ಯೇಸು ಕ್ರಿಸ್ತನೊಂದಿಗೆ ವೈಯಕ್ತಿಕ ಸಂಬಂಧವನ್ನಿಟ್ಟುಕೊಳ್ಳುವ ಅವಶ್ಯಕತೆ ಯಾಕೆ? ಯೇಸು ಕ್ರಿಸ್ತನೊಂದಿಗೆ ವ್ಯಕ್ತಿಗತವಾಗಿ ಅನುದಿನ ಕೇವಲ ನಡೆಯುವದರ ಮೂಲಕವಾಗಿ ನಾನು ಯಾವ ವಿಷಯಗಳನ್ನು ಕಲಿತುಕೊಳ್ಳಬಹುದು?

2. ಬೆಥಾನ್ಯದ ಮರಿಯಳು ನಂಬಿಕೆಗನುಸಾರವಾಗಿ ಅನುದಿನದ ಜೀವಿತವನ್ನು ಜೀವಿಸಿದಳು. ನಿಯಂತ್ರಣ ಸಾಧಿಸಲು ಪಟ್ಟ ಪ್ರಯಾಸದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಾ ನನ್ನನ್ನೇ ಪರಿಪೂರ್ಣವಾಗಿ ಯೇಸು ಕ್ರಿಸ್ತನಿಗೆ ಒಪ್ಪಿಸಿದರೆ ನನ್ನ ಜೀವಿತದಲ್ಲಿರುವ ಸನ್ನಿವೇಷಗಳನ್ನು ವೃದ್ಧಿಪಡಿಸಿಕೊಳ್ಳಬಹುದೇ?

3. ನಾನು ಯೇಸು ಕ್ರಿಸ್ತನ ಶಿಷ್ಯೆಯಾಗಿದ್ದೇನೆ ಎಂಬದನ್ನು ನನ್ನ ಸುತ್ತಮುತ್ತಲಿರುವ ಜನರು ನೋಡುವಂತೆ ಯಾವ ನಿರ್ದಿಷ್ಟವಾದ ಕ್ರಿಯೆಗಳನ್ನು ನಾನು ಮಾಡಬೇಕು?

**ಪ್ರಾರ್ಥನೆ**

*ಪರಲೋಕದಲ್ಲಿರುವ ತಂದೆಯೇ, ಕರ್ತನಾದ ಯೇಸು ಕ್ರಿಸ್ತನು ಶರೀರಧಾರಿಯಾಗಿ ಈಗ ನಮ್ಮ ಮಧ್ಯದಲ್ಲಿ ಇಲ್ಲದಿರುವದರಿಂದ ಮರಿಯಳ ಹಾಗೆ ಸುಗಂಧ ತೈಲವನ್ನು ಹಚ್ಚಲು ಮತ್ತು ಆತನನ್ನು ಮುಟ್ಟಲು ನನ್ನಿಂದ ಸಾಧ್ಯವಿಲ್ಲ. ಆತನ ಶಿಷ್ಯೆಯಾಗಿ ನನ್ನ ಜೀವಿತದಿಂದ ದೀನತೆ ಮತ್ತು ಫಲಭರಿತತೆಯನ್ನು ಅತ್ಯುತ್ತಮವಾಗಿ ವ್ಯಕ್ತಪಡಿಸುವದು ಹೇಗೆ ಎಂಬದನ್ನು ನನಗೆ ಕಲಿಸು. ನನ್ನ ಸುತ್ತಮುತ್ತಲು ವಾಸಿಸುವವರು ಆತನ ಪ್ರಸನ್ನತೆಯನ್ನು ನನ್ನಲ್ಲಿ ಕಾಣುವಂತೆ ನಾನು ಹೇಗೆ ಜೀವಿಸಬೇಕೆಂಬದನ್ನು ನನಗೆ ತೋರಿಸು. ಆಮೆನ್.*



## ನೋಟ್ಸ್

# 4 ಶಿಷ್ಯೆಯ ಜೀವನ ಶೈಲಿ

**ಕೀ ವಚನ: ಯೋಹಾನ 15:5**

"ನಾನೇ ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು..."

**ಪರಿಚಯ**

1. ಪ್ರತಿಯೊಂದು ಮರದ ಗುಣವನ್ನು ಅದರ ಫಲವು ತೋರಿಸುತ್ತದೆ. ಒಂದುವೇಳೆ ಯೇಸು ಕ್ರಿಸ್ತನ ಶಿಷ್ಯೆಯು ನಿಜವಾದ ದ್ರಾಕ್ಷೇಬಳ್ಳಿಯಾಗಿರುವ ಯೇಸು ಕ್ರಿಸ್ತನ ಕೊಂಬೆಯಾಗಿದ್ದರೆ, ನಾವು ಜೀವಿಸುವ ರೀತಿಯಲ್ಲಿ ಅದು ಗೊತ್ತಾಗಬೇಕು.

2. ಲೋಕದ ಪದ್ಧತಿ ಮತ್ತು ಆಚಾರಗಳನ್ನು ಅಳವಡಿಸಿಕೊಳ್ಳುವಂಥ ಶೋಧನೆಯು ನಮಗೆ ಯಾವಾಗಲೂ ಎದುರಾಗುತ್ತಲಿರುತ್ತದೆ. ಸ್ತ್ರೀಯರು ಅವರ ವಸ್ತ್ರಧಾರಣೆ, ಕೇಶವಿನ್ಯಾಸ, ಪಾದರಕ್ಷೆಗಳು ಮತ್ತು ಆಭರಣಗಳ ಶೈಲಿಯನ್ನು ಅನುಸರಿಸುತ್ತಾ ಲೋಕದವರಂತೆಯೇ ಕಾಣಲು ಪ್ರಯತ್ನಿಸುತ್ತಾರೆ. ಅವರಂತೆಯೇ ಮಾತನಾಡುವ ಮತ್ತು ಕಾರ್ಯ ಮಾಡುವ ಶೋಧನೆಯು ನಮಗೂ ಎದುರಾಗಬಹುದು. ಆದರೆ ಯೇಸು ಕ್ರಿಸ್ತನ ಶಿಷ್ಯೆಯರಾಗಿರುವ ನಮ್ಮ ಜೀವನ ಶೈಲಿಯು ತನಗೆ ಮೆಚ್ಚಿಕೆಯಾಗಿರಬೇಕೆಂಬದು ದೇವರ ಬಯಕೆಯಾಗಿದೆ.

3. ನಾವು ನಮ್ಮ ಕ್ರೈಸ್ತೀಯ ನಡಿಗೆಯಲ್ಲಿ ದೇವರಿಗೆ ಮೆಚ್ಚಿಕೆಯುಳ್ಳವರಾಗಿದ್ದೇವಾ ಎಂಬದನ್ನು ತಿಳಿದುಕೊಳ್ಳುವದಕ್ಕಾಗಿ ನಮ್ಮನ್ನೇ ಸತತವಾಗಿ ಪ್ರಶ್ನಿಸಿಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಳ್ಳುವದು ಒಳ್ಳೆಯದು. ಕ್ರೈಸ್ತೀಯ ಶಿಷ್ಯೆಯ ಜೀವನ ಜೀವನ ಶೈಲಿಯನ್ನು ನಾಲು ಮುಖ್ಯ ತಲೆಬರಹಗಳಡಿಯಲ್ಲಿ ತಿಳಿದುಕೊಳ್ಳಬಹುದು.

## I. ಶಿಷ್ಯೆ ಮತ್ತು ಆಕೆಯ ರಕ್ಷಣೆ

1. ಸತ್ಯವೇದವು ಹೇಳುತ್ತದೆ, **"ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ. ಯಾಕಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉಪದೇಶವನ್ನೂ ಪ್ರಯತ್ನವನ್ನೂ ಮಾಡುವವನಾಗಿದ್ದಾನೆ"** (ಫಿಲಿ 2:12–13). **ಆದ್ದರಿಂದ,**

   ಎ. **ದೇವರಲ್ಲಿ ಮಾತ್ರವೇ ಭರವಸೆಯನ್ನಿಡಿರಿ.** ರಕ್ಷಣೆಗಾಗಿ ನಾವು ದೇವರಲ್ಲಿ ಮಾತ್ರವೇ ಭರವಸೆಯನ್ನಿಡಬೇಕು. ರಕ್ಷಣೆ ಹೊಂದಲು ಸ್ವಸ್ಥತೆ, ದೀಕ್ಷಾಸ್ನಾನ,

ಮಾನವ ಕ್ರಿಯೆಗಳು ಅಥವಾ ಮಾನವನ ಪರಿಶ್ರಮಗಳಲ್ಲಿ ಯಾವುದೇ ನಂಬಿಕೆಯನ್ನಿಡಬಾರದು (ಅ.ಕೃ 4:12; ಎಫೆ 2:8–9).

ಬಿ. **ಯೇಸು ಕ್ರಿಸ್ತನನ್ನು ನಿಮ್ಮ ಜೀವಿತದ ಕರ್ತನನ್ನಾಗಿ ಮಾಡಿಕೊಳ್ಳಿರಿ**. ಯೇಸು ಕ್ರಿಸ್ತನು ನಿಜವಾಗಿಯೂ ನಮ್ಮ ಜೀವಿತಗಳ ಕರ್ತನಾಗಿರಬೇಕು. ನಮ್ಮ ಚಿತ್ತವನ್ನು ಪರಿಪೂರ್ಣವಾಗಿ ನಾವು ದೇವರಿಗೆ ಒಪ್ಪಿಸಿಕೊಡಬೇಕು (ಲೂಕ 9:23; ಲೂಕ 14:26).

2. ನಾವು ಅನಿದಿನ ಜೀವಿಸುವ ವಿಧಾನದಲ್ಲಿ ನಮ್ಮ ರಕ್ಷಣೆಯು ವ್ಯಕ್ತವಾಗಬೇಕು. **ಆದ್ದರಿಂದ,**

ಎ. **ನಿಮ್ಮ ಸಮಯವನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿರಿ**. ನಾವು ನಮ್ಮ ಸಮಯವನ್ನು ಹೇಗೆ ಉಪಯೋಗ ಮಾಡುತ್ತೇವೆ ಮತ್ತು ನಮ್ಮ ಆದ್ಯತೆಗಳನ್ನು ಹೇಗೆ ಕ್ರಮಪಡಿಸಿಕೊಳ್ಳುತ್ತೇವೆ ಎಂಬದು ಕ್ರೈಸು ಕ್ರಿಸ್ತನೊಂದಿಗಿರುವ ನಮ್ಮ ಸಮರ್ಪಣೆಯನ್ನು ವ್ಯಕ್ತಪಡಿಸುವದಾಗಿರಬೇಕು (ಎಫೆ 5:15–16). ನಾವು ಲೌಕಿಕ ಆಸ್ತಿಗಳನ್ನು ಕೂಡಿಸಿಟ್ಟುಕೊಳ್ಳಬಾರದು; ಬದಲಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ನಾವು ನಮ್ಮ ಸಮಯವನ್ನು ಉಪಯೋಗಿಸುವವರಾಗಿರಬೇಕು (ಮತ್ತಾ 6:33).

ಬಿ. **ಪರಿಶುದ್ಧರಾಗಿರ್ರಿ**. ದೇವರು ನಮಗೆ ನೇಮಿಸಿರುವ ಗುಣಮಟ್ಟವು ಪರಿಶುದ್ಧತೆಯಾಗಿದೆ (1 ಪೇತ್ರ 1:15–17).

- ಇತರರ ಜೀವಿತಗಳನ್ನು ಮುಟ್ಟಲು ಆತನು ನಮ್ಮಲ್ಲಿ ಹರಿಯುವವರೆಗೂ ನಾವು ಪವಿತ್ರಾತ್ಮನಿಂದ ತುಂಬಲ್ಪಡುತ್ತಿರಬೇಕು (ಅ.ಕೃ 13:52).
- ನಾವು ಪ್ರತಿದಿನ ಪವಿತ್ರಾತ್ಮನಿಂದ ತುಂಬಲ್ಪಡುತ್ತಿರಬೇಕು ಮತ್ತು ಆತನಿಂದ ನಿಯಂತ್ರಿಸಲ್ಪಡುತ್ತಿರಬೇಕು (ಎಫೆ 5:18).
- ನಮ್ಮ ಎಲ್ಲಾ ನಡವಳಿಕೆಗಳಲ್ಲಿ, ನಾವು ಮಾಡುವ ಪ್ರತಿಯೊಂದರಲ್ಲಿ ಪರಿಶುದ್ಧರಾಗಿರಬೇಕು (1 ಪೇತ್ರ 1:13).
- ನಮ್ಮ ಶರೀರದ ಇಚ್ಛೆಗಳಿಗನುಸಾರವಾಗಿ ಜೀವಿಸದಿರುವವರಾಗಿರಲು ನಾವು ಪವಿತ್ರಾತ್ಮಭರಿತರಾಗಿ ನಡೆಯುವವರಾಗಿರಬೇಕು (ಗಲಾ 5:16–26).

ಸಿ. **ಯೇಸು ಕ್ರಿಸ್ತನ ಮನೋಭಾವನೆ ಹೊಂದಿದವರಾಗಿರ್ರಿ**. ಯೇಸು ಕ್ರಿಸ್ತನಲ್ಲಿದ್ದ ಮನಸ್ಸು ನಿಮ್ಮಲ್ಲಿಯೂ ಇರಲಿ (ಫಿಲಿ 2:5).

- ಶುದ್ಧವಾದ ಆಲೋಚನೆಗಳಿಂದ ನಾವು ಆತನನ್ನು ಮೆಚ್ಚಿಸಬೇಕು (ಫಿಲಿ 4:8–9).
- ನಾವು ಪಾಪವನ್ನು ದ್ವೇಷಿಸಬೇಕು (ಕೀರ್ತನೆ 119:104).
- ನಾವು ಬೇಕೆಂದೇ ದೇವರಿಗೆ ಅಥವಾ ಇತರರಿಗೆ ವಿರುದ್ಧವಾಗಿ ತಪ್ಪು ಮಾಡಿಲ್ಲ ಎಂಬ ಶುದ್ಧ ಮನಸ್ಸಾಕ್ಷಿಯೊಂದಿಗೆ ಜೀವಿಸಬೇಕು (ಅ.ಕೃ 24:16).

- ಕಷ್ಟಗಳ ಸಮಯದಲ್ಲಿಯೂ ನಾವು ತಾಳ್ಮೆ ಮತ್ತು ಸಂತೋಷವುಳ್ಳವರಾಗಿ ನಡೆದುಕೊಳ್ಳಬೇಕು. (ಯಾಕೋಬ 1:2–3, 12).

**II. ಶಿಷ್ಯೆ ಮತ್ತು ಆಕೆಯ ಕರ್ತನು**

1. ದೇವರೊಂದಿಗೆ ನಿಕಟವಾದ ಸಂಬಂಧವುಳ್ಳವರಾಗಿರಲು, ನಾವು ಪ್ರಾರ್ಥನೆಯಲ್ಲಿ ಸಮಯವನ್ನು ಕಳೆಯಬೇಕು. **ಆದ್ದರಿಂದ,**

    ಎ. **ಪ್ರಾರ್ಥಿಸುವ ಸ್ತ್ರೀಯಾಗಿರಿ.** ಶಿಷ್ಯೆಯರು ಅನುದಿನವೂ ಪ್ರಾರ್ಥನೆಯ ಮೂಲಕ ದೇವರ ಅನ್ಯೋನ್ಯತೆಯಲ್ಲಿರಬೇಕು ಅದು ಅತ್ಯಾಸಕ್ತಿಯುಳ್ಳದ್ದಾಗಿರುತ್ತದೆ (ಯಾಕೋಬ 5:16).

    ಬಿ. **ಎಡಬಿಡದೆ ಪ್ರಾರ್ಥನೆ ಮಾಡಬೇಕು.** ನಮ್ಮ ಹೃದಯಗಳು ದೇವರೊಂದಿಗೆ ಪ್ರತಿಕ್ಷಣವೂ ಸಂಪರ್ಕದಲ್ಲಿರಬೇಕು (1 ಥೆಸ 5:17).

    ಸಿ. **ಶುದ್ಧ ಹೃದಯದಿಂದ ಪ್ರಾರ್ಥಿಸಿರಿ.** ನಮ್ಮ ಪ್ರಾರ್ಥನೆಗಳು ಯಥಾರ್ಥವಾದವುಗಳಾಗಿರಬೇಕು (ಮತ್ತಾ 6:5–7).

    ಡಿ. **ಉದ್ದೇಶದೊಂದಿಗೆ ಪ್ರಾರ್ಥಿಸಿರಿ.** ನಾವು ಎಲ್ಲಾ ಮನುಷ್ಯರಿಗಾಗಿಯೂ, ವಿಶೇಷವಾಗಿ ಎಲ್ಲರ ರಕ್ಷಣೆಗಾಗಿ ಪ್ರಾರ್ಥಿಸಬೇಕು (1 ತಿಮೊ 2:1–4).

2. ಅತನ ವಾಕ್ಯಗಳಾಗಿರುವ ಸತ್ಯವೇದವನ್ನು ಆಳವಾಗಿ ಧ್ಯಾನಿಸುವದರಲ್ಲಿ ಸಮಯವನ್ನು ಕಳೆಯುತ್ತಾ ಶಿಷ್ಯೆಯರು ದೇವರ ಅನ್ಯೋನ್ಯತೆಯಲ್ಲಿರಬೇಕು. **ಆದ್ದರಿಂದ,**

    ಎ. **ದೇವರ ವಾಕ್ಯಗಳನ್ನು ಓದಿರಿ** (ಪ್ರಕ 1:3). ದೇವರು ವಾಕ್ಯವು ನಮಗೆ ಜೀವಿಸಲು ಬೇಕಾದ ಆಹಾರವಾಗಿದೆ (ಲೂಕ 4:4).

    ಬಿ. **ದೇವರ ವಾಕ್ಯಗಳನ್ನು ಕಲಿಯಿರಿ** (2 ತಿಮೊ 2:15). ಇತರರಿಗೆ ವಾಕ್ಯಗಳನ್ನು ಕಲಿಸುವಂತೆ ಇದರಿಂದ ನಮಗೆ ಸಹಾಯವಾಗುತ್ತದೆ (2 ತಿಮೊ 2:2).

    ಸಿ. **ದೇವರ ವಾಕ್ಯಗಳನ್ನು ಧ್ಯಾನಿಸಿರಿ** (ಕೀರ್ತನೆ 1:2). ದೇವರ ವಾಕ್ಯಗಳನ್ನು ಓದುತ್ತಾ ಅವುಗಳನ್ನು ಧ್ಯಾನಿಸುತ್ತಾ ಸಮಯವನ್ನು ಕಳೆಯುವಾಗ ದೇವರು ನಮ್ಮ ನಂಬಿಕೆಯನ್ನು ಹೆಚ್ಚಿಸುತ್ತಾನೆ (ರೋಮಾ 10:17).

    ಡಿ. **ದೇವರ ವಾಕ್ಯಗಳನ್ನು ಕಂಠಪಾಠ ಮಾಡಿರಿ** (ಕೀರ್ತನೆ 119:11). ದೇವರ ವಾಕ್ಯಗಳನ್ನು ನಮ್ಮ ಹೃದಯದಲ್ಲಿ ಬಚ್ಚಿಟ್ಟುಕೊಳ್ಳುವದರಿಂದ ಪಾಪದಿಂದ ನಮ್ಮನ್ನು ರಕ್ಷಿಸಿಕೊಳ್ಳಬಹುದು.

    ಇ. **ದೇವರ ವಾಕ್ಯಗಳನ್ನು ಎತ್ತಿಹೇಳುವವರಾಗಿರಿ** (ಮತ್ತಾಯ 4:1–11). ವಿಶೇಷವಾಗಿ ನಮಗೆ ಕಷ್ಟಗಳು ಅಥವಾ ಶೋಧನೆಗಳು ಎದುರಾಗುವ ಸಮಯದಲ್ಲಿ ನಾವು ಆತನ ಶಕ್ತಿ ಮತ್ತು ಅಧಿಕಾರವನ್ನು ನಂಬುತ್ತೇವೆ ಎಂಬದನ್ನು ದೃಢಪಡಿಸುವದಕ್ಕಾಗಿ ದೇವರ ವಾಕ್ಯಗಳನ್ನು ಎತ್ತಿಹೇಳುವ

("ಬರೆದಿದೆಯಲ್ಲಾ" ಎಂದು ಆತನು ಹೇಳಿದ್ದು) ಯೇಸು ಕ್ರಿಸ್ತನ ಮಾದರಿಯನ್ನು ಅನುಸರಿಸುವವರಾಗಿರಬೇಕು.

ಎಫ್. **ದೇವರ ವಾಕ್ಯಗಳಿಗೆ ವಿಧೇಯರಾಗಿರಿ** (ಯಾಕೋಬ 1:22). ಇಡೀ ಸತ್ಯವೇದವು ದೇವರ ಪ್ರೇರಣೆಯಿಂದ ಬರೆಯಲ್ಪಟ್ಟಿದೆ, ಮತ್ತು ಅದರ ಬರಹಗಾರನಂತೆಯೇ, ಇದು ಪರಿಪೂರ್ಣವಾದದ್ದಾಗಿದೆ ಮತ್ತು ಯಾರೆಲ್ಲಾ ಇದನ್ನು ನಂಬುತ್ತಾರೋ ಮತ್ತು ಇದಕ್ಕೆ ವಿಧೇಯರಾಗುತ್ತಾರೋ ಅವರನ್ನು ಪರಿಪೂರ್ಣರನ್ನಾಗಿ ಮಾಡುವ ಲಾಭದಾಯಕವಾದದ್ದಾಗಿದೆ (2 ತಿಮೊ 3:26).

## III. ಶಿಷ್ಯ ಮತ್ತು ಇತರರು

1. ಶಿಷ್ಯೆಯರು ದೇವರ ಪ್ರೀತಿಯನ್ನು ಎಲ್ಲರಿಗೂ ವ್ಯಕ್ತಪಡಿಸಬೇಕು (ಮಾರ್ಕ 12:29–31). **ಆದ್ದರಿಂದ,**

   ಎ. **ನಿಮ್ಮ ಜೊತೆ ವಿಶ್ವಾಸಿಗಳಿಗೆ ಪ್ರೀತಿಯನ್ನು ವ್ಯಕ್ತಪಡಿಸಿರಿ.** ಯೇಸು ಕ್ರಿಸ್ತನು ನಿಮ್ಮನ್ನು ಪ್ರೀತಿಸಿರುವಂತೆ ನೀವೂ ಒಬ್ಬರನ್ನೊಬ್ಬರು ಪ್ರೀತಿಸಿರಿ. ನೀವು ನಿಜವಾದ ಶಿಷ್ಯೆಯಾಗಿದ್ದೀರ ಎಂಬದನ್ನು ಇದರಿಂದ ಇತರರು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ (ಯೋಹಾನ 13:34–35).

   ಬಿ. **ನಿಮ್ಮ ನೆರೆಹೊರೆಯವರಿಗೆ ಪ್ರೀತಿಯನ್ನು ವ್ಯಕ್ತಪಡಿಸಿರಿ.** ನಾವು ನಮ್ಮ ನೆರೆಹೊರೆಯವರೊಂದಿಗೆ ಪ್ರೀತಿಪೂರ್ವಕವಾಗಿ ನಡೆದುಕೊಳ್ಳುವಾಗ, ಅದರಿಂದ ಅವರೂ ಪ್ರೇರಿತರಾಗುತ್ತಾರೆ; ನಾವು ಲೋಕದವರಂತೆ ಅಲ್ಲ ಎಂಬದನ್ನು ಅವರು ಗಮನಿಸುತ್ತಾರೆ (ರೋಮಾ 15:2).

   ಸಿ. **ಅಪರಿಚಿತರಿಗೆ ಪ್ರೀತಿಯನ್ನು ವ್ಯಕ್ತಪಡಿಸಿರಿ.** ಕ್ರೈಸ್ತರು ಅಪರಿಚಿತರನ್ನೂ ಪ್ರೀತಿಸುವವರಾಗಿರಬೇಕು, ಯಾಕಂದರೆ ನಮ್ಮನ್ನೇ ಯೇಸು ಕ್ರಿಸ್ತನು ಅಂಗೀಕರಿಸಿಕೊಂಡಿರುವ ಕಾರ್ಯದಿಂದ ನಾವು ಹಂಚಿಕೊಳ್ಳುವವರಾಗಿದ್ದೇವೆ (ಧರ್ಮೋ 10:19).

   ಡಿ. **ನಿಮ್ಮ ವೈರಿಗಳಿಗೂ ದೇವರ ಪ್ರೀತಿಯನ್ನು ವ್ಯಕ್ತಪಡಿಸಿರಿ.** ಕ್ರೈಸ್ತರು ತಮ್ಮನ್ನು ಹಿಂಸೆಪಡಿಸುವವರನ್ನು ಪ್ರೀತಿಸಬೇಕು ಮತ್ತು ಭದ್ರಪಡಿಸುವವರಾಗಿರಬೇಕು (ಲೂಕ 6:27–31; ಮತ್ತಾ 5:44; ರೋಮಾ 12:19–21).

2. ಶಿಷ್ಯೆಯರು ಇತರ ವಿಶ್ವಾಸಿಗಳೊಂದಿಗೆ ಅನ್ಯೋನ್ಯವಾಗಿರಬೇಕು (ಇಬ್ರಿಯ 10:25). **ಆದ್ದರಿಂದ,**

   ಎ. **ಸಭೆಗೆ ತಪ್ಪದೇ ಹೋಗಿರಿ.** ಒಟ್ಟಾಗಿ ಎಲ್ಲರೂ ಸೇರಿ ಬರುವ ಕೂಟಗಳನ್ನು ತಪ್ಪಿಸಬೇಡಿರಿ ಎಂದು ಸತ್ಯವೇದವು ಹೇಳುತ್ತದೆ (ಇಬ್ರಿ 10:24–25).

   ಬಿ. **ನಿಮ್ಮನ್ನು ತಿದ್ದಿ ಒಳ್ಳೇ ಆಲೋಚನೆಗಳನ್ನು ಕೊಡುವ ಕೂಟಗಳಲ್ಲಿ ಭಾಗವಹಿಸುವದರಲ್ಲಿ ನಂಬಿಗಸ್ಥರಾಗಿರಿ.** ಪರಸ್ಪರ ಬೆಳವಣಿಗೆಯ ಉದ್ದೇಶಕ್ಕಾಗಿ ಇತರ ಸ್ತ್ರೀಯರೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳುವದೂ ವಿನ್ ನ ಭಾಗವಾಗಿದೆ (ತೀತ 2:3–5).

ಸಿ. **ಅತಿಥಿ ಸತ್ಕಾರವನ್ನು ಅಭ್ಯಾಸಿಸಿರಿ,** ಇತರ ಕ್ರೈಸ್ತರನ್ನು ಅನ್ಯೋನ್ಯತೆಗಾಗಿ ನಿಮ್ಮ ಮನೆಗೆ ಆಹ್ವಾನಿಸುವದು (1 ಪೇತ್ರ 4:8–9).

3. ಶಿಷ್ಯೆಯರು ತಮ್ಮ ಸಂಬಂಧಗಳಲ್ಲಿ ಕ್ರಿಸ್ತಯೇಸುವಿನಲ್ಲಿದ್ದಂಥ ಮನಸ್ಸನ್ನು ವ್ಯಕ್ತಪಡಿಸಬೇಕು. ಆದ್ದರಿಂದ,

ಎ. **ಎಲ್ಲರೊಂದಿಗೂ ಬೆರೆತುಕೊಳ್ಳುವ ಸ್ತ್ರೀಯಾಗಿರಿ.** ನಾವು ಯಾವಾಗಲೂ ಸಂತೋಷಿಸುವ ಜನರಾಗಿರಬೇಕು (ಫಿಲಿ 4:4–5). ಇದರಿಂದ ನಮ್ಮ ಮನೆಗಳಲ್ಲಿ ಸಮಾಧಾನ ಮತ್ತು ಸಂತೋಷ ನೆಲೆಗೊಳ್ಳಬೇಕು ಯಾಕಂದರೆ ನಮ್ಮೊಂದಿಗೆ ಜೀವಿಸುವದು ನಮ್ಮ ಕುಟುಂಬಗಳವರಿಗೆ ಸುಲಭವಾಗಿರುತ್ತದೆ (ಎಫೆ 4:31–32).

ಬಿ. **ಕ್ಷಮಿಸುವ ಹೃದಯವುಳ್ಳವರಾಗಿರಿ.** ನಮಗೆ ತಪ್ಪು ಮಾಡಿದವರನ್ನು ನಾವು ಉಚಿತವಾಗಿ ಕ್ಷಮಿಸುವವರಾಗಿರಬೇಕು (ಲೂಕ 17:3–4; ಮತ್ತಾ 6:14–15).

ಸಿ. **ಯಾವ ವಿಷಯದಲ್ಲಿಯೂ ಕಹಿತನವನ್ನು ಸಾಧಿಸಬೇಡಿರಿ.** ನಮಗೆ ವಿರುದ್ಧವಾಗಿ ಮಾಡಲಾಗಿರುವ ತಪ್ಪುಗಳ ಬಗ್ಗೆ ಧ್ಯಾನಿಸುವದೇ ಕಹಿತನವಾಗಿದೆ (ಯಾಕೋಬ 3:14–18; ಇಬ್ರಿ 12:15).

ಡಿ. **ಸೇವಕನ ಮನೋಭಾವನೆಯುಳ್ಳವರಾಗಿರಿ.** ಯೇಸು ಕ್ರಿಸ್ತನ ಹಾಗೆ ನಾವು ದೀನತೆಯುಳ್ಳ ಸೇವಕರಾಗಿ (ಮತ್ತಾ 20:26–28; ಫಿಲಿ 2:5–8), ಇತರರಿಗೆ ಸೇವೆ ಮಾಡುವ ಮೂಲಕ ಯೇಸು ಕ್ರಿಸ್ತನ ಪ್ರೀತಿಯನ್ನು ವ್ಯಕ್ತಪಡಿಸಬೇಕು.

## IV. ಶಿಷ್ಯೆ ಮತ್ತು ಶಿಷ್ಯೆಯರನ್ನು ಮಾಡುವದು

1. ಶಿಷ್ಯೆಯರು ಯಾವಾಗಲೂ ಇತರರೊಂದಿಗೆ ಸುವಾರ್ತೆಯನ್ನು ಸಾರುತ್ತಿರಬೇಕು ಮತ್ತು ರಕ್ಷಣೆ ಹೊಂದುವ ಅವಕಾಶವನ್ನು ಅವರಿಗೆ ಕಲ್ಪಿಸಿಕೊಡಬೇಕು. **ಆದ್ದರಿಂದ,**

ಎ. **ತನ್ನ ಸಾಕ್ಷಿಯನ್ನು ಹಂಚಿಕೊಳ್ಳುವಂಥ ಕ್ರೈಸ್ತೆಯಾಗಿರಿ.** ನಮ್ಮ ರಕ್ಷಣೆಯ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳಬೇಕು ಮತ್ತು ಪರಿಶುದ್ಧ ಜೀವಿತದ ಮೂಲಕ ಅದನ್ನು ದೃಢಪಡಿಸಬೇಕು (ಮತ್ತಾ 5:16).

ಬಿ. **ನಿಮ್ಮ ನಂಬಿಕೆಯನ್ನು ಹಂಚಿಕೊಳ್ಳಲು ಅವಕಾಶಗಳನ್ನು ಎದುರುನೋಡಿರಿ.** ನೀವೆಲ್ಲಿದ್ದೀರ ಅಥವಾ ನೀವೇನು ಮಾಡುತ್ತಿದ್ದೀರ ಎಂಬದು ದೊಡ್ಡ ವಿಷಯವಲ್ಲ, ಇತರರೊಂದಿಗೆ ನಿಮ್ಮ ನಂಬಿಕೆಯನ್ನು ಹಂಚಿಕೊಳ್ಳುವಂಥ ಅವಕಾಶಗಳನ್ನು ನೀವು ಎದುರುನೋಡುತ್ತಿರಬೇಕು (ಅ.ಕೃ 1:8).

2. ಶಿಷ್ಯೆಯರು, ಇತರರನ್ನು ಶಿಷ್ಯೆಯರನ್ನಾಗಿ ಮಾಡುವುದರ ಮೂಲಕ ತಮ್ಮನ್ನೇ ಸತತವಾಗಿ ಪುನರ್‌ಉತ್ಪಾದಿಸುವವರಾಗಿರಬೇಕು. **ಆದ್ದರಿಂದ,**

ಎ. **ಮೋಹಕವಾಗಿ ಶಿಷ್ಯೆಯರನ್ನು ಮಾಡಿರಿ.** ಇತರರು ನಮ್ಮ ಮಾದರಿಯನ್ನು ಅನುಸರಿಸುವ ಹಾಗೆ ನಾವು ನಮ್ಮ ಜೀವಿತವನ್ನು ಜೀವಿಸಬೇಕು (1 ಕೊರಿ 11:1).

ಬಿ. **ಶಿಷ್ಯೆಯರನ್ನು ಮಾಡಿರಿ ಎಂಬ ಯೇಸು ಕ್ರಿಸ್ತನ ಆಜ್ಞೆಗೆ ವಿಧೇಯರಾಗಿರಿ.** ಮಹಾಆಜ್ಞೆಯನ್ನು ನೆರವೇರಿಸುವದೇ ನಮ್ಮ ಮಹದಾದ ಕರೆಯಾಗಿದೆ (ಮತ್ತಾ 28:18–20).

3. ಉತ್ತಮವಾಗಿ ಶಿಷ್ಯೆಯರನ್ನು ಮಾಡುವವರಾಗಿರಬೇಕಾದರೆ ನಾವು ಕಲಿಸುವವರಾಗಿರಬೇಕು, ಹಾಗೆಯೇ ಸೂಚನೆಗಳನ್ನು ಮತ್ತು ಬುದ್ಧಿವಾದಗಳನ್ನು ಅಂಗೀಕರಿಸಿಕೊಳ್ಳುವವರಾಗಿರಬೇಕು (ಜ್ಞಾನೋಕ್ತಿ 18:15). **ಆದ್ದರಿಂದ,**

   ಎ. **ಕಲಿಸುವವರಾಗಿರ್ರಿ.** ತಿದ್ದುವಿಕೆ ಮತ್ತು ಕಲಿಸುವಿಕೆ ಕ್ರಿಸ್ತನ ದೇಹವನ್ನು ಬಲಪಡಿಸುತ್ತದೆ, ಮತ್ತು ದೈವೀಕವಾದ ಗದರಿಸುವಿಕೆಯನ್ನು ಅಂಗೀಕರಿಸಿಕೊಳ್ಳುವದು ಒಳ್ಳೇತನವಾಗಿದೆ (ಕೀರ್ತನೆ 141:5).

   ಬಿ. **ಇತರರನ್ನು ತಿದ್ದುವಾಗ ಎಚ್ಚರವಾಗಿರ್ರಿ.** ತಿದ್ದುವಿಕೆಯು ಕಠೋರವಾಗಿರಬಾರದು ಬದಲಾಗಿ ಬುದ್ಧಿಪೂರ್ವಕವಾಗಿಯೂ ಮತ್ತು ಕಟ್ಟುವದಾಗಿಯೂ ಇರಬೇಕು (ಗಲಾ 6:1).

   ಸಿ. **ದೀನತೆಯೊಡನೆ ತಿದ್ದುವಿಕೆಯನ್ನು ಅಂಗೀಕರಿಸಿಕೊಳ್ಳಿರಿ.** ಒಂದುವೇಳೆ ತಿದ್ದುವಿಕೆಯನ್ನು ಕೇಳಿ ಕೋಪ ಬರುವದಾದರೆ ಶಿಷ್ಯೆಯು ಪಾಪದ ಗರ್ವವು ತನ್ನಲ್ಲಿ ಕಾಣಿಸಿಕೊಳ್ಳದಂತೆ ತನ್ನನ್ನು ಪರೀಕ್ಷಿಸಿಕೊಳ್ಳಬೇಕು (ಜ್ಞಾನೋ 8:13).

4. ಒಳ್ಳೆಯ ಶಿಷ್ಯೆಯರು ಆಳವಾದ ಕ್ರೈಸ್ತೀಯ ಜೀವಿತದಲ್ಲಿ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕಾಣಲು ಪ್ರೀತಿಯ ಬಂಧಕ್ಕೆ ಒಳಪಟ್ಟಿರುತ್ತಾರೆ. **ಆದ್ದರಿಂದ.**

   ಎ. **ಬೆಳೆಯಿರಿ.** ಕ್ರೈಸ್ತರು ಹಾಲನ್ನು ಕುಡಿಯುವ ತಮ್ಮ ಬಾಲಾವಸ್ಥೆಯನ್ನು ಬಿಟ್ಟು, ಪರಿಪಕ್ವರಾಗಲು ಕರೆಯಲ್ಪಟ್ಟಿದ್ದಾರೆ (ಇಬ್ರಿ 5:12–14).

   ಬಿ. **ಬೆಳವಣಿಗೆಯನ್ನು ಮುಂದುವರೆಸಲು ನಿಮ್ಮ ಸ್ವಭಾವಗಳನ್ನು ಕ್ರಮಪಡಿಸಿಕೊಳ್ಳಿರಿ.** ಶಿಷ್ಯೆಯರು ತಮ್ಮನ್ನೇ ಓದಲು, ಕಲಿಸಲು ಮತ್ತು ಅನ್ಯೋನ್ಯತೆಯಿಂದಲು ಒಪ್ಪಿಸಿಕೊಡಬೇಕು (ಅ.ಕೃ 2:42).

   ಸಿ. **ತಿದ್ದುವ ಗುಂಪಿನಲ್ಲಿ ಸಕ್ರಿಯರಾಗಿರ್ರಿ.** ಪ್ರತಿಯೊಬ್ಬ ಶಿಷ್ಯೆಯ ಸರಿಯಾದ ಬೆಳವಣಿಗೆಗೆ ಸತತವಾದ ತಿದ್ದುವಿಕೆಯು ಅವಶ್ಯಕ (1 ಪೇತ್ರ 5:1–5). ಪ್ರಾರ್ಥನೆ, ಸತ್ಯವೇದ ಅಧ್ಯಯನ, ಸೇವೆ, ಸುವಾರ್ತಿಕರಣದಲ್ಲಿ ಪಾಲುತೆಗೆದುಕೊಳ್ಳುವದರಿಂದ ಕ್ರೈಸ್ತರು ಪ್ರಾಮಾಣಿಕರಾಗಿರಲು ಸಾಧ್ಯವಾಗುತ್ತದೆ.

   ಡಿ. **ಜರುತ್ತಿರುವ ಶಿಷ್ಯತ್ವಕ್ಕೆ ನಿಮ್ಮನ್ನೇ ಒಪ್ಪಿಸಿಕೊಡಿರಿ.** ಸಭೆಯು ತನ್ನೊಂದಿಗೂ ಮತ್ತು ತಂದೆಯೊಂದಿಗೂ ಐಕ್ಯವಾಗಿರಬೇಕೆಂದು ಯೇಸು ಕ್ರಿಸ್ತನು ಪ್ರಾರ್ಥಿಸಿದನು. ಸಮರ್ಪಣೆಯುಳ್ಳ ಶಿಷ್ಯತ್ವದ ಮೂಲಕ ಯೇಸು ಕ್ರಿಸ್ತನಲ್ಲಿ ಪರಿಪಕ್ವರಾಗಿ ಬೆಳೆಯಲು ಒಟ್ಟಾಗಿ ಕಾರ್ಯಮಾಡುವಾಗ ನಾವು ಐಕ್ಯರಾಗುತ್ತೇವೆ (ಯೋಹಾನ 17:21).

**ಮುಕ್ತಾಯ**

ಮನುಷ್ಯನು ಹೊರಗಿನ ತೋರಿಕೆಯನ್ನು ನೋಡುತ್ತಾನೆ ಆದರೆ ದೇವರು ಹೃದಯವನ್ನು ನೋಡುತ್ತಾನೆ ಎಂದು ಸತ್ಯವೇದವು ಹೇಳುತ್ತದೆ (1 ಸಮು 16:7). ನಾವು ನಿಜವಾಗಿಯೂ ಯಾರಾಗಿದ್ದೇವೆ ಎಂಬದನ್ನು ಆತನು ನೋಡುತ್ತಾನೆ. ನಾವು ಉದ್ದಗಿದ್ದೇವಾ ಅಥವಾ ಕುಳ್ಳಗಿದ್ದೇವಾ, ಕಪ್ಪಾಗಿದ್ದೇವಾ ಅಥವಾ ಬಿಳಿಯಾಗಿದ್ದೇವಾ, ನೋಡಲು ಸುಂದರವಾಗಿದ್ದೇವಾ ಅಥವಾ ಇಲ್ಲವಾ ಎಂಬದನ್ನು ದೇವರು ನೋಡುವದಿಲ್ಲ. ನಮ್ಮ ಹೃದಯವು ಹೇಗಿದೆ ಎನ್ನುವದೇ ದೇವರಿಗೆ ಪ್ರಾಮುಖ್ಯವಾದದ್ದಾಗಿದೆ. ನಾವು ಪ್ರಾರ್ಥನಾಪೂರ್ವಕವಾಗಿ ನಮ್ಮ ಹೃದಯಗಳನ್ನು ಪರೀಕ್ಷಿಸಿಕೊಳ್ಳುವಾಗ ಮತ್ತು ಆತನು ನಮ್ಮನ್ನು ಹೇಗೆ ನೋಡುತ್ತಾನೆ ಹಾಗು ನಾವು ಆತನಿಗೆ ಮೆಚ್ಚಿಕೆಯುಳ್ಳವರಾಗಿದ್ದೇವಾ ಎಂಬದನ್ನು ಗೋಚರಪಡಿಸು ಎಂದು ದೇವರನ್ನು ಕೇಳಿಕೊಳ್ಳುವಾಗ ಈ ಸ್ಥಿತಿಯು ಪ್ರಕಟವಾಗುತ್ತದೆ.

**ಪ್ರಾರ್ಥನೆ**

*ಒಡೆಯನಾದ ದೇವರೇ, ನಾನು ನಿನ್ನ ವಾಕ್ಯಗಳಿಗೆ ಮತ್ತು ಪವಿತ್ರಾತ್ಮನಿಗೆ ವಿಧೇಯನಾಗಿದ್ದೇನಾ ಎಂಬದನ್ನು ಪ್ರಾರ್ಥನಾಪೂರ್ವಕವಾಗಿ ಗಮನಕ್ಕೆ ತೆಗೆದುಕೊಂಡು, ನಾನು ಬೆಳೆಯಬೇಕಾಗಿರುವ ನನ್ನ ಜೀವಿತದ ಕ್ಷೇತ್ರಗಳನ್ನು ನನಗೆ ತೋರಿಸು ಎಂದು ಬೇಡಿಕೊಳ್ಳುತ್ತೇನೆ. ನನ್ನ ಪಾಪವನ್ನು ನನಗೆ ತೋರಿಸು, ನನ್ನ ಪಶ್ಚಾತ್ತಾಪವನ್ನು ಆಲಿಸು, ಮತ್ತು ಎಲ್ಲಾ ಅನೀತಿವಂತಿಕೆಯಿಂದ ನನ್ನನ್ನು ಶುದ್ಧೀಕರಿಸು. ಆಮೆನ್.*

# ಆತ್ಮೀಕ ವಿವರಣಾಪಟ್ಟಿ

ಯಾರೂ ಇರದ ನಿಶ್ಯಬ್ದವಾದ ಸ್ಥಳವನ್ನು ಆರಿಸಿಕೊಳ್ಳಿರಿ ಮತ್ತು ಸತ್ಯವೇದವನ್ನು ತೆರೆದು ಕೊಡಲಾಗಿರುವ ವಾಕ್ಯಭಾಗಗಳನ್ನು ಓದುತ್ತಾ ಪಕ್ಕದಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. Y ಗೆ ಗುರುತು ಹಾಕುವದಾದರೆ "ಹೌದು" ಮತ್ತು N ಗೆ ಗುರುತು ಹಾಕುವದಾದರೆ "ಇಲ್ಲ" ಎಂಬದನ್ನು ಸೂಚಿಸುತ್ತದೆ.

☐ Y ☐ N 1. ನನ್ನ ರಕ್ಷಣೆಗಾಗಿ ನಾನು ಯೇಸು ಕ್ರಿಸ್ತನಲ್ಲಿ ಮಾತ್ರವೇ ಭರವಸೆಯುಳ್ಳವನಾಗಿದ್ದೇನಾ? (ಯೋಹಾನ 3:16, ಎಫೆ 2:8–9)

☐ Y ☐ N 2. ಕ್ರಿಸ್ತನೇ ನನ್ನ ಕರ್ತನಾಗಿದ್ದಾನೆಯೇ? (ಲೂಕ 9:23; ಲೂಕ 14:26)

☐ Y ☐ N 3. ನನ್ನ ಆದ್ಯತೆಗಳು ದೇವರಿಗೆ ಮೆಚ್ಚಿಕೆಯಾದವುಗಳಾಗಿವೆಯೇ? (ಮತ್ತಾ 6:33)

☐ Y ☐ N 4. ನಾನು ಪವಿತ್ರಾತ್ಮನ ನಿಯಂತ್ರಣದಲ್ಲಿದ್ದು ಆತನಿಂದ ನಡೆಸಲ್ಪಡುತ್ತಿದ್ದೇನಾ? (ಗಲಾ 5:16–26; ಎಫೆ 5:18).

☐ Y ☐ N 5. ದೇವರು ನನ್ನ ಆಲೋಚನಾ ಜೀವಿತವನ್ನು ಮೆಚ್ಚುವನಾಗಿದ್ದಾನಾ? (ಫಿಲಿ 4:8–9)

☐ Y ☐ N 6. ನಾನು ನಿಜವಾಗಿಯೂ ಪಾಪವನ್ನು ದ್ವೇಷಿಸುತ್ತೇನಾ? (ಕೀರ್ತನೆ 119:104)

☐ Y ☐ N 7. ನಾನು ನಿರ್ಮಲವಾದ ಮನಸ್ಸಾಕ್ಷಿಯುಳ್ಳವಳಾಗಿದ್ದೇನಾ? (ಅ.ಕೃ 24:16)

☐ Y ☐ N 8. ನಾವು ತಾಳ್ಮೆ ಮತ್ತು ಸಂತೋಷದ ಮನೋಭಾವನೆಯುಳ್ಳವನಾಗಿ ಕಷ್ಟಗಳನ್ನು ಸಹಿಸಿಕೊಳ್ಳುತ್ತೇನಾ? (ಯಾಕೋಬ 1:12)

☐ Y ☐ N 9. ದೇವರು ನನ್ನ ಪ್ರಾರ್ಥನೆಯನ್ನು ಮೆಚ್ಚುವವನಾಗಿದ್ದಾನಾ? (ಫಿಲಿ 4:6; 1 ತಿಮೊ 2:1–4)

☐ Y ☐ N 10. ನಾನು ದೇವರ ವಾಕ್ಯಗಳನ್ನು ಕಂಠಪಾಠ ಮಾಡುತ್ತಿದ್ದೇನಾ, ಕಲಿಯುತ್ತಿದ್ದೇನಾ ಮತ್ತು ಅವುಗಳಿಗೆ ವಿಧೇಯಳಾಗುತ್ತಿದ್ದೇನಾ? (2 ತಿಮೊ 2:2; 2:15, 3:16)

☐ Y ☐ N 11. ಯೇಸು ಕ್ರಿಸ್ತನು ನನ್ನನ್ನು ಪ್ರೀತಿಸಿದಂತೆ ನಾನು ನನ್ನ ನೆರೆಯುವರನ್ನು ಮತ್ತು ದೇವರನ್ನು ಪ್ರೀತಿಸುತ್ತೇನಾ? (ಲೂಕ 10:27, ಯೋಹಾನ 13:34)

☐ Y ☐ N 12. ಕ್ರೈಸ್ತೀಯ ವಿಶ್ವಾಸಿಗಳ ದೇಹದೊಂದಿಗೆ ನಾನು ಸತತವಾದ ಅನ್ಯೋನ್ಯತೆಯಲ್ಲಿದ್ದೇನಾ? (ಇಬ್ರಿಯ 10:25)

☐ Y ☐ N 13. ನಾನು ಸಂತೋಷವುಳ್ಳ ವ್ಯಕ್ತಿಯಾಗಿದ್ದೇನಾ, ಅಂದರೆ ಎಲ್ಲರೊಂದಿಗೂ ಹೊಂದಿಕೊಳ್ಳುವವಳಾಗಿದ್ದೇನಾ? (ಎಫೆ 4:31–32)

☐ Y ☐ N 14. ನನ್ನಲ್ಲಿ ಕ್ಷಮಾಪಣೆಯ ಹೃದಯವಿದೆಯಾ, ಅದನ್ನು ಅಂಗೀಕರಿಸಿಕೊಂಡು ಉಚಿತವಾಗಿ ಕೊಡುವವಳಾಗಿದ್ದೇನಾ? (ಮತ್ತಾ 6:14–15)

☐ Y ☐ N 15. ಯಾವುದಾದರು ವಿಷಯದಲ್ಲಿ ನಾನು ಕಹಿಯನ್ನು ಇಟ್ಟುಕೊಂಡಿದ್ದೇನಾ? (ಇಬ್ರಿ 12:15)

☐ Y ☐ N 16. ಸೇವಕಿಯ ಮನೋಭಾವನೆ ನನಗಿದೆಯಾ? (ಮತ್ತಾ 20:28)

☐ Y ☐ N 17. ನಾನು ಸಾಕ್ಷಿ ಕೊಡುತ್ತಿದ್ದೇನಾ, ಕ್ರಿಸ್ತನು ನನ್ನ ಜೀವಿತದಲ್ಲಿರುವ ಅನುಭವವನ್ನು ಹಂಚಿಕೊಳ್ಳುತ್ತಿದ್ದೇನಾ? (ಅ.ಕೃ 1:8)

☐ Y ☐ N 18. ನಾನು ಶಿಷ್ಯೆಯರನ್ನು ಮಾಡುತ್ತಿದ್ದೇನಾ? (ಮತ್ತಾ 28:18–20)

☐ Y ☐ N 19. ನಾನು ಕಲಿತುಕೊಳ್ಳುವವಳಾಗಿದ್ದೇನಾ? (ಜ್ಞಾನೋಕ್ತಿ 18:15)

☐ Y ☐ N 20. ಯಾರಿಂದಲಾದರೂ ನಾನು ಸತತವಾಗಿ ಕ್ರಮಪಡಿಸಿಕೊಳ್ಳುತ್ತಿದ್ದೇನಾ ಅಥವಾ ತಿದ್ದಿಸಿಕೊಳ್ಳುತ್ತಿದ್ದೇನಾ? (1 ಪೇತ್ರ 5:1–5)

ದೇವರ ವಾಕ್ಯದ ಬೆಳಕಿನಲ್ಲಿ ಈ ಪ್ರಶ್ನೆಗಳಿಗೆ ನೀವು ಪ್ರಾಮಾಣಿಕವಾಗಿ ಉತ್ತರಿಸದಿದ್ದರೆ ವಿವರಣಾಪಟ್ಟಿಯು ನಿಮ್ಮ ಜೀವಿತದಲ್ಲಿ ಮಾಡುವ ಕಾರ್ಯವು ಕ್ಲುಪ್ತವಾಗಿರುತ್ತದೆ. ಒಂದುವೇಳೆ ಕೊಡಲಾಗಿರುವ ಯಾವುದಾದರೂ ವಚನಭಾಗ ಅಥವಾ ಪ್ರಶ್ನೆಯು ನಿಮ್ಮ ಸಮರ್ಪಣೆಯಲ್ಲಿ ಬಲಹೀನರಾಗಿರುವ ಯಾವುದಾದರು ಕ್ಷೇತ್ರವನ್ನು ಅಥವಾ ಪಾಪದ ಕ್ಷೇತ್ರವನ್ನು ತಿಳಿಯಪಡಿಸುವದಾದರೆ, ಬೆಳವಣಿಗೆಯು ಬೇಕಾಗಿರುವ ಕ್ಷೇತ್ರಗಳನ್ನು ಒಂದು ಹಾಳೆಯಲ್ಲಿ ಬರೆಯಿರಿ ಮತ್ತು ಮತ್ತೊಂದು ಹಾಳೆಯಲ್ಲಿ ಅರಿಕೆ ಮಾಡಬೇಕಾಗಿರುವ ಹಾಗೂ ಕ್ಷಮಿಸಲ್ಪಡಬೇಕಾಗಿರುವ ಪಾಪವನ್ನು ಬರೆಯಿರಿ. ಪ್ರಾರ್ಥನೆ ಮಾಡಿದ ನಂತರ, ಪಾಪಗಳನ್ನು ಅರಿಕೆಮಾಡಿರಿ, ಅವುಗಳಿಗಾಗಿ ಪಶ್ಚಾತ್ತಾಪಪಡಿರಿ ಮತ್ತು ನಿಮ್ಮ ಜೀವಿತವನ್ನು ಹೊಸದಾಗಿ ಯೇಸು ಕ್ರಿಸ್ತನಿಗೆ ಸಮರ್ಪಿಸಿರಿ! ನಂತರ 1 ಯೋಹಾನ 1:9ರಲ್ಲಿ ಬರೆಯಲ್ಪಟ್ಟಿರುವ ಪದಗಳನ್ನು ಆ ಹಾಳೆಯ ಮತ್ತೊಂದು ಕಡೆಯಲ್ಲಿ ಬರೆಯಿರಿ, ಕ್ಷಮಾಪಣೆಯನ್ನು ಹೊಂದಿರಿ ಮತ್ತು ಈ ಪಾಪಗಳ ಮೇಲೆ ಜಯವನ್ನು ಸಾಧಿಸಿರಿ. ಅಂತಿಮವಾಗಿ ದೇವರಿಂದ ಕ್ಷಮಾಪಣೆಯನ್ನು ಸ್ವೀಕರಿಸಿಕೊಂಡಿರುವದರ ಗುರುತಾಗಿ ಆ ಹಾಳೆಯನ್ನು ಹರಿದುಹಾಕಿರಿ. ನಿರ್ದಿಷ್ಟವಾದ ಬದಲಾವಣೆಗಳು ಬೇಕಾಗಿರುವ ಕ್ಷೇತ್ರಗಳಲ್ಲಿ, ಆ ಧೈರ್ಯದಿಂದ ಹೆಜ್ಜೆಗಳನ್ನಿಡಲು ಜ್ಞಾನವನ್ನು ಕೊಡು ಎಂದು ದೇವರನ್ನು ಬೇಡಿಕೊಳ್ಳಬೇಕು (ಯಾಕೋಬ 1:5). ನಂತರ, ನಿಮ್ಮ ಸುತ್ತಮುತ್ತಲಿನಲ್ಲಿರುವವರನ್ನು ಸಂಧಿಸಲು ದೊರೆಯುವ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಿರಿ, ಅವರಿಗೆ ಸುವಾರ್ತೆಯನ್ನು ಸಾರಿರಿ ಮತ್ತು ಶಿಷ್ಯೆಯರನ್ನಾಗಿ ಮಾಡಿರಿ.

## ನೋಟ್ಸ್

# 5

# ಕ್ರಿಸ್ತನಲ್ಲಿ ಪರಿಶುದ್ಧ ಜೀವನ ನಡೆಸಲು ಸಹಾಯಕವಾಗುವ ಪಾಠಗಳು

**ಕೀ ವಚನ: 2 ಕೊರಿ 5:17**

"ಹೀಗಿರಲಾಗಿ ಯಾವನಾದರೂ **ಕ್ರಿಸ್ತನಲ್ಲಿದ್ದರೆ** ಅವನು ನೂತನಸೃಷ್ಟಿಯಾದನು. ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."

**ವಾಚನಭಾಗಗಳು:** ಕೊಲೊಸ್ಸೆ 2:9–12; ರೋಮಾ 8:1–11

**ಬೇಕಾದ ಸಾಮಗ್ರಿಗಳು:** 1 ದೊಡ್ಡ ಗಾಜಿನ ಬಟ್ಟಲು, 1 ಸಣ್ಣ ಲೋಟ, ಕೆಲವು ಕಲ್ಲುಗಳು (ದೊಡ್ಡವು, ಸಣ್ಣವು ಲೋಟದಲ್ಲಿ ಹಿಡಿಯುವಂಥವುಗಳು). ಒಂದು ಚಿಟಿಕೆ ಮಣ್ಣು ಮತ್ತು ಧೂಳು.

**ಮಾಡುವ ವಿಧಾನ:** ದೊಡ್ಡ ಬಟ್ಟಲು ತುಂಬವಷ್ಟು ನೀರನ್ನು ಹಾಕಿರಿ.

> ತುಂಬುವ ಅವಶ್ಯಕತೆ; ಕ್ರಿಸ್ತನ ಹೊರಗಡೆ ಪರಿಶುದ್ಧರಾಗಿ ಜೀವಿಸಲು ಮುಂದಾಗುವ ನಿರರ್ಥಕವಾದ ಪ್ರಯತ್ನವಾಗಿದೆ
>
> (ಎಫೆ. 5:18).

1. ನಾನು ಪವಿತ್ರಾತ್ಮನಿಂದ ತುಂಬಲ್ಪಡುವಿಕೆಯ ಕುರಿತು ಕೇಳಿದ್ದೇನೆ ಮತ್ತು ಓದಿದ್ದೇನೆ ಹಾಗೂ ಅದನ್ನು ಎದುರುನೋಡಿದ್ದೇನೆ. ನಾನು ಬೆಳಗಿನ ಸಮಯದಲ್ಲಿ ಧ್ಯಾನಕ್ಕೆ ಕೂರುತ್ತಿದ್ದೆ **(ಲೋಟವು ತುಂಬುವಂತೆ ನೀರಿನಲ್ಲಿ ಮುಳುಗಿಸಿರಿ),** ಆದರೆ ಮಧ್ಯಾಹ್ನದ ಸಮಯಕ್ಕೆ ಆತ್ಮನಿಂದ ಕೇವಲ "ಅರ್ಧ" ಮಾತ್ರವೇ ತುಂಬಿದ ಅನುಭವವಾಗುತ್ತಿತ್ತು. **(ನೀರು ಚೆಲ್ಲುವಂತೆ ಲೋಟವನ್ನು ಅಲ್ಲಾಡಿಸಿರಿ)** ಕಷ್ಟಗಳು ಅಥವಾ ಶೋಧನೆಗಳು ಬರುತ್ತಿದ್ದಂತೆ ನಾನು ಹೆಚ್ಚೆಚ್ಚು ಖಾಲಿಯಾಗುತ್ತಿದ್ದೆ. **(ಲೋಟದಿಂದ ನೀರನ್ನು ಚೆಲ್ಲುತ್ತಲೇ ಇರ್ರಿ).**

2. ಕ್ರಿಸ್ತನಲ್ಲಿರುವದರ ಕುರಿತು ಬರೆಯಲ್ಪಟ್ಟಿರುವ ಎಫೆಸ 1ನೇ ಅಧ್ಯಾಯುವನ್ನು ನಾನು ಓದಿದೆ. **(ಬಟ್ಟಲಿನಲ್ಲಿರುವ ನೀರಿನೊಳಗೆ ಲೋಟವನ್ನು ಪೂರ್ತಿಯಾಗಿ ಮುಳುಗಿರಿ)** ಈಗ ನೀರು ಲೋಟದಲ್ಲಿ ತುಂಬುತ್ತದೆ ಮತ್ತು ಲೋಟವು ನೀರಿನೊಳಗಿರುತ್ತದೆ. **(ನೀರನ್ನು ಮುತ್ತದೆಯೇ**

ಕ್ರಿಸ್ತನಲ್ಲಿ: ಪರಿಪೂರ್ಣತೆ, ರಕ್ಷಣೆ; ಯೇಸು ಕ್ರಿಸ್ತನ ಜೀವಿತದ ಗುಣಗಳು

(ಗಲಾ 2:20)

**ಲೋಟವನ್ನು ಮುಟ್ಟುವಂತೆ ಯಾರನ್ನಾದರೂ ಕರೆದು ಹೇಳಿರಿ)** ನಾವು ಕ್ರಿಸ್ತನಲ್ಲಿರುವಾಗ ಸೈತಾನನಿಗೆ ನಮ್ಮೊಂದಿಗೆ ಯಾವುದೇ ಸಂಪರ್ಕವಿರುವದಿಲ್ಲ. **(ನೀವು ಕರೆದಿರುವ ವ್ಯಕ್ತಿಗೆ ನೀರಿನೊಳಗಿರುವ ಲೋಟವನ್ನು ಅದರಲ್ಲಿಯೇ ತಲೆಕೆಳಗಾಗಿ ಇಡುವಂತೆ ಹೇಳಿರಿ)** ಆಗ ಅದರಲ್ಲಿರುವ ನೀರು ಚೆಲ್ಲುತ್ತದೆಯೇ? **(ಲೋಟವನ್ನು ನೀರಿನೊಳಗೆ ಅಲ್ಲಾಡಿಸುವಂತೆ ಹೇಳಿರಿ)** ಲೋಟವು ನೀರಿನ ಹೊರಗಿದ್ದಾಗ ಅದನ್ನು ನಾವು ಅಲ್ಲಾಡಿಸಿದರೆ ನೀರು ಚೆಲ್ಲುತ್ತಿತ್ತು, ಆದರೆ ಈಗ ನೀರು ಚೆಲ್ಲುವದಿಲ್ಲ!

3. **(ಲೋಟದೊಳಗೆ ದೊಡ್ಡ ಕಲ್ಲುಗಳನ್ನು ತುಂಬಿರಿ [ರಕ್ಷಣೆ ಹೊಂದುವದಕ್ಕೂ ಮೊದಲು ಇದ್ದ ಪಾಪಗಳನ್ನು, ಪ್ರತಿನಿಧಿಸಲು] ಲೋಟವನ್ನು ನೀರಿನಿಳಗಿಂದ ತೆಗೆದು, ರೋಮ. 5:6–8 ನೋಡಿರಿ).** ಕೇಳಿರಿ: ಲೋಟವು ತುಂಬಿದೆಯೇ? ಹೌದು, ಅದರಲ್ಲಿ ನೀರು ಪೂರ್ತಿಯಾಗಿದೆ, ಆದರೆ ಇಲ್ಲ, ಯಾಕಂದರೆ ನೀರಿನೊಂದಿಗೆ ಕಲ್ಲುಗಳೂ ಸೇರಿಕೊಂಡಿವೆ. ಪವಿತ್ರಾತ್ಮನಿಂದ ತುಂಬಲ್ಪಡದಂತೆ ಪಾಪವು (ಕಲ್ಲುಗಳು) ಅಡ್ಡಿಪಡಿಸುತ್ತಿರುವ ಜೀವಿತವನ್ನು ಕೆಲವರು ಜೀವಿಸುತ್ತಿದ್ದಾರೆ. **(ಕೆಲವು ಸಣ್ಣ ಕಲ್ಲುಗಳನ್ನು ಲೋಟದೊಳಗೆ ಹಾಕಿರಿ)** ಕೆಲವು ಪಾಪಗಳು ಸಣ್ಣದ್ದುಗಳಾಗಿರುತ್ತವೆ, ರಹಸ್ಯವಾದ ಪಾಪಗಳು ಗೊತ್ತಿಲ್ಲದವುಗಳಾಗಿರುತ್ತವೆ ಮತ್ತು ಇತರರಿಗೆ ಅವು ಕಾಣಿಸುವದಿಲ್ಲ (1 ಯೋಹಾನ 1:8,10; ಲೂಕ 11:24–26). **(ಕೆಲವು ಆಕರ್ಷಕವಾದ, ಕಲ್ಲುಗಳನ್ನು ಸಹ ಲೋಟದೊಳಗೆ ಹಾಕಿರಿ).** ಕೆಲವು ಪಾಪಗಳು "ಆಕರ್ಷಕವಾದ ಪಾಪಗಳಾಗಿರುತ್ತವೆ," ನಾನು ಆನಂದಪಡುವಂಥ ಹವ್ಯಾಸಗಳು ಮತ್ತು ಅವುಗಳನ್ನು ಬಿಡಲು ನನಗೆ ಇಷ್ಟವಿರುವದಿಲ್ಲ (1 ಕೊರಿ 9:12). ಕೆಲವು

ಪಾಪವು ಪವಿತ್ರಾತ್ಮನ ಸ್ಥಾನವನ್ನು ತೆಗೆದುಕೊಳ್ಳುತ್ತದೆ; ಲೋಟವು ತುಂಬಿತುಳುಕುತ್ತಿರುತ್ತದೆ ಆದರೆ ಅದರೊಳಗೆ ಕೇವಲ ನೀರು ಮಾತ್ರ ಇರುವದಿಲ್ಲವಷ್ಟೆ

(ಇಬ್ರಿ 12:1)

ಪಾಪಗಳು "ಅಡ್ಡಿಪಡಿಸುವಂಥ ಪಾಪಗಳಾಗಿರುತ್ತವೆ." ಅವುಗಳು ಒಳ್ಳೆಯ ಕಾರ್ಯಗಳಾಗಿರಬಹುದು, ಅಂದರೆ ಹಣ, ಸಮಯ ಅಥವಾ ಮನೋರಂಜನೆ. ಆದರೆ ನಾವು ಅವುಗಳನ್ನು ಅತಿಯಾಗಿ ಪ್ರೀತಿಸಿ, ಸರಿಯಾಗಿ ಬಳಸಿಕೊಳ್ಳದಿದ್ದರೆ, ಅವುಗಳು ನಮ್ಮನ್ನು ದುರ್ಬಲಗೊಳಿಸುತ್ತವೆ (ಇಬ್ರಿ 12:1–2). ನಿಮ್ಮ ಹೃದಯದಲ್ಲಿರುವದು ಪವಿತ್ರಾತ್ಮನ ಸ್ಥಾನವನ್ನು ತೆಗೆದುಕೊಳ್ಳುತ್ತದೆ? ನೀವು ಯಾವುದರಿಂದ ತುಂಬಲ್ಪಟ್ಟಿದ್ದೀರಿ, ಪಾಪ (ಕಲ್ಲುಗಳೋ) ಅಥವಾ ಯೇಸು ಕ್ರಿಸ್ತನೋ? ನೀರು ಕಂಠದ ಮಟ್ಟಿಗೂ ಇರಬಹುದು ಆದರೂ ಕಲ್ಲುಗಳ ನಿಮಿತ್ತ ಅದು ಅರ್ಥ ಮಾತ್ರವೇ ತುಂಬಿರುತ್ತದೆ.

4. (ಕಲ್ಲುಗಳನ್ನು ತೆಗೆದುಹಾಕಿ ಲೋಟವನ್ನು ಮತ್ತೆ ನೀರಿನಿಂದ ತುಂಬಿಸಿರಿ. ಒಂದು ಚಿಟಿಕೆ ಕೊಳಕು ಮಣ್ಣನ್ನು ಅದರೊಳಗೆ ಹಾಕಿ, ಆ ನೀರನ್ನು ಕುಡಿಯುವಂತೆ ಯಾರಿಗಾದರೂ ಹೇಳಿರಿ). ಗಲೀಜು ಅಥವಾ ಪಾಪವು ಸಣ್ಣದಾಗಿದ್ದರೂ, ಅದು ಎಲ್ಲವನ್ನೂ ಮಲಿನಗೊಳಿಸುತ್ತದೆ. ಪರಲೋಕದಲ್ಲಿರುವ ನಮ್ಮ ತಂದೆಯು ಪರಿಪೂರ್ಣನಾಗಿರುವಂತೆಯೇ ನೀವು ಪರಿಪೂರ್ಣರಾಗಿರಿ ಎಂದು ದೇವರು ನಮಗೆ ಹೇಳುತ್ತಾನೆ (ಮತ್ತಾ. 5:48).

ಯಾಕೋಬ 2:10

1 ಯೋಹಾನ 1:9

5. (ಲೋಟವನ್ನು ನೀರಿನೊಳಗೆ ಇಡಿರಿ ಮತ್ತು ಅದರೊಳಗಿಂದ ನೀರನ್ನು ಚೆಲ್ಲಲು ಪ್ರಯತ್ನಿಸಿರಿ). ನಾನು ಲೋಟವನ್ನು ನೀರಿನೊಳಗೆ ಇಟ್ಟು ಅದರಿಂದ ನೀರನ್ನು ಚೆಲ್ಲಿದರೆ, ಅದರಿಂದ ಏನು ಚೆಲ್ಲುತ್ತದೆ? ಖಂಡಿತವಾಗಿಯೂ, ನೀರೇ ಚೆಲ್ಲುತ್ತದೆ. ಒಂದುವೇಳೆ ಯಾರಾದರೂ ನಿಮಗೆ ಕೋಪ ಬರಿಸುವದಾದರೆ, ನಿಮ್ಮ ಬಾಯೊಳಗಿಂದ ಏನು ಹೊರಬರುತ್ತದೆ, ಶಾಪಾನಾ ಅಥವಾ ಆಶೀರ್ವಾದಾನಾ? ಕ್ರಿಸ್ತನಿಂದ ಆಶೀರ್ವಾದಗಳೇ ಬರುತ್ತವೆ. "ತಂದೆಯೇ ಅವರನ್ನು ಕ್ಷಮಿಸು." ನನಗೆ ಕೋಪ ತರಿಸುವ ನನ್ನ ಗಂಡ, ಯಾವಾಗಲೂ ಕಾಡುವ ನನ್ನ ಮಕ್ಕಳು, ಜಗಳ ಮಾಡುವ ಅಂಗಡಿಯವನು, ಕರುಣೆತೋರದ ಚಾಲಕನು ಇವರೆಲ್ಲರಿಗೂ ನಾನು ಕೊಡುವ ಪ್ರತ್ಯುತ್ತರ ಇದೇನಾ? ಒಂದುವೇಳೆ ನನ್ನ ಹೃದಯದಲ್ಲಿ

ಒಳಗಿರುವದೇ ಹೊರಗೆ ಬರುತ್ತದೆ

ಯಾಕೋಬ 3:9–12

ಪಾಪವಿರುವದಾದರೆ, ಕಹಿತನವು ಹೊರಗೆ ಬರುತ್ತದೆ, ನಮ್ಮ ಹುಳಿರಸದಂತೆ. ಒಂದುವೇಳೇ ಅದೇ ನಾನು ಯೇಸು ಕ್ರಿಸ್ತನಿಂದ ತುಂಬಲ್ಪಟ್ಟಿದ್ದರೆ, ರುಚಿಕರವಾದ ಜೇನುತುಪ್ಪದಂತೆ ಯೇಸು ಕ್ರಿಸ್ತನೇ ನಮ್ಮೊಳಗಿಂದ ಬರುವವನಾಗಿದ್ದಾನೆ!

ನಾವು ಒತ್ತಡಗಳಿಗೆ ಸಿಕ್ಕಿಕೊಂಡರೂ, ನಮ್ಮ ನಿಮಿತ್ತ ಇತರರು ಆಶೀರ್ವದಿಸಲ್ಪಡುತ್ತಾರೆ

ಆದಿ. 12:1–3

ಕೊಲೊ. 1:27

ರೋಮಾ. 12:1–2

6. **(ನೀರಿನಿಂದ ತುಂಬಿರುವ ಲೋಟವನ್ನು ಹಿಡಿದು ನಿಮ್ಮ ಪಕ್ಕದಲ್ಲಿ ಯಾರಾದರೂ ಇದ್ದರೆ ಲೋಟವನ್ನು ಮೆಲ್ಲಗೆ ಬಡಿಯುವಂತೆ ಹೇಳಿರಿ. ಸ್ವಲ್ಪ ನೀರು ಅವರ ಮೇಲೆ ಬೀಳುವಂತೆ ನೋಡಿಕೊಳ್ಳಿರಿ**). ನಿಮ್ಮೊಂದಿಗೆ ಸಂಪರ್ಕದಲ್ಲಿರುವ ವ್ಯಕ್ತಿಯೊಂದಿಗೆ ಎಲ್ಲಾ ಸಂದರ್ಭಗಳಲ್ಲಿಯೂ ನಿಮ್ಮ ಜೀವಿತದಿಂದ ಪವಿತ್ರಾತ್ಮನ ಪ್ರಭಾವ ಆತನ ಮೇಲೆ ಬೀರುತ್ತಿರಬೇಕು. ಅವರು ನಿಮ್ಮನ್ನು ಜೋರಾಗಿ ಕೆದಕಿದರೂ ನಿಮ್ಮ ಸಮೀಪವಿರುವದರಿಂದ ಆಶೀರ್ವಾದವನ್ನು ಅನುಭವಿಸುವವರಾಗಿರಬೇಕು. ಇತರರ ಮೇಲೆ ನೀವು ಏನನ್ನು ಚೆಲ್ಲುತ್ತಿದ್ದೀರ?

ನಿಮ್ಮ ಜೀವಿತವನ್ನು ಒಂದು ಬಾಟಲಿ ಎಂದು ಊಹಿಸಿಕೊಳ್ಳಿರಿ; ಅದನ್ನು ದೇವರ ಆತ್ಮನ ಸಮುದ್ರದೊಳಗೆ ಬಿಸಾಡಿರಿ ಆತನೇ ಅದನ್ನು ಆವರಿಸಿಕೊಳ್ಳಲಿ ಮತ್ತು ತುಂಬಿಸಲಿ. ನಿಮ್ಮ ಜೀವಿತವನ್ನು ಯೇಸು ಕ್ರಿಸ್ತನಿಗೆ ಒಪ್ಪಿಸಿಕೊಡಿರಿ. ಆತನು ನಿಮ್ಮನ್ನು ತುಂಬಿಸಲಿ, ಸುತ್ತುವರೆಯಲಿ, ಆವರಿಸಿಕೊಳ್ಳಲ್ಲಿ ಮತ್ತು ನಿಮ್ಮಲ್ಲಿ ವಾಸಿಸಲಿ (ಯೋಹಾನ 17:1–26).

**ಚರ್ಚಾ ಪ್ರಶ್ನೆಗಳು**

1. ನಿಮ್ಮನ್ನು ಶೋಧಿಸುತ್ತಿರುವ "ಆಕರ್ಷಕವಾದ ಸಣ್ಣ ಪಾಪಗಳು" ಯಾವುವು?
2. ಕೆಲವರು ನಿಮ್ಮನ್ನು ಕುಪಿತರಾಗಿರುವಾಗ ನಿಮ್ಮ ಜೀವಿತದೊಳಗಿಂದ ಯಾವುದು "ಹೊರ" ಬರುತ್ತದೆ?

**ಪ್ರಾರ್ಥನೆ**

*ನಿಮ್ಮ ಮಾತುಗಳಲ್ಲೇ, ನಿಮ್ಮ ಪಾಪಗಳನ್ನು ಅರಿಕೆಮಾಡಿಕೊಳ್ಳಿರಿ, ನಿಮ್ಮ ಜೀವಿತದಲ್ಲಿ ಕಲ್ಲುಗಳು ಮತ್ತು ಚಿಟಿಕೆ ಕೊಳಕು ಮಣ್ಣು ಇವೆ ಎಂಬದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವಂತೆ ಯೇಸು ಕ್ರಿಸ್ತನನ್ನು ಬೇಡಿಕೊಳ್ಳಿರಿ, ಅವುಗಳನ್ನು ತೆಗೆದು ಹಾಕಲು ಸಹಾಯ ಮಾಡುವಂತೆ ಆತನನ್ನು ಬೇಡಿಕೊಳ್ಳಿರಿ, ಮತ್ತು ಆತನ ಪರಿಪೂರ್ಣತೆಗೆ ನಿಮ್ಮನ್ನು ಒಪ್ಪಿಸಿಕೊಡಿರಿ. ಕ್ರಿಸ್ತನು ನಿಮ್ಮಲ್ಲಿ – ಮಹಿಮೆಯ ನಿರೀಕ್ಷೆಯಾಗಿದ್ದಾನೆ (ಕೊಲೊ 1:27).*

# ನೋಟ್ಸ್

# 6 ಶಿಷ್ಯೆ ಮತ್ತು ಆಕೆಯ ಸಂಬಂಧಗಳು

**ಕೀ ವಚನ: ರೋಮಾ 12:18**

"ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ."

**ಪರಿಚಯ**

1. ಅರ್ಥಮಾಡಿಕೊಳ್ಳಲು ನಮಗೆ ಕಷ್ಟವಾಗುತ್ತದೆಯಾದರೂ, ದೇವರು ತ್ರಯೇಕ ದೇವರಾಗಿದ್ದಾನೆ–ಮೂರು ವ್ಯಕ್ತಿಗಳು: ತಂದೆ, ಮಗ ಮತ್ತು ಪವಿತ್ರಾತ್ಮನು–ಆದರೇ ಅದೇ ಸಮಯದಲ್ಲಿ ಒಬ್ಬನೇ ದೇವರಾಗಿದ್ದಾನೆ (ಧರ್ಮೋ. 6:4).

2. ತ್ರಯೇಕತ್ವದಲ್ಲಿರುವ ಮೂವರೂ ವ್ಯಕ್ತಿಗಳು ಎಡಬಿಡದ ಆರೋಗ್ಯಕರವಾದ ಸಂಬಂಧವುಳ್ಳವರಾಗಿದ್ದಾರೆ. ಇದೇರೀತಿ ಯೇಸು ಕ್ರಿಸ್ತನ ಶಿಷ್ಯೆಯರೂ ಇತರರೊಂದಿಗೆ ಆರೋಗ್ಯಕರವಾದ ಸಂಬಂಧವುಳ್ಳವರಾಗಿ ಜೀವಿಸಬೇಕು.

**ಶಿಷ್ಯೆಯು ಕಾಪಾಡಿಕೊಳ್ಳಬೇಕಾದ ನಾಲ್ಕು ಪ್ರಾಮುಖ್ಯವಾದ ಸಂಬಂಧಗಳು**

1. **ಶಿಷೆಯು ತನ್ನ ಗಂಡನೊಂದಿಗಿನ ಸಂಬಂಧವನ್ನು ಕಾಪಾಡಿಕೊಳ್ಳಬೇಕು ಮತ್ತು ಅದನ್ನು ಮಾನ್ಯವೆಂದೆಣಿಸಬೇಕು (ಒಂದುವೇಳೆ ಆಕೆ ಮದುವೆಯಾಗಿದ್ದರೆ).**

   ಎ. ಶಿಷ್ಯೆಯ ಮದುವೆ–ಹಾಗೆಯೇ ಶಿಷ್ಯೆಯ ಜೀವಿತದ ಎಲ್ಲಾ ವಿಷಯಗಳೂ–ದೇವರಿಗೆ ಘನತೆ ಮತ್ತು ಮಹಿಮೆಯನ್ನು ತರುವಂಥವುಗಳಾಗಿರಬೇಕು ಎಂಬದನ್ನು ನೆನಪಿನಲ್ಲಿಟ್ಟುಕೊಳ್ಳಿರಿ (1 ಕೊರಿ. 10:31).

   ಬಿ. ಹೆಂಡತಿಯರು ಕರ್ತನಿಗೆ ತಮ್ಮನ್ನು ಒಪ್ಪಿಸಿಕೊಡುವಂತೆ ತಮ್ಮ ಗಂಡಂದಿರಿಗೂ ತಮ್ಮನ್ನು ಒಪ್ಪಿಸಿಕೊಡಬೇಕೆಂದು ಸತ್ಯವೇದವು ಹೇಳುತ್ತದೆ. ಈ ಒಪ್ಪಿಸಿಕೊಡುವಿಕೆಯು ಗಂಡನಿಗೆ ಪ್ರೀತಿಪೂರ್ವಕವಾಗಿ ಮತ್ತು ಸಂತೋಷವಾಗಿ ಮಾಡುವ ವಿಧೇಯತೆಯಾಗಿದ್ದು ದೇವರ ಆಜ್ಞೆಯನ್ನು ಮನದಟ್ಟು ಮಾಡಿಕೊಂಡು ಆತನ ಅಧಿಕಾರವನ್ನು ಮಾನಿಸುತ್ತಾ ಒಪ್ಪಿಸಿಕೊಡುವದಾಗಿದೆ (ಎಫೆ. 5:22, 25).

ತೆಲ್ಮಾ ಬೌನ್ ರವರ
**ಆತನು ರಾಜಕುಮಾರಿಯನ್ನು ಮದುವೆ ಮಾಡಿಕೊಂಡನು**
ದಿಂದ ಆಯ್ದ ಕೆಲವು ಹೇಳಿಕೆಗಳು

- ಆತನನ್ನು (ದೇವರನ್ನು) ಪರಸ್ಪರ ತಮಗಿಂತಲೂ ಹೆಚ್ಚಾಗಿ ಮತ್ತು ಜೀವಿತದಲ್ಲಿರುವ ಎಲ್ಲವುಗಳಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಾ, ಆತನ ವಾಕ್ಯಗಳನ್ನು ಧ್ಯಾನಿಸುತ್ತಾ ಒಟ್ಟಾಗಿ ಪ್ರಾರ್ಥಿಸುವ ಗಂಡ ಹೆಂಡತಿಯರು ವೈರಿಯ (ಸೈತಾನನ) ಎಲ್ಲಾ ತಂತ್ರಗಳನ್ನು ಜಯಿಸುವ ಮಹದಾದ ಬಲವನ್ನು ಹೊಂದಿರುತ್ತಾರೆ.
- ಒಂದುವೇಳೆ ನಿಮ್ಮ ಸಾಮಾನ್ಯವಾದ ಸ್ವಭಾವವು ಸಂತೋಷದ ಮನೋಭಾವನೆಯನ್ನು ವ್ಯಕ್ತಪಡಿಸುವದಾದರೆ ನಿಮ್ಮ ಮನೆಯು ಪರಲೋಕವಾಗಿರುತ್ತದೆ.
- ನಿಮ್ಮ ಗಂಡನನ್ನು ಹೊಗಳುವದನ್ನು ಅಭ್ಯಾಸ ಮಾಡಿಕೊಳ್ಳಿರಿ. ಚುಚ್ಚುವ ಮಾತುಗಳು ಜಗಳಪ್ರಿಯ ಸಂಭಾಷಣೆಯ ಕ್ಯಾನ್ಸರ್ ಆಗಿದೆ.
- ಪರಸ್ಪರ ಕಾಲೆಳೆಯುವ ಸ್ವಭಾವವನ್ನು ಅಭ್ಯಾಸ ಮಾಡಿಕೊಳ್ಳಬೇಡಿರಿ. ಪರಸ್ಪರ ಬೆಳವಣಿಗೆಗೆ ಕಾರಣವಾಗುವ ಕಾರ್ಯಗಳನ್ನು ಮಾಡುವದರಲ್ಲಿ ನಿರತರಾಗಿರ್ರಿ.
- ನಿಮ್ಮ ಗಂಡನನ್ನು ಎತ್ತಿಹಿಡಿಯಿರಿ. ಆತನನ್ನು ಪ್ರೀತಿಸಿರಿ. ಆತನನ್ನು ದೇವರ ಸಮೀಪದಲ್ಲಿರಿಸಲು ಪ್ರಯತ್ನಿಸಿರಿ, ಯಾಕಂದರೆ ಆತನು ಸಂಪೂರ್ಣವಾಗಿ ದೇವರವನಾಗದಿದ್ದರೆ, ಸಂಪೂರ್ಣವಾಗಿ ನಿಮ್ಮನಾಗಿರಲಾರನು!
- ನೀವು ಒಬ್ಬರನ್ನೊಬ್ಬರು ಪ್ರೀತಿಸಿರಿ ಎಂದು ಯೇಸು ಕ್ರಿಸ್ತನು ನಮಗೆ ಆಜ್ಞಾಪಿಸಿದಾಗ, ಸಂಬಂಧಿಕರನ್ನು ಮಾತ್ರವೇ ಎಂದು ಹೇಳಿದ್ದಾನೆಯೇ?
- ಸಂಸಾರದ ತಂಡವು, ದೇವರಿಗಾಗಿ ಮತ್ತು ದೇವರೊಂದಿಗೆ ಜೀವಿಸುವಾಗ, ವರ್ಷಗಳು ಉರುಳಿದಂತೆ ಸಮೃದ್ಧಕರವಾಗಿಯೂ ಸಂತೋಷಕರವಾಗಿಯೂ ಬೆಳೆಯುತ್ತದೆ. ದೇವರಲ್ಲಿ ನೆಲೆಗೊಂಡಿರುವದೇ ಇವೆಲ್ಲವುಗಳಿಗೆ ಮೂಲ. ಆತನೊಂದಿಗಿರುವಾಗ ಮದುವೆಗಿಂತ ಬಲಿಷ್ಠವಾದದ್ದು ಯಾವುದೂ ಇಲ್ಲ. ಆತನಿಲ್ಲದೇ, ಹೆಚ್ಚು ಉಳಿಯುವಂಥದ್ದು ಯಾವುದೂ ಇಲ್ಲ. ಯಾವುದೇ ದಂಪತಿಗಳಿಗಾದರೂ ನೀಡಬಹುದಾದ ಮಹದಾದ ಸಲಹೆ ಎಂದರೆ, "ದೇವರಿಗೆ ಹತ್ತಿರವಾಗಿರ್ರಿ" ಎಂಬುದೇ.

ಸಿ. ಶಿಷ್ಯೆಯ ನಡವಳಿಕೆಯು ಹೇಗಿರಬೇಕೆಂದರೆ ಆಕೆಯಲ್ಲಿರುವ ಕ್ರೈಸ್ತನಲ್ಲಿದ್ದಂಥ ಸ್ವಭಾವವು ಅವಿಶ್ವಾಸಿಯಾಗಿರುವ ತನ್ನ ಗಂಡನ ಮೇಲೆ ತೀವ್ರವಾದ ಪ್ರಭಾವವನ್ನು ಬೀರುವಂಥದ್ದಾಗಿರಬೇಕು. ಆಕೆಯ ಪ್ರೀತಿಪೂರ್ವಕವಾದ ಸಂಭಾಷಣೆಯು, ಪವಿತ್ರಾತ್ಮನ ಫಲಗಳೊಂದಿಗೆ ಕೂಡಿ, ತನ್ನ ಹಾಗೂ ದೇವರ ವಿಷಯದಲ್ಲಿಯೂ ತನ್ನ ಗಂಡನ ನಂಬಿಕೆಯನ್ನು ಸಂಪಾದಿಸಬಹುದು. "ಅವರಲ್ಲಿ (ಗಂಡಂದಿರಲ್ಲಿ) ಕೆಲವರು ದೇವರ ವಾಕ್ಯಕ್ಕೆ ಅವಿಧೇಯರಾಗಿದ್ದರೂ...ತಮ್ಮ ಹೆಂಡತಿಯರಾದ ನಿಮ್ಮ ನಡತೆಯಿಂದಲೇ ಸನ್ಮಾರ್ಗಕ್ಕೆ ಬಂದಾರು" (1 ಪೇತ್ರ 3:1).

ಡಿ. ಹೆಂಡತಿಯ ಪಾತ್ರಕ್ಕಾಗಿ ದೇವರು ಆಯೋಜಿಸಿರುವ ಸುಂದರವಾದ ಉದ್ದೇಶದಲ್ಲಿ ಶಿಷ್ಯೆಯು ತನ್ನ ಸ್ವಪ್ರತಿಷ್ಠೆಯನ್ನು ಕಂಡುಕೊಳ್ಳಬಹುದು: "ಸರಿಬೀಳುವ ಸಹಕಾರಿ" (ಆದಿ. 2:18). ಒಳ್ಳೆಯ ಹೆಂಡತಿಯು ತನ್ನ ಗಂಡನನ್ನು ಪ್ರೀತಿಸುತ್ತಾಳೆ (ತೀತ 2:4) ಮತ್ತು "ತಮ್ಮ ಜೀವಮಾನಕಾಲದಲ್ಲೆಲ್ಲಾ ಆತನಿಗೆ ಕೇಡನ್ನು ಮಾಡದೆ ಒಳ್ಳೆಯದನ್ನೇ ಮಾಡುತ್ತಾಳೆ" (ಜ್ಞಾನೋ. 31:12).

ಇ. ದೇವರ ಕೃಪೆಗನುಸಾರವಾಗಿ ನಡೆದುಕೊಳ್ಳಲು ಮತ್ತು ತಮ್ಮ ಸಂಗಾತಿಗಳನ್ನು ಪ್ರೀತಿಸಲು ಕ್ರೈಸ್ತೀಯ ವಿವಾಹವು ಶಿಷ್ಯರಿಗೆ ದೊರೆಯುವ ಅವಕಾಶವಾಗಿದೆ. ಗಂಡ ಮತ್ತು ಹೆಂಡತಿ, ಒಂದುವೇಳೆ ಇಬ್ಬರೂ ವಿಶ್ವಾಸಿಗಳಾಗಿದ್ದರೆ, ಅವರು "ಜೀವವರಕ್ಕೂ ಬಾಧ್ಯಸ್ಥರಾಗಿದ್ದಾರೆ" (1 ಪೇತ್ರ 3:7). ಅವರು ತಾತ್ಕಾಲಿಕವಾದ ಕಾರ್ಯಗಳಲ್ಲಿ ಮಾತ್ರವೇ ಜೊತೆಗಾರರಲ್ಲ ಬದಲಾಗಿ ನಿತ್ಯಜೀವದಲ್ಲಿಯೂ ಜೊತೆಗಾರರಾಗಿದ್ದಾರೆ. ಅವರು ಯಾವುದೇ ತರಹವಾದ ವೈಷಮ್ಯ ಮತ್ತು ಅತೃಪ್ತಿಯನ್ನು ದೂರವಿಡುತ್ತಾರೆ ಅಥವಾ ಕ್ಷಮಾಪಣೆಯ ಮೂಲಕ ಬಗೆಹರಿಸಿಕೊಂಡು ಆತ್ಮೀಕ ಸಮಾಧಾನದಲ್ಲಿ ತಮ್ಮ ಸಂಬಂಧವನ್ನು ಕಾಪಾಡಿಕೊಳ್ಳುತ್ತಾರೆ. ಅಡೆತಡೆಗಳಿಲ್ಲದ ಪ್ರಾರ್ಥನಾ ಜೀವಿತಕ್ಕೆ ಇದು ಬಹಳ ಪ್ರಾಮುಖ್ಯ (ಮಾರ್ಕ 11:25).

ಎಫ್. ಬೇರೆ ಎಲ್ಲವುಗಳಿಗಿಂತ ಪ್ರಾಮುಖ್ಯವಾಗಿ ನಾವು ನಮ್ಮ ಬಾಳ ಸಂಗಾತಿಯೊಂದಿಗೆ ಸಮಯವನ್ನು ಕಳೆಯಬೇಕು, ಆ ಸಮಯದಲ್ಲಿ ಆಳವಾದ ಮತ್ತು ಅರ್ಥಗರ್ಭಿತವಾದ ಸಂಭಾಷಣೆಯನ್ನು ನಡೆಸಬೇಕು. ಐಕ್ಯತೆಯ ಬಲವಾದ ಬಂಧವು ಶೋಧನೆಗೆ ವಿರುದ್ಧವಾದ ಭದ್ರತೆಯಾಗಿದೆ (1 ಕೊರಿ. 7:3–5).

ಜಿ. "ದೇವರೇ ಕುಟುಂಬವನ್ನು ಸ್ಥಾಪಿಸಿದನು: ಇದು ಆತನ ರಚನೆ, ಮತ್ತು ಆತನು ಇದನ್ನು ಪ್ರೀತಿಸುತ್ತಾನೆ. ವೈವಹಿಕ ಸಂಬಂಧವು ಯೇಸು ಕ್ರಿಸ್ತನು ಸಭೆಯ ಮೇಲಿಟ್ಟಿರುವ ಪ್ರೀತಿಯ ಸಾಂಕೇತಿಕ ಪಾಠವಾಗಿದೆ ಎಂದು ಎಫೆಸ 5:22–23 ಹೇಳುತ್ತದೆ. ಇದು ಪರಿಶುದ್ಧವಾದ, ಸುಂದರ ಸಂಸ್ಥೆ, ತನ್ನ ಮದಲಗಿತ್ತಿಗಾಗಿ ಆತನಲ್ಲಿರುವ ಪರಿಶುದ್ಧವಾದ ಮತ್ತು ಪರಿಪೂರ್ಣವಾದ ಮಿನುಗುವ ಚಿತ್ರಣವಾಗಿರಬೇಕೆಂಬದು ಆತನ ಬಯಕೆಯಾಗಿದೆ" – ಮಾಮಾ ತೆಲ್ಮಾ ಬೌನ್.

2. **ಶಿಷ್ಯೆಯು ತನ್ನ ಮಕ್ಕಳೊಂದಿಗಿನ ಸಂಬಂಧವನ್ನು ಮಾನ್ಯವೆಂದೆಣಿಸಬೇಕು ಮತ್ತು ಕಾಪಾಡಿಕೊಳ್ಳಬೇಕು.**

ಎ. ತಂದೆತಾಯಿಗಳು ಏನನ್ನು "ಮಾಡಬಾರದು" ಮತ್ತು ಏನನ್ನು "ಮಾಡಬೇಕು" ಎಂಬದರ ಕುರಿತು ಎಫೆಸ 6:4 ಹೇಳುತ್ತದೆ: ನಿಮ್ಮ ಮಕ್ಕಳನ್ನು ಕೆರಳಿಸಬೇಡಿರಿ. ಕರ್ತನ ಶಿಕ್ಷಣ ಮತ್ತು ಉಪದೇಶದಲ್ಲಿ ಅವರನ್ನು ಬೆಳೆಸಿರಿ.

ಬಿ. ತಂದೆತಾಯಿಗಳು ಹೆಚ್ಚಾದ ಟೀಕೆ, ಹೆಚ್ಚಾದ ಕ್ರಮಪಡಿಸುವಿಕೆ, ಅನಾವಶ್ಯಕವಾಗಿ ಮಕ್ಕಳಲ್ಲಿ ತಾರತಮ್ಯ ತೋರಿಸುವದು ಮತ್ತು ಅಸ್ತಿರವಾಗಿ ನಡೆದುಕೊಳ್ಳುವದರ ಮೂಲಕ ನಿಂದಿಸುವದು ಇವೇ ಮೊದಲಾದ ಕಾರ್ಯಗಳ ಮೂಲಕ ತಮ್ಮ ಮಕ್ಕಳನ್ನು ಕೆರಳಿಸುತ್ತಾರೆ ಮತ್ತು ಅವರಿಗೆ ಕೋಪತರಿಸುತ್ತಾರೆ (ಯಾಕೋಬ 1:2–8).

ಸಿ. ತಂದೆತಾಯಿಗಳು ಮಕ್ಕಳೊಂದಿಗಿನ (ಎಲ್ಲರೊಂದಿಗಿನ) ತಮ್ಮ ಸಂಬಂಧದಲ್ಲಿ ದೇವರ ಸ್ವಭಾವವನ್ನು ವ್ಯಕ್ತಪಡಿಸುವವರಾಗಿರಬೇಕು. ಪರಲೋಕದಲ್ಲಿರುವ ನಮ್ಮ ತಂದೆಯು ಉಪಕಾರಿಯೂ ಮತ್ತು ಕರುಣಾಳು ಆಗಿರುವಂತೆ ನಾವೂ ಇರಬೇಕು. (ಎಫೆ. 4:32).



ಡಿ. ತಂದೆಯಾಗಿರುವ ನಮ್ಮ ದೇವರು ನಮ್ಮನ್ನು ಕ್ರಮಪಡಿಸುವಂತೆಯೇ, ಆತನ ಶಿಷ್ಯೆಯರಾದ, ನಾವು ಅವಶ್ಯವಾದ ಸಮಯದಲ್ಲಿ ನಮ್ಮ ಮಕ್ಕಳನ್ನು ಪ್ರೀತಿಪೂರ್ವಕವಾಗಿ ಕ್ರಮಪಡಿಸಬೇಕು (ಇಬ್ರಿ. 12:6).

ಇ. "ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು" ಎಂದು ಜ್ಞಾನೋಕ್ತಿ 22:6 ಹೇಳುತ್ತದೆ. "ಶಿಕ್ಷಣ" ಎಂಬ ಪದವು ತಿದ್ದುವಿಕೆ ಮತ್ತು ಶಿಸ್ತು ಇವೆರಡನ್ನು ಒಳಗೊಂಡಿರುವಂಥ ಪದವಾಗಿದೆ.

ಎಫ್. ನಮ್ಮ ಮಕ್ಕಳು ಪಾಪ ಮಾಡುವಾಗ (ಮೂಲ ಪದದ ಅರ್ಥ ಸೂಚಿಸಬೇಕು, ತಿದ್ದಬೇಕು ಮತ್ತು ಮುಖಾಮುಖಿಯಾಗಿ ಮಾತನಾಡಬೇಕು) ಅವರನ್ನು ತಡೆಯಬೇಕು. ಏಲಿಯು ತನ್ನ ಮಕ್ಕಳು ಪಾಪ ಮಾಡುವಾಗ ಅವರನ್ನು ತಡೆಯಲಿಲ್ಲ, ಮತ್ತು ದೇವರು ಅವರನ್ನು ಅವರ ವೈರಿಗಳಿಂದ ನಾಶಮಾಡಿದನು ಎಂದು 1 ಸಮುವೇಲ 2:34–35 ರಲ್ಲಿ ನಾವು ಓದುತ್ತೇವೆ.

ಜಿ. ಬೇರೆಯವುಗಳಿಗಿಂತ ಪ್ರಾಮುಖ್ಯವಾಗಿ ನಾವು ನಮ್ಮ ಮಕ್ಕಳೊಂದಿಗೆ ಸಮಯವನ್ನು ಕಳೆಯಬೇಕು–ಆ ಸಮಯದಲ್ಲಿ ಆಳವಾದ ಮತ್ತು ಅರ್ಥಗರ್ಭಿತವಾದ ಸಂಭಾಷೆಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು (ಲೂಕ 1:17).

3. **ಶಿಷ್ಯೆಯು ತನ್ನ ಕುಟುಂಬದಲ್ಲಿರುವ ಇತರರೊಂದಿಗಿನ ಸಂಬಂಧವನ್ನು ಮಾನ್ಯವೆಂದಿಣಿಸಬೇಕು ಮತ್ತು ಅದನ್ನು ಕಾಪಾಡಿಕೊಳ್ಳಬೇಕು.**

ಎ. ಶಿಷ್ಯೆಯು ತನ್ನ ವಿವಾಹ ಸಂಬಂಧಿಗಳೊಂದಿಗೆ ಪ್ರೀತಿಪೂರ್ವಕ ಮತ್ತು ಆರದಪೂರ್ವಕ ಸಂಬಂಧವುಳ್ಳವಳಾಗಿರುತ್ತಾಳೆ. ಇದು ರೂತಳು ಸೂಕ್ತವಾದ ನಿದರ್ಶನವಾಗಿದ್ದಾಳೆ. ಆಕೆಯು ತನ್ನ ಅತ್ತೆಯನ್ನು ಕಷ್ಟಕರವಾದ ಸನ್ನಿವೇಶಗಳಲ್ಲಿ–ಅಂದರೆ ಆಕೆಯಿಂದ ಸ್ವತಂತ್ರಳಾಗಬಹುದಾದ ಸಂದರ್ಭದಲ್ಲಿಯೂ ಆಕೆಯನ್ನೇ ಪ್ರೀತಿಸಿದಳು. ಅವಳು ತನ್ನ ಬಗ್ಗೆ ಮಾತ್ರವೇ ಚಿಂತಿಸಿಕೊಳ್ಳುವವಳಾಗಿರದೆ ತನ್ನ ಅತ್ತೆಯ ಬಗ್ಗೆಯೂ ಚಿಂತಿಸಿದಳು. ಅವಳು ಜೀವಿಸುವ ದೇವರನ್ನು ನಂಬುವವಳು ಮತ್ತು ಆತನಲ್ಲಿ ಭಯಭಕ್ತಿಯುಳ್ಳವಳೂ ಆಗಿದ್ದರಿಂದಲೇ ಇದು ಸಾಧ್ಯವಾಯಿತು (ರೂತಳು 1:16–17; 2:14,18).

ಬಿ. ಶಿಷ್ಯೆಯು ತನ್ನ ಕುಟುಂಬವನ್ನು ಮಾತ್ರವಲ್ಲ ತನ್ನ ಸೇವಕಿಯರನ್ನೂ ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಆಕೆಯು ತನ್ನ ಕುಟುಂಬದ ಜವಾಬ್ದಾರಿಕೆಗಳನ್ನು ಪೂರೈಸುವದಕ್ಕಾಗಿ ಮುಂಜಾನೆ ಇನ್ನೂ ಮೊಬ್ಬಿರುವಾಗಲೇ ಎದ್ದೇಳುತ್ತಾಳೆ ಮತ್ತು ಅವಶ್ಯವಿದ್ದಲ್ಲಿ ತಡರಾತ್ರಿಯವರೆಗೂ ಎಚ್ಚರಿರುತ್ತಾಳೆ. ಆಕೆಯು ಬಹಳ ಪರಿಶ್ರಮಪಟ್ಟು ದುಡಿಯುತ್ತಾಳೆ. ತನ್ನ ಮನೆಯಲ್ಲಿ ದುಡಿಯುವವರ ಕುರಿತಾಗಿಯೂ ಆಕೆಯು ಚಿಂತಿಸುವವಳಾಗಿರುತ್ತಾಳೆ (ಜ್ಞಾನೋ 31:15–27).

ಸಿ. ಶಿಷ್ಯೆಯು ತನಗಿಂತಲೂ ವಯಸ್ಸಿನಲ್ಲಿ ಚಿಕ್ಕವರ ಮುಂದೆ ಒಳ್ಳೇ ಮಾದರಿಯಾಗಿರುತ್ತಾಳೆ ಮತ್ತು ಒಳ್ಳೆಯ ವಿಷಯವನ್ನು ಆರಿಗೆ ಕಲಿಸುವವಳಾಗಿರುತ್ತಾಳೆ (ತೀತ 2:3). ಇದಕ್ಕಾಗಿ ಆಕೆಯು ತಪ್ಪು ವರದಿಗಳನ್ನು ಮಾಡುವದಿಲ್ಲ–ಇದರ ಅರ್ಥ ಆಕೆಯು ತನ್ನ ನಾಲಿಗೆಯನ್ನು ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾಳೆ (ಯಾಕೋಬ 3:5–6, 8). ಆಕೆಯು ಶಮೆದಮೆಯುಳ್ಳವಳಾಗಿರುತ್ತಾಳೆ ಮತ್ತು ತನ್ನ ನಡತೆಯಲ್ಲಿ ಎಲ್ಲರೊಂದಿಗೂ ಪೂಜ್ಯಭಾವನೆಯೊಂದಿಗೆ ನಡೆದುಕೊಳ್ಳುತ್ತಾಳೆ.

ಡಿ. ದೈವೀಕ ಸ್ವಭಾವ ಬೆಳೆಸಿಕೊಳ್ಳುವದನ್ನು ಶಿಷ್ಯೆಯು ದೇವರ ವಾಕ್ಯಗಳಿಂದ ಕಲಿತುಕೊಳ್ಳುತ್ತಾಳೆ (1 ಪೇತ್ರ 1:5–6). ಆಕೆಯು ಎಲ್ಲಾ ಸಂಬಂಧಗಳಲ್ಲಿ ಈ ಗುಣವು ವ್ಯಕವಾಗುತ್ತದೆ.

4. **ತನ್ನ ಕುಟುಂಬದವರಲ್ಲದ ಜನರೊಂದಿಗಿನ ಸಂಬಂಧದ ವಿಷಯದಲ್ಲಿ ಶಿಷ್ಯೆಯು ಎಚ್ಚರಿಕೆಯುಳ್ಳವಳಾಗಿರಬೇಕು ಮತ್ತು ಅದನ್ನೂ ಮಾನ್ಯವೆಂದೆಣಿಸಬೇಕು.**

ಎ. ಅವಿಶ್ವಾಸಿಗಳೊಂದಿಗೆ ಬುದ್ಧಿವಂತಿಕೆಯಿಂದ ನಡೆದುಕೊಳ್ಳಬೇಕು (ಕೊಲೊ 4:5). ಅವರೊಂದಿಗಿನ ಆಕೆಯ ನಡವಳಿಕೆಯು ಸಭ್ಯವಾಗಿರಬೇಕು, ಪೂರ್ಣ ಯಥಾರ್ಥತ್ವದಿಂದ ಕೂಡಿರಬೇಕು ಆಗ ಮಾತ್ರವೇ ಕ್ರೈಸ್ತತ್ವವನ್ನು ಅವಹೇಳನ ಮಾಡಲು ಅವರಿಗೆ ಯಾವ ಕಾರಣವೂ ಕಾಣಿಸುವದಿಲ್ಲ. ಮಾತ್ರವಲ್ಲದೇ ಅವರಿಗೆ ಸುವಾರ್ತೆಯನ್ನು ಸಾರುವ ಅವಕಾಶವೂ ಇದರಿಂದ ಆಕೆಗೆ ಸಿಗುತ್ತದೆ.

ಬಿ. ಆಕೆಯು ಅತಿಥಿಸತ್ಕಾರ ಮಾಡುವವಳಾಗಿರಬೇಕು–ಇತತರ ಮತ್ತು ವಿಶೇಷವಾಗಿ ಕರ್ತನಿಗಾಗಿ ದುಡಿಯುತ್ತಾ ಕಷ್ಟಗಳಲ್ಲಿರುವವರ ಕೊರತೆಗಳನ್ನು ನೀಗಿಸಲು ಪ್ರಯತ್ನಿಸುವ ಸ್ವಭಾವದಳಾಗಿರಬೇಕು (ರೋಮಾ. 12:13).

ಸಿ. ಬಡತನದಲ್ಲಿ ಮತ್ತು ಅಗತ್ಯತೆಯಲ್ಲಿರುವವರನ್ನು ಕಂಡರೆ ಅದರಲ್ಲಿ ಸಭೆಯ ಸದಸ್ಯರಲ್ಲಿ ಯಾರಾದರೂ ಇಂಥ ಸ್ಥಿತಿಯಲ್ಲಿರುವದಾದರೆ ಅವರಿಗೆ ಧನ ಸಹಾಯ ಮಾಡುವ ಸ್ವಭಾವದವಳಾಗಿರಬೇಕು (1 ಯೋಹಾನ 3:17; ಯಾಕೋಬ 2:15).

ಡಿ. ದೇವರ ಸಭೆಯಲ್ಲಿರುವ ಅಧಿಕಾರವನ್ನು ಆಕೆಯು ಗೌರವಿಸುವವಳಾಗಿರಬೇಕು, ಆಕೆಯ ಆತ್ಮೀಕ ಹೋರಾಟಕ್ಕಾಗಿ ದೇವರ ಸಮುದಾಯಕ್ಕೆ ನಂಬಿಗಸ್ಥಿಕೆಯಿಂದ ಬೋಧನೆ ಮಾಡುವ ಸೇವಕರ ಬೋಧನೆಗಳಿಗೆ ಮತ್ತು ಅವರು ಕೊಡುವ ಎಚ್ಚರಿಕೆಗಳಿಗೆ ವಿಧೇಯಳಾಗಬೇಕು (ಇಬ್ರಿ. 13:17).

ಇ. ಆಕೆಯು ಲೌಕಿಕ ಕೆಲಸದಲ್ಲಿರುವದಾದರೆ, ತನ್ನ ಮೇಲಧಿಕಾರಿಗಳಿಗೆ ಆಕೆಯು ವಿಧೇಯಳಾಗಿರಬೇಕು ಮತ್ತು ಅವರನ್ನು ಗೌರವಿಸಬೇಕು. ತಾನು ಮಾಡುತ್ತಿರುವ ಕಾರ್ಯಗಳನ್ನು ಕರ್ತನಿಗಾಗಿಯೇ ಮಾಡಿತ್ತಿದ್ದೇನೆಂದು ತಿಳಿದು ನಂಬಿಗಸ್ಥಳಾಗಿರಬೇಕು (ಎಫೆ. 6:5–8). ಕ್ರೈಸ್ತೀಯ ನಂಬಿಕೆ ಮತ್ತು ವಾಕ್ಯಗಳಿಗೆ ವಿರುದ್ಧವಾಗಿರದ ವಿಷಯಗಳಿಗೆ ಮಾತ್ರವೇ ಆಕೆಯು ವಿಧೇಯಳಾಗಿರಬೇಕು.

5. **ದೇವರ ವಾಕ್ಯದಲ್ಲಿ ಬರೆಯಲ್ಪಟ್ಟಿರುವ ಪ್ರಕಾರ ಶಿಷ್ಯೆಯು ಇತರರೊಂದಿಗೆ ಐಕ್ಯತೆಯಲ್ಲಿ ಜೀವಿಸಬೇಕು** (ಮುಂದಿನ ಪುಟದಲ್ಲಿ **"**ಒಬ್ಬರನ್ನೊಬ್ಬರು**"** ಪದ ಸತ್ಯವೇದದಲ್ಲಿ ಬಳಕೆಯಾಗಿರುವದನ್ನು ನೋಡಿರಿ).

## ದೇವರನ್ನು ಮೆಚ್ಚಿಸಲು ಒಬ್ಬರೊಂದಿಗೊಬ್ಬರು ಹೇಗಿರಬೇಕೆಂದು ಹೇಳಲು ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ "ಒಬ್ಬರನ್ನೊಬ್ಬರು" ಪದಗಳು:

**ಒಬ್ಬರನ್ನೊಬ್ಬರು ಪ್ರೀತಿಸಿರಿ:**

1] 1 ಯೋಹಾನ 4:7 – ಒಬ್ಬರನ್ನೊಬ್ಬರು ಪ್ರೀತಿಸಿರಿ
2] 1 ಪೇತ್ರ 4:8 – ನಿಮ್ಮನಿಮ್ಮೊಳಗೆ ಆಳವಾದ ಪ್ರೀತಿಯಿರಲಿ
3] 1 ಪೇತ್ರ 1:22 – ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿಯೂ, ಯಥಾರ್ಥವಾಗಿಯೂ ಪ್ರೀತಿಸಿರಿ
4] 1 ಪೇತ್ರ 3:8 – ಒಬ್ಬರೊಂದಿಗೊಬ್ಬರು ಏಕಮನಸ್ಸುಳ್ಳವರಾಗಿರಿ
5] ರೋಮಾ 12:10ಎ – ಒಬ್ಬರೊಂದಿಗೊಬ್ಬರು ಸಹೋದರ ಪ್ರೀತಿಯಲ್ಲಿ ನೆಲೆಯಾಗಿರಿ
6] ಗಲಾ. 5:13 – ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡಿರಿ

**ಒಬ್ಬರನ್ನೊಬ್ಬರು ಗೌರವಿಸಿರಿ:**

7] ಯೋಹಾನ 13:14 – ನೀವು ಸಹ ಒಬ್ಬರ ಕಾಲನ್ನು ಒಬ್ಬರು ತೊಳೆಯಬೇಕು
8] 1 ಪೇತ್ರ 5:5 – ನೀವೆಲ್ಲರೂ ಒಬ್ಬರಿಗೊಬ್ಬರು ದೀನಮನಸ್ಸೆಂಬ ವಸ್ತ್ರದಿಂದ ಸೊಂಟಕಟ್ಟಿಕೊಳ್ಳಿರಿ
9] ಫಿಲಿ. 2:3 – ಪ್ರತಿಯೊಬ್ಬರು ದೀನಮನಸ್ಸಿನಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಿರಿ
10] ಎಫೆ. 4:2 – ದೀರ್ಘಶಾಂತಿಯಿಂದ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ
11] ರೋಮಾ 15:7 – ಕ್ರಿಸ್ತನು ನಿಮ್ಮನ್ನು ಸೇರಿಸಿಕೊಂಡಂತೆ ನೀವು ಒಬ್ಬರನ್ನೊಬ್ಬರು ಸೇರಿಸಿಕೊಳ್ಳಿರಿ
12] ರೋಮಾ 12:10 – ಒಬ್ಬರಿಗೊಬ್ಬರು ಮರ್ಯಾದೆ ತೋರಿಸಿರಿ (ವ. 10ಬಿ)
13] ಎಫೆ. 5:21 – ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ
14] ಫಿಲಿ. 2:4 – ಪರರ ಹಿತವನ್ನು ನೋಡಿರಿ
15] ಮಾರ್ಕ 9:50 – ಒಬ್ಬರಿಗೊಬ್ಬರು ಸಮಾಧಾನದಿಂದಿರಿ

**ಒಬ್ಬರನ್ನೊಬ್ಬರು ಕ್ಷಮಿಸಿರಿ:**

16] ರೋಮಾ 14:13 – ಒಬ್ಬರ ವಿಷಯದಲ್ಲೊಬ್ಬರು ತೀರ್ಪು ಮಾಡದೆ ಇರೋಣ
17] ಎಫೆ. 4:32 – ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ, ಕರುಣೆಯುಳ್ಳವರಾಗಿಯೂ, ಕ್ಷಮಿಸುವವರಾಗಿಯೂ ಇರ್ರಿ.
18] ಕೊಲೊ. 3:13 – ಒಬ್ಬರಿಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ
19] ರೋಮಾ 12:14–16 – ಆಶೀರ್ವದಿಸಿರಿ, ಸಂತೋಷಿಸಿರಿ, ಅಳಿರಿ, ಏಕಮಸ್ಸುಳ್ಳವರಾಗಿರ್ರಿ ಒಬ್ಬರನ್ನೊಬ್ಬರು ಪ್ರೋತ್ಸಾಹಪಡಿಸಿರಿ
20] 1 ಥೆಸ 5:11 – ಒಬ್ಬರನ್ನೊಬ್ಬರು ಸಂತೈಸಿರಿ
21] 1 ಥೆಸ 5:11 – ಒಬ್ಬರನ್ನೊಬ್ಬರು ವೃದ್ಧಿಪಡಿಸಿರಿ
22] ರೋಮಾ 14:19 – ಪರಸ್ಪರ ಭಕ್ತಿಯನ್ನು ವೃದ್ಧಿಪಡಿಸೋಣ
23] ಗಲಾ. 6:2 – ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಿರಿ
24] ಕೊಲೊ. 3:16 – ಸಕಲಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳಿರಿ
25] ಇಬ್ರಿ. 10:24 – ಪ್ರೀತಿಸಲು ಮತ್ತು ಸತ್ಕಾರ್ಯಮಾಡಲು ಒಬ್ಬರನ್ನೊಬರು ಪ್ರೇರೇಪಿಸೋಣ
26] 1 ಪೇತ್ರ 4:10 – ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೆಯ ಮನೆವಾರ್ತೆಯವರಾಗಿದ್ದು ಒಬ್ಬರಿಗೊಬ್ಬರು ಸೇವೆ ಮಾಡೋಣ
27] ಇಬ್ರಿ. 3:13 – ಪ್ರತಿನಿತ್ಯವೂ ಒಬ್ಬರನ್ನೊಬ್ಬರು ಎಚ್ಚರಿಸೋಣ
28] ಫಿಲಿ 1:4 – ಒಬ್ಬರಿಗಾಗೊಬ್ಬರು ಪ್ರಾರ್ಥನೆ ಮಾಡಿರಿ

**“ಮಾಡಬಾರದವುಗಳು”:**

29] ಯಾಕೋಬ 4:11 – ಒಬ್ಬರನ್ನೊಬ್ಬರು ನಿಂದಿಸದಿರೋಣ
30] ಗಲಾ. 5:15 – ಒಬ್ಬರನ್ನೊಬ್ಬರು ಕಚ್ಚಿ ಹರಕೊಂಡು ನುಂಗದವರಾಗಿರೋಣ
31] ಗಲಾ. 5:26 – ಒಬ್ಬರನ್ನೊಬ್ಬರು ಕೆಣಕದವರೂ, ಮತ್ಸರವುಳ್ಳವರೂ ಆಗಿರದೆ ಇರೋಣ
32] ಯಾಕೋಬ 5:9 – ಒಬ್ಬರಮೇಲೊಬ್ಬರು ಗುಣಗುಟ್ಟದವರಾಗಿರೋಣ
33] ಕೊಲೊ 3:9 – ಒಬ್ಬರಿಗೊಬ್ಬರು ಸುಳ್ಳಾಡದೆ ಇರೋಣ
34] ರೋಮಾ 14:13 – ಒಬ್ಬರಿಗೊಬ್ಬರು ಅಡಚಣೆಯನ್ನು ಮಾಡದವರಾಗಿರೋಣ

**ಚರ್ಚಾ ಪ್ರಶ್ನೆಗಳು**

1. ಕ್ರೈಸ್ತೀಯ ಮಹಿಳೆಯು ತನ್ನ ಗಂಡನೊಂದಿನೊಂದಿಗಿನ ಸಂಬಂಧವನ್ನು ಹೇಗೆ **“ಕಾಪಾಡಿಕೊಳ್ಳಬೇಕು?”**

2. ಕ್ರೈಸ್ತರು ತಮ್ಮ ಮಕ್ಕಳಿಗೆ ಮಾದರಿಗಳಾಗಿರಲು ಪ್ರಾಮುಖ್ಯವಾದ ಯಾವ ಗುಣಗಳನ್ನು ದೇವರು ತನ್ನ ಸ್ವಭಾವದಲ್ಲಿ ಪ್ರಕಟಪಡಿಸಿದ್ದಾನೆ?

3. ಕ್ರೈಸ್ತೀಯ ಸ್ತ್ರೀಯು ತನ್ನ ಅತ್ತೆ–ಮಾವಂದಿರಿಗೆ ಯಾವ ರೀತಿ ಪ್ರೀತಿಯನ್ನು ತೋರಿಸಬಹುದು?

**ಪ್ರಾರ್ಥನೆ**

*ಪ್ರೀತಿಯುಳ್ಳ ದೇವರೇ, ನಿನ್ನ ವಾಕ್ಯಗಳು ಹೇಳುವಂತೆ ಇತರರೊಂದಿಗೆ ಒಳ್ಳೆಯ ಮತ್ತು ಸರಿಯಾದ ಸಂಬಂಧವನ್ನು ಇಟ್ಟುಕೊಳ್ಳಲು ನಿನ್ನ ಕೃಪೆಯಿಂದ ನನ್ನನ್ನು ಬಲಪಡಿಸು. ನಾನು ಪ್ರತಿಯೊಂದು ಸಂಬಂಧವನ್ನು ಅದರ ಪ್ರಾಮುಖ್ಯತೆಗನುಸಾರವಾಗಿ ಮಾನ್ಯವೆಂದೆಣಿಸುತ್ತಾ, ಇತರರೊಂದಿಗಿನ ನನ್ನ ಪ್ರತಿಯೊಂದು ವ್ಯವಹಾರಗಳಲ್ಲಿಯೂ ನಿನ್ನನ್ನು ಘನಪಡಿಸುವವಳಾಗಬೇಕು. ಆಮೆನ್.*

# ನೋಟ್ಸ್

# 7 ಶಿಷ್ಯೇ ಮತ್ತು ಆತ್ಮಗಳನ್ನು ಗೆಲ್ಲುವದು

**ಕೀ ವಚನ: ಜ್ಞಾನೋಕ್ತಿಗಳು 11:30**

"ಜ್ಞಾನಿಯು ಆತ್ಮಗಳನ್ನು ಆಕರ್ಷಿಸುವನು."

*ವಿನ್ ಶಿಷ್ಯತ್ವ ಮ್ಯಾನುವಲ್ ನ ಈ ಪಾಠವು ತೆಲ್ಮಾ ಬೌನ್‌ರವರು ಬರೆದಿರುವ **"ಸೆವೆನ್-ಸ್ಟೆಪ್-ಸೋಲ್-ಸೇವಿಂಗ್-ಸೆಮಿನಾರ್"** ಎಂಬ ಪುಸ್ತಕದ ಹಲವಾರು ಅಧ್ಯಾಯಗಳ ಸಂಗ್ರಹಣೆಯಾಗಿದೆ. **ತೆಲ್ಮಾ ಬೌನ್**ರವರಿಂದ ಪ್ರೇರಿತರಾದ ಭಾರತದ ಸ್ತ್ರೀಯರು ಅವರನ್ನು ಪ್ರೀತಿಯಿಂದ **"ಮಾಮ"** ಎಂದು ಕರೆಯುತ್ತಿದ್ದರು. ಅವರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮತ್ತು ಅವರ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾದ ಪ್ರತಿಯೊಬ್ಬರಿಗೂ ಅವರು ಪ್ರೇರಣೆಯಾಗಿದ್ದ ಬಗೆಯನ್ನು ತಿಳಿದುಕೊಳ್ಳಲು ಸಮರ್ಪಣೆಯ ಪುಟವನ್ನು ನೋಡಿರಿ.*

*ಈ ಪುಸ್ತಕವು ಸಾಕ್ಷಿಯಾಗಿ ನಿಲ್ಲುವ ಮತ್ತು ಆತ್ಮಗಳನ್ನು ಗೆಲ್ಲುವ ವಿಧಾನಗಳನ್ನು ಕಲಿಸುತ್ತದೆ ಹಾಗೂ ಇದರ ಏಳು ಪಾಠಗಳನ್ನು **"ಸ್ಟೆಪ್ಸ್"** ಎಂದು ಕರೆಯಲಾಗುತ್ತದೆ. ಐದು ಪಾಠಗಳನ್ನು ಈ ಮ್ಯಾನುವಲ್‌ನಲ್ಲಿ ಸೇರಿಸಲಾಗಿದೆ. ಮೊದಲನೆಯದು ಆತ್ಮಗಳನ್ನು ಗೆಲ್ಲಲು ಕಾರಣಗಳನ್ನು ತಿಳಿಸುತ್ತದೆ ಮತ್ತು ಉಳಿದ ನಾಲ್ಕು ಸುವಾರ್ತೆ ಸಾರಲು ಪರಿಣಾಮಕಾರಿಯಾದ ವಿಧಾನಗಳನ್ನು ತಿಳಿಯಪಡಿಸುತ್ತದೆ.*

## 1 ಆತ್ಮಗಳನ್ನು ಗೆಲ್ಲಲು ಕಾರಣಗಳು

ಕೆಲವರನ್ನು ಮಾತ್ರವೇ ಬೋಧಕರು ಎಂದು ಕರೆಯಲಾಗುತ್ತದೆ, ಆದರೆ ಹೊಸದಾಗಿ ಹುಟ್ಟಿರುವ ಪ್ರತಿಯೊಬ್ಬ ಕ್ರೈಸ್ತನನ್ನು ಆತ್ಮಗಳನ್ನು ಗೆಲ್ಲುವವನು ಎಂದು ಕರೆಯಲಾಗುತ್ತದೆ. ನೀವು ನಿಮ್ಮ ಜನರನ್ನು ಆತ್ಮಗಳನ್ನು ಗೆಲ್ಲುವ ಸಂತೋಷಕ್ಕೆ ಮುನ್ನಡೆಸಬೇಕು.

*"ಆತ್ಮಗಳನ್ನು ಗೆಲ್ಲುವದು ನಿಶ್ಚಿತವಾದ ಸಮಯದಲ್ಲಿ, ನಿಶ್ಚಿತವಾದ ರಕ್ಷಕನನ್ನು ಅಂಗೀಕರಿಸಿಕೊಳ್ಳುವಂತೆ ನಿಶ್ಚಿತವಾದ ವ್ಯಕ್ತಿಯನ್ನು ಮುನ್ನಡೆಸುವ ನಿಶ್ಚಿತವಾದ ಪರಿಶ್ರಮವಾಗಿದೆ."*

ಬಿಲ್ಲಿ ಸಂಡೇ

### ಆತ್ಮಗಳನ್ನು ಗೆಲ್ಲುವವನಾಗಿರಲು ಕಾರಣಗಳು

1. ಅತ್ಮದ ಬೆಲೆ (ಮಾರ್ಕ 8:35–38).
2. ನರಕದ ನಿಜಸ್ಥಿತಿ (ಲೂಕ 12:4–5)
3. ಪ್ರತಿಯೊಬ್ಬ ಪಾಪಿಗಾಗಿ ಶಿಲುಬೆಯ ಮೇಲೆ ಯೇಸು ಕ್ರಿಸ್ತನು ಪಟ್ಟ ಶ್ರಮಗಳು (1 ಪೇತ 3:18).
4. ಈ ಲೋಕದ ಶೂನ್ಯತೆ ಮತ್ತು ಅವಿವೇಕತನ (1 ಪೇತ್ರ 1:24–25).
5. ಪರಲೋಕದಲ್ಲಿ ಕುಟುಂಬದ ಚಕ್ರವು ಪರಿಪೂರ್ಣವಾಗಬೇಕೆಂಬ ಬಯಕೆ (1 ಥೆಸ 4:16–17).
6. ಪರಲೋಕದ ಮಹಿಮೆಗಳು (ಯೋಹಾನ 14:2–3).
7. ನಂಬಿಗಸ್ಥರಾಗಿ ಆತ್ಮಗಳನ್ನು ಸಂಪಾದಿಸುವವರಿಗೆ ಕೊಡಲಾಗುವ ವೈಯಕ್ತಿಕ ಬಹುಮಾನಗಳು (ದಾನಿ. 12:3).

### ವೈಯಕ್ತಿಕ ಕೆಲಸಗಾರನ ಅವಶ್ಯಕತೆಗಳು

1. ಆಕೆಯು ರಕ್ಷಣೆ ಹೊಂದಿರಬೇಕು ಮತ್ತು ತನ್ನ ರಕ್ಷಣೆಯ ಭರವಸೆ ಆಕೆಗಿರಬೇಕು (2 ಪೇತ್ರ 1:10–11).
2. ಆತನು ಪರಿಶುದ್ಧ ಜೀವನ ನಡೆಸಬೇಕು (2 ಪೇತ್ರ 3:14).
3. ಆಕೆಯು ಪ್ರೀತಿಯ ಅತ್ಮದೊಡನೆ ಕೆಲಸ ಮಾಡಬೇಕು (1 ಪೇತ್ರ 1:22–23).
4. ಸತ್ಯವೇದದ ಒಳ್ಳೆಯ ತಿಳುವಳಿಕೆಯಿರಬೇಕು ಮತ್ತು ಅದನ್ನು ಹೇಗೆ ಉಪಯೋಗಿಸಬೇಕು ಎಂಬದು ಆಕೆಗೆ ಗೊತ್ತಿರಬೇಕು (2 ತಿಮೊ. 2:15).
5. ಆಕೆಯು ಪ್ರಾರ್ಥನಾ ಮನುಷ್ಯಳಾಗಿರಬೇಕು (ಎಫೆ. 6:18).
6. ಆಕೆಯು ಪವಿತ್ರಾತ್ಮಭರಿತಳಾಗಿರಬೇಕು (ಎಫೆ. 5:18).
7. ನಾಶನದ ಮಾರ್ಗದಲ್ಲಿರುವ ಆತ್ಮಗಳಿಗಾಗಿ ಅವಳು ಕರುಣೆಯುಳ್ಳವಳಾಗಿರಬೇಕು (ಯೂದ 23).

### ಚರ್ಚಾ ಪ್ರಶ್ನೆಗಳು:

ಮೇಲೆ ಕೊಡಲಾಗಿರುವ ಪ್ರತಿಯೊಂದು ಅಗತ್ಯತೆಯು ಪ್ರಾಮುಖ್ಯವಾಗಿದೆ, ಯಾಕೆ?

## 2 ಸಾಕ್ಷಿಯಾಗಿರುವದು ಹೇಗೆ

ಯಾವ ಆತ್ಮವೂ ನಾಶವಾಗಬಾರದು ಬದಲಾಗಿ ಎಲ್ಲರೂ ಪಶ್ಚಾತ್ತಾಪಪಡಬೇಕು ಎಂಬದು ನಮ್ಮ ಕರ್ತನ ಬಯಕೆಯಾಗಿದೆ (2 ಪೇತ್ರ 3:9ಬಿ). ಪ್ರತಿಯೊಬ್ಬ ವ್ಯಕ್ತಿಗೂ ಸುವಾರ್ತಾ ಸಂದೇಶವನ್ನು ಕೇಳುವ ಅವಕಾಶ ದೊರೆಯಬೇಕು ಎಂಬದು ದೇವರು ಬಯಕೆಯಾಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರತಿಯೊಬ್ಬ ವಿಶ್ವಸಿಯೂ, ದೇವರು ಅವಕಾಶವನ್ನು ಕೊಡುವಾಗ ಸುವಾರ್ತೆಯನ್ನು ಸಾರಲು ಮೊದಲೇ ಸಿದ್ಧರಾಗಿರಬೇಕು.

### ಸಾಕ್ಷಿಯಾಗಿರುವದು ಹೇಗೆ

1. ಯೇಸು ಕ್ರಿಸ್ತನಿಗೆ ಸಾಕ್ಷಿಯಾಗ ಬಯಸುವವಳು ತಾನೇ ರಕ್ಷಣೆ ಹೊಂದಿರಬೇಕು (ರೋಮಾ. 5:9–11).
2. ನಿಮ್ಮ ರೂಪಾಂತರ ಮತ್ತು ನಿಮ್ಮ ಜೀವಿತದಲ್ಲಾದ ಬದಲಾವಣೆಯ ಕುರಿತು ಸರಳವಾದ ಕಥೆಯನ್ನು ಹೇಳಿರಿ (ಕೀರ್ತನೆ 51:12–13).
3. ನಿಮ್ಮ ಪ್ರಾರ್ಥನೆಗೆ ದೊರೆತ ಉತ್ತರಗಳನ್ನು ಹಂಚಿಕೊಳ್ಳಿರಿ (ಕೀರ್ತನೆ 50:15).
4. ಯೇಸು ಕ್ರಿಸ್ತನು ನಿಮ್ಮನ್ನು ಸಂಪೂರ್ಣವಾಗಿ ಹೇಗೆ ತೃಪ್ತಿಪಡಿಸುತ್ತಾನೆ ಎಂಬದನ್ನು ಹಂಚಿಕೊಳ್ಳಿರಿ (ಕೀರ್ತನೆ 107:8–9).
5. ಪಾಪ ಮತ್ತು ಶೋಧನೆಗಳ ಮೇಲೆ ನಿಮಗೆ ದೊರೆತ ವೈಯಕ್ತಿಕ ಜಯದ ಬಗ್ಗೆ ಹಂಚಿಕೊಳ್ಳಿರಿ (1 ಯೋಹಾನ 5:4–5).
6. ಸತ್ಯವೇದದಲ್ಲಿ ನಿಮಗೆ ಅತಿಪ್ರಿಯವಾದ ವಾಕ್ಯ ಯಾವುದು ಮತ್ತು ಸತ್ಯವೇದದ ವಚನಭಾಗದಿಂದ ದೇವರು ಇಂದು ಬೆಳಗ್ಗೆ ಮಾತನಾಡಿದ ವಿಷಯವನ್ನು ಹಂಚಿಕೊಳ್ಳಿರಿ.
7. ನಿನ್ನ ಸ್ನೇಹಿತರಿಗೆ ಯೇಸು ಕ್ರಿಸ್ತನ ಸುವಾರ್ತೆಯನ್ನು ಹೇಳಿರಿ. ಆತನ ಬಗ್ಗೆ ಅವರಿಗೆ ಹೇಳಿರಿ (ರೋಮಾ. 1:16).
8. ಬಂದು ನೋಡುವಂತೆ ಅವರನ್ನು ಆಹ್ವಾನಿಸಿರಿ (ಯೋಹಾನ 1:29–51).
9. ಯೇಸು ಕ್ರಿಸ್ತನನ್ನು ಹಿಂಬಾಲಿಸಿರಿ (ಮತ್ತಾ. 4:12–27; ಮಾರ್ಕ 1:16–20).

### ಕ್ರಿಸ್ತನಿಗೆ ಅರಿಕೆ ಮಾಡಲು ಮುಂದಾಗುವ ಆಗುವ ಅಡಚಣೆಗಳು

1. ಮನುಷ್ಯರ ಭರ (2 ತಿಮೊ. 1:7; 1 ಯೋಹಾನ 4:18; ಫಿಲಿ. 4:13).
2. ನಾಚಿಕೆ (2 ತಿಮೊ. 1:8).
3. ಅಪರಿಶುದ್ಧವಾದ ಜೀವಿತ (1 ಯೋಹಾನ 1:9).

*ಗಮನಿಸಿರಿ: ಸಾಕ್ಷಿ ಕೊಡದಿದ್ದರೆ ಎದುರಿಸಬೇಕಾದ ಅಪಾಯ ಬಗ್ಗೆ ತಿಳಿಯಲು ಯೆಹೆ. 33:8 ಓದಿರಿ!*

## ನಿಮ್ಮ ವೈಯಕ್ತಿಕ ಸಾಕ್ಷಿಯನ್ನು ನೀವೇ ಸಿದ್ಧಪಡಿಸಿಕೊಳ್ಳಿರಿ

ನೀವು ಪ್ರಬಲವಾಗಿ ಸಾಕ್ಷೀ ಕೊಡಲು ಇರುವ ಅತ್ಯಂತ ಪರಿಣಾಮಕಾರಿಯಾದ ಮಾರ್ಗವೆಂದರೆ ಕ್ರಿಸ್ತನೊಂದಿಗಿನ ನಿಮ್ಮ ಸಂಬಂಧ ಮತ್ತು ಅದರಿಂದ ನಿಮ್ಮ ಜೀವಿತದಲ್ಲಾಗಿರುವ ಪ್ರಭಾವದ ಕುರಿತಾದ ನಿಮ್ಮ ಸ್ವಂತ ಅನುಭವವಾಗಿದೆ. ಕಣ್ಣು ಬಂದ ನಂತರ ಕುರುಡನು ಧಾರ್ಮಿಕ ನಾಯಕರಿಗೆ ಕೊಟ್ಟ ಸಾಕ್ಷೆ ಏನಂದರೆ, ***"ಒಂದು ಮಾತ್ರ ಬಲ್ಲೆ, ಕುರುಡನಾಗಿದ್ದೆನು ಈಗ ಕಣ್ಣು ಕಾಣುತ್ತವೆ"*** (ಯೋಹಾನ 9:25ಬಿ). ಸಿದ್ಧಾಂತಗಳು ಅಥವಾ ದೃಷ್ಟಿಕೋನದ ಅಂಶಗಳ ವಿಷಯದಲ್ಲಿ ವಾದಿಸುವ ಬಯಕೆಯೊಂದಿಗೆ ಕೆಲವರು ವಚನಭಾಗವನ್ನು ವಿರೋಧಿಸುತ್ತಾರೆ, ಆದರೆ ಕ್ರಿಸ್ತನು ಬದಲಾಯಿಸಿರುವ ಜೀವಿತದ ಸಾಕ್ಷಿಯನ್ನು ಅಲ್ಲಗಳೆಯುವದು ಬಹಳ ಕಷ್ಟಕರವಾದದ್ದಾಗಿದೆ.

## ನಿಮ್ಮ ವೈಯಕ್ತಿಕ ಸಾಕ್ಷಿಯಲ್ಲಿರಬೇಕಾದ ವಿಷಯಗಳು

**1. ನೀವು ಕ್ರೈಸ್ತರಾಗುವದಕ್ಕೂ ಮೊದಲು ನಿಮ್ಮ ಜೀವಿತವು ಹೇಗಿತ್ತು ಎಂಬದನ್ನು ಹೇಳಿರಿ.** ಯೇಸು ಕ್ರಿಸ್ತನನ್ನು ತಿಳಿದುಕೊಳ್ಳುವದಕ್ಕೂ ಮೊದಲು ಅವಿಶ್ವಾಸಿಗಳ ಜೀವಿತದಲ್ಲಿ ಸಹಜವಾಗಿ ಕಾಣಿಸುವ ಎರಡು ವಿಷಯಗಳಾದ ಶೂನ್ಯತೆಯ ಭಾವನೆ ಮತ್ತು ನಿರೀಕ್ಷೆಯಿಲ್ಲದಿರುವೆಯ ಅಂಶಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟು ವಿವರಿಸಿರಿ. ಪಾಪದ ಜೀವಿತವನ್ನು ವೈಭವೀಕರಿಸದಿರುವ ಸಲುವಾಗಿ, ಯಾವುದೇ ಪಾಪದ ಕಾರ್ಯ್ಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡದಂತೆ ಎಚ್ಚರವಹಿಸಿರಿ.

**2. ಯೇಸು ಕ್ರಿಸ್ತನ ಕುರಿತು ಎಲ್ಲಿ ಮತ್ತು ಯಾವಾಗ ನೀವು ಕೇಳಿಸಿಕೊಂಡಿರಿ ಹಾಗೂ ಆತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವ ತೀರ್ಮಾನವನ್ನು ಯಾಕೆ ತೆಗೆದುಕೊಂಡಿರಿ ಎಂಬದನ್ನು ವಿವರಿಸಿರಿ.** ಆತನನ್ನು ಅಂಗೀಕರಿಸಿಕೊಳ್ಳಬೇಕೆಂಬ ನಿಮ್ಮ ತೀರ್ಮಾನವನ್ನು ವಿವರಿಸುವಾಗ, ನೀವು ಕೊಡುತ್ತಿರುವ ಸಾಕ್ಷಿಯನ್ನು ಕೇಳುತ್ತಿರುವವರ ಜೀವಿತದಲ್ಲಿ ಪವಿತ್ರಾತ್ಮನು ಕಾರ್ಯ ಮಾಡುವಂತೆ ಹಾಗೂ ಅವರಲ್ಲಿ ಪಾಪದ ಪಶ್ಚಾತ್ತಾಪವನ್ನು ಹುಟ್ಟಿಸುವಂತೆ ಮನಸ್ಸಿನೊಳಗೇ ಪ್ರಾರ್ಥಿಸಿರಿ.

**3. ಕ್ರೈಸ್ತರಾದ ಮೇಲೆ ನಿಮ್ಮ ಜೀವಿತವು ಬದಲಾದ ರೀತಿಯನ್ನು ವಿವರಿಸಿರಿ.** ಪರಲೋಕದ ರಾಜ್ಯದ ಬಾಧ್ಯಸ್ಥರಾಗಿ ನಿಮಗೆ ದೊರೆತಿರುವ ಸಂತೋಷ ಮತ್ತು ಸಮಾಧಾನದ ಬಗ್ಗೆ ಹಂಚಿಕೊಳ್ಳಿರಿ. ದೇವರು ನಿಮ್ಮ ಜೀವಿತವನ್ನು ಬದಲಾಯಿಸಿರುವ ಮಾರ್ಗಗಳನ್ನು ಸ್ಪಷ್ಟವಾಗಿ ತಿಳಿಯಪಡಿಸಿರಿ.

**4. ಸತ್ಯವೇದದ ವಾಕ್ಯಗಳನ್ನು ಬಳಸಿರಿ.**

## ಮಾಡಬೇಕಾದ ಕಾರ್ಯ

*ಮೇಲೆ ಕೊಡಲಾಗಿರುವ ಪ್ರತಿಯೊಂದು ಅಂಶದ ಕುರಿತಾಗಿಯೂ ಸಂಕ್ಷಿಪ್ತವಾಗಿ ನಾಲ್ಕೈದು ಸಾಲುಗಳನ್ನು ಬರೆಯಿರಿ. ನಿಮ್ಮ ಸಾಕ್ಷಿಯನ್ನು ಸ್ಪಷ್ಟ ಮತ್ತು ಪರಿಣಾಮಕಾರಿಯನ್ನಾಗಿ ಮಾಡುವದು ಹೇಗೆ ಎಂಬದನ್ನು ತಿಳಿಸುವಂತೆ ಕರ್ತನನ್ನು ಬೇಡಿಕೊಳ್ಳಿರಿ.*

# ನೋಟ್ಸ್

# 3 ಐದು–ಬೆರಳುಗಳ ಸುವಾರ್ತೀಕರಣ

ಸುವಾರ್ತೀಕರಣದ ಸರಳವಾದ ವಿಧಾನಕ್ಕೆ ವಿಶೇಷವಾದ ಸಾಮಗ್ರಿಗಳಾಗಲಿ ಅಥವಾ ಪುಸ್ತಕಗಳಾಗಲಿ ಬೇಕಾಗಿಲ್ಲ. ನಮ್ಮ ಎಡ ಹಸ್ತದ ಬೆರಳುಗಳ ಸಹಾಯದಿಂದಲೇ ರಕ್ಷಣೆಯ ಯೋಜನೆಯನ್ನು ವಿವರಿಸಬಹುದು. ಈ ವಿಧಾನದಲ್ಲಿ ನೀವು ವಚನಗಳನ್ನು ಕಂಠಪಾಟ ಮಾಡಿರಬೇಕು. ಆದರೆ ಸುವಾರ್ತೆಯನ್ನು ಸಾರಲು ನೀವು ಯಾವಾಗಲೂ ಪ್ರಾಯೋಗಿಕವಾದ ರೀತಿಯಲ್ಲಿಯೇ ಸಿದ್ಧರಾಗಿರಬೇಕು. ಒಂದುವೇಳೆ ಕೇಳುಗನು ಆಸಕ್ತನಾಗಿರುವದು ನಿಮ್ಮ ಗಮನಕ್ಕೆ ಬರುವದಾದರೆ, ಆಗ ನಿಮಗೆ ಸರಿತೋಚಿದರೆ ಆತನ ಅಥವಾ ಆಕೆಯ ಕೈಯನ್ನು ಹಿಡಿದು ನೀವು ಹಂಚುತ್ತಿರುವ ವಿಷಯಗಳೆಂದರೆ ಏನು ಎಂದು ಅವರ ಬೆರಳುಗಳನ್ನು ಸೂಚಿಸುತ್ತಾ ವಿವರಿಸಿರಿ.

**1** **ಮೊದಲನೆಯ ಬೆರಳು –**

**ದೇವರು ನಿಮ್ಮನ್ನು ಪ್ರೀತಿಸುತ್ತಾನೆ. (ಯೋಹಾನ 3:16)**

*"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವ ಪಡೆಯಬೇಕೆಂದು ಆತನನ್ನು ಕೊಟ್ಟನು."*

**2** **ಎರಡನೆಯ ಬೆರಳು –**

**ಎಲ್ಲರೂ ಪಾಪ ಮಾಡಿದ್ದಾರೆ. (ರೋಮಾ 3:23)**

*"ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ."*

**3** **ಮೂರನೆಯ ಬೆರಳು –**

**ಕ್ರಿಸ್ತನು ನಮ್ಮ ಪಾಪಗಳಿಗೆ ಕ್ರಯವನ್ನು ಕೊಡುವದಕ್ಕಾಗಿ ಸತ್ತನು. (1 ಕೊರಿಂಥ 15:3,4)**

*"ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತುಕೊಂಡದ್ದೇ. ಅದೇನೆಂದರೆ ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು."*

**4** **ನಾಲ್ಕನೇ ಬೆರಳು –**


**ಯೇಸು ಕ್ರಿಸ್ತನು ನಿಮ್ಮ ಪಾಪಗಳಿಗಾಗಿ ಸತ್ತನು ಎಂದು ನಂಬಿರಿ. (ಯೋಹಾನ 1:12)**

*"ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು."*

**5** **ಐದನೇ ಬೆರಳು –**

**ನೀವು ನಂಬುವಾಗ, ನೀವು ನಿತ್ಯಜೀವವನ್ನು ಪಡೆಯುವಿರಿ. (ರೋಮಾ 6:23)**

*"ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ." ಯೇಸು ಕ್ರಿಸ್ತನು ನಿಮ್ಮ ಪಾಪಗಳಿಗಾಗಿ ಸತ್ತನು ಎಂದು ನಂಬಿರಿ."*




**ಕೇಳುಗನು ತೀರ್ಮಾನವನ್ನು ತೆಗೆದುಕೊಳ್ಳುವಂತೆ ಮತ್ತು ಆತನ ರಕ್ಷಣೆಗಾಗಿ ಪ್ರಾರ್ಥನೆ ಮಾಡಿರಿ.**

# ನೋಟ್ಸ್

# 4 ರಕ್ಷಣೆಗೆ ನಡೆಸುವ ರೋಮನ್ ಮಾರ್ಗ

ರೋಮಾ ಪತ್ರಿಕೆಯಲ್ಲಿ ಬರೆಯಲಾಗಿರುವ ವಚನಗಳ ಸಹಾಯದಿಂದ ರಕ್ಷಣೆಗೆ ನಡೆಸುವ ಮಾರ್ಗವನ್ನು ವಿವರಿಸಬಹುದು. ಮಾರ್ಗವನ್ನು ಕ್ರಮವಾಗಿ ಅನುಸರಿಸಬೇಕು, ಮತ್ತು ನಿಮ್ಮ ಸತ್ಯವೇದದಲ್ಲಿ ವಾಕ್ಯಗಳಿಗೆ ಗುರುತು ಹಾಕಿಕೊಳ್ಳುವದು ಸಹಕಾರಿಯಾಗಿರುತ್ತದೆ. ಸಾಕ್ಷಿ ಕೊಡುವ ಈ ವಿಧಾನದ ಪ್ರಾಮುಖ್ಯವಾದ ಲಾಭವೆಂದರೆ ಎಲ್ಲಾ ವಚನಗಳು ಒಂದೇ ಪುಸ್ತಕದಲ್ಲಿರುವದರಿಂದ, ಅವುಗಳನ್ನು ಪ್ರತಿದಿನ ಹುಡುಕಲು ಸುಲಭ ಮತ್ತು ಸರಳವಾಗಿರುತ್ತದೆ. ನಾಲ್ಕನೇ ಅಂಶವನ್ನು ತಿಳಿಯಪಡಿಸಿದ ನಂತರ, ಕರ್ತನಾದ ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿಕೊಳ್ಳಲು ನಿಮಗಾಗಿ ನಾನು ಪ್ರಾರ್ಥಿಸಬಹುದೇ ಎಂದು ಕೇಳುಗನು ಅಥವಾ ಕೇಳುಗಳಿಗೆ ಕೇಳುತ್ತಾ ಮುಂದುವರೆಯಿರಿ.

**1** **ಮನುಷ್ಯರ ಅವಶ್ಯಕತೆ (ರೋಮಾ 3:23)**. ಎಲ್ಲರೂ ಪಾಪ ಮಾಡಿದ್ದಾರೆ ಮತ್ತು ಕ್ಷಮಾಪಣೆಯ ಅವಶ್ಯಕತೆ ಎಲ್ಲರಿಗೂ ಇದೆ

*"ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ."*

**2** **ಪಾಪದ ಸಂಬಳ (ರೋಮಾ 6:23)**. ಪಾಪದ ಸಂಬಳ ಮರಣ.

*"ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿರುವ ನಿತ್ಯಜೀವ."*

**3** **ದೇವರ ಪೂರ್ವಸಿದ್ಧತೆ (ರೋಮಾ 5:8)**. ಕರ್ತನಾದ ಯೇಸು ಕ್ರಿಸ್ತನ ಮರಣದ ಮೂಲಕ ಕ್ರಯವನ್ನು ಕಟ್ಟುವ ಮಾರ್ಗವನ್ನು ದೇವರು ಒದಗಿಸಿದನು.

*"ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ."*

**4** **ಮನುಷ್ಯನ ಪ್ರತಿಕ್ರಿಯೆ (ರೋಮಾ 10:9)**. ಪಾಪವನ್ನು ಅರಿಕೆಮಾಡಿರಿ, ಯೇಸು ಕ್ರಿಸ್ತನನ್ನು ನಂಬಿರಿ, ಮತ್ತು ಕ್ಷಮಾಪಣೆಯನ್ನು ಹೊಂದಿರಿ.

*"ನೀವು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು."*

### ಮಾಡಬೇಕಾದ ಕಾರ್ಯ

*ಈ ನಾಲ್ಕು ವಚನಗಳನ್ನು ನಿಮ್ಮ ಸತ್ಯವೇದದಲ್ಲಿ ಗುರುತಿಸಿಕೊಂಡು ಕಂಠಪಾಠ ಮಾಡಿರಿ.*

# 5 ಪದಗಳಿಲ್ಲದ ಪುಸ್ತಕ: ಐದು ಬಣ್ಣಗಳು.

ನೀವು ರಕ್ಷಣೆಯ ಸಂದೇಶವನ್ನು ನಿಮ್ಮ ಸತ್ಯವೇದ ಮತ್ತು ಈ ಸುಂದರವಾದ ಪುಸ್ತಕದ ಮೂಲಕಾವಾಗಿ ಯಾರಿಗಾದರೂ ಹೇಳಬಹುದು! ವ್ಯಕ್ತಿಯು ನಿಮ್ಮೊಂದಿಗೆ ಒಡನಾಡಲು ಆತನಿಗೆ ಅವಕಾಶವನ್ನು ಕೊಡಿರಿ. ಆವರಣ ಚಿನ್ಹೆಯಲ್ಲಿರುವ ವಚನಭಾಗಗಳು ನಿಮ್ಮ ಧ್ಯಾನಕ್ಕಾಗಿಯೇ ಆಗಿದೆ. ಸಾಕ್ಷಿ ನೀಡುವ ಸಮಯದಲ್ಲಿ ಉಪಯೋಗಿಸುವದಕ್ಕಾಗಿ ಕೆಲವು ವಚನಗಳು ಕೊಡಲ್ಪಟ್ಟಿವೆ. ನೀವು ನಿಮ್ಮನ್ನೇ ಪರಿಚಯ ಮಾಡಿಕೊಳ್ಳುವದರ ಮೂಲಕ ನಿಮ್ಮ ಮಾತುಗಳನ್ನು ಪ್ರಾರಂಭಿಸಿರಿ ಹಾಗೆಯೇ ಆತನ/ಅಕೆಯ ಹೆಸರನ್ನು ತಿಳಿದುಕೊಳ್ಳಿರಿ ಆಗ ನಿಮ್ಮ ಮಾತುಗಳು ಮುಗಿಯುವವರೆಗೂ ಅವರ ಹೆಸರು ಹೇಳಿಯೇ ಮಾತನಾಡಲು ನಿಮಗೆ ಸಹಾಯವಾಗುತ್ತದೆ. ಈ ಕಥೆಯನ್ನು ಉತ್ಸುಕತೆಯಿಂದ ಹೇಳುವ ಭರವಸೆಯುಳ್ಳವರಾಗಿರ್ರಿ. ನಿಮ್ಮ ಮಾತುಗಳನ್ನುಕೇಳುತ್ತಿರುವವನನ್ನು ರಕ್ಷಣೆಗೆ ನಡೆಸುವ ಮಾರ್ಗ ಇದಾಗಿದೆ!

## <u>ಕಥೆ</u>

ಪದಗಳು ಅಥವಾ ಚಿತ್ರಗಳೇ ಇಲ್ಲದ ಪುಸ್ತಕವನ್ನು ನೀವು ಎಂದಾದರೂ ನೋಡಿದ್ದೀರ? (ಬಣ್ಣಗಳನ್ನು ತೋರಿಸುತ್ತಾ ಹಾಳೆಗಳನ್ನು ತಿರಿವಿ ಹಾಕಿರಿ) ಬಣ್ಣಬಣ್ಣದ ಹಾಳೆಗಳುಳ್ಳ ಈ ಪುಸ್ತಕವು ಲೋಕವನ್ನು ಉಂಟು ಮಾಡಿದ ಸತ್ಯವಾದ ಮತ್ತು ಜೀವಿಸುವ ದೇವರ ಬಗ್ಗೆ ಸತ್ಯವೇದದ ಕಥೆಯನ್ನು ಹೇಳುತ್ತದೆ. ನಾನು ನನ್ನ ಪುಸ್ತಕವನ್ನು ಪದಗಳಿಲ್ಲದ ಪುಸ್ತಕ ಎಂದು ಕರೆಯುತ್ತೇನೆ. ಪ್ರತಿಯೊಂದು ಬಣ್ಣವು ಕಥೆಯ ಒಂದೊಂದು ಭಾಗಾವನ್ನು ಜ್ಞಾಪಕಪಡಿಸುತ್ತದೆ. ನೀವು ಇದನ್ನು ಕೇಳಿಸಿಕೊಳ್ಳಲು ಇಷ್ಟಪಡುತ್ತೀರ? (ಪ್ರತಿಕ್ರಿಯೆಗಾಗಿ ಕಾಯಿರಿ)

### ಚಿನ್ನದ ಬಣ್ಣವುಳ್ಳ ಹಾಳೆಗೆ ಹೋಗಿರಿ

*(ದೇವರ ಪ್ರೀತಿಯನ್ನು ಒತ್ತಿ ತಿಳಿಸುವ, ಚಿನ್ನದ ಬಣ್ಣವುಳ್ಳ ಹಾಳೆಯಿಂದ ಪ್ರಾರಂಭಿಸುವದೇ ಉತ್ತಮವೆಂದು ಅನುಭವವು ಈಗಾಗಲೇ ಸಾಬೀತು ಮಾಡಿದೆ)*

ಚಿನ್ನದ ಬಣ್ಣವುಳ್ಳ ಹಾಳೆಯು ನನಗೆ ಪರಲೋಕವನ್ನು ಜ್ಞಾಪಕಪಡಿಸುತ್ತದೆ. ಪರಲೋಕ ಎಂದರೆ ಏನು ಎಂದು ನಿಮಗೆ ಗೊತ್ತೇ? (ಪ್ರತ್ಯುತ್ತರಕ್ಕಾಗಿ ಕಾಯಿರಿ) ಪರಲೋಕವು ದೇವರ ಮನೆ. ಪರಲೋಕ ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರದಂತಿರುತ್ತದೆ ಎಂದು ಸತ್ಯವೇದವು ಹೇಳುತ್ತದೆ (ಪ್ರಕಟನೆ 21:21). ದೇವರು ತನ್ನ ಮನೆಯ ವಿಷಯದಲ್ಲಿ ಇನ್ನೂ ಬಹಳಷ್ಟು ವಿಷಯಗಳನ್ನು ಹೇಳಿದ್ದಾನೆ. ಅಲ್ಲಿ ಯಾರಿಗೂ ಅನಾರೋಗ್ಯವಿರುವದಿಲ್ಲ. ಯಾರೂ ಎಂದಿಗೂ ಸಾಯುವದಿಲ್ಲ. ಅಲ್ಲಿ ರಾತ್ರಿ ಇಲ್ಲ. ಪರಲೋಕದಲ್ಲಿರುವ ಪ್ರತಿಯೊಬ್ಬರೂ ಯಾವಾಗಲೂ ಸಂಪೂರ್ಣವಾಗಿ ಸಂತೋಷವುಳ್ಳವರಾಗಿರುತ್ತಾರೆ (ಪ್ರಕಟನೆ 21:4–23). ಪರಲೋಕದ ಅತ್ಯಂತ ಪ್ರಾಮುಖ್ಯವಾದ ವಿಷಯವೆಂದರೆ ತಂದೆಯಾದ ದೇವರು, ಆತನ ಕುಮಾರನಾದ ಯೇಸು ಕ್ರಿಸ್ತನು ಅಲ್ಲಿದ್ದಾರೆ.

ದೇವರು ಎಲ್ಲವುಗಳನ್ನೂ ಸೃಷ್ಟಿಮಾಡಿದನು. ಆತನು ನಿಮ್ಮನೂ ಸೃಷ್ಟಿಸಿದನು ಮತ್ತು ನಿಮ್ಮನ್ನು ಬಹಳವಾಗಿ ಪ್ರೀತಿಸುವವನಾಗಿದ್ದಾನೆ. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಟ್ಟು....(ಯೋಹಾನ 3:16) ಎಂದು ಸತ್ಯವೇದವು ಹೇಳುತ್ತದೆ. ಇದರ ಅರ್ಥ ಆತನು  ನನ್ನನ್ನೂ, ನನ್ನನ್ನೂ ಎಲ್ಲರನ್ನೂ ಪ್ರೀತಿಸುವವನಾಗಿದ್ದಾನೆ. ದೇವರು ನಿನ್ನನ್ನು ಸೃಷ್ಟಿಸಿ ನಿನ್ನನ್ನು ಬಹಳವಾಗಿ ಪ್ರೀತಿಸುವವನಾಗಿರುವದರಿಂದ, ನೀನು ಆತನ ಕುಟುಂಬದ ಸದಸ್ಯನಾಗಿರಬೇಕು ಹಾಗೂ ಒಂದುದಿನ ಆತನೊಂದಿಗೆ ಪರಲೋಕದಲ್ಲಿರಬೇಕು ಎಂಬದು ಆತನ ಬಯಕೆಯಾಗಿದೆ  (ಯೋಹಾನ 14:2). ಪರಲೋಕವು ನಿಜವಾಗಿಯೂ ವಿಶೇಷವಾದ ಸ್ಥಳವಾಗಿದೆ. ದೇವರು ಪರಿಪೂರ್ಣನಾಗಿರುವದರಿಂದ ಅದು ಪರಿಪೂರ್ಣವಾಗಿದೆ. ಆದರೆ ಪರಲೋಕವನ್ನು ಎಂದಿಗೂ ಪ್ರವೇಶ ಮಾಡಲಾರದಂಥದ್ದು ಒಂದಿದೆ.

## ಕಪ್ಪು ಹಾಳೆಗೆ ಹೋಗಿರಿ

*(ಕೇಳುಗನ ಆತ್ಮೀಕ ಅಗತ್ಯತೆಗೆ ಒತ್ತುಕೊಡುವದಕ್ಕಾಗಿ ಈ ಪುಟವನ್ನು ಉಪಯೋಗಿಸಿರಿ. ನೀವು ಪಾಪದ ಬಗ್ಗೆ ಮಾತನಾಡಲಾರಂಭಿಸುತ್ತಿದ್ದಂತೆಯೇ ಪವಿತ್ರಾತ್ಮನು ಮನವರಿಕೆಯನ್ನು   ತರುವದಕ್ಕಾಗಿ ಪ್ರಾರ್ಥಿಸಿರಿ.)*

ಆ ಒಂದು ವಿಷಯವೇ ಪಾಪವಾಗಿದೆ. ಈ ಕಪ್ಪು ಪುಟವು ಪಾಪವನ್ನು ನನಗೆ ನೆನಪು ಮಾಡುತ್ತದೆ. ಯಾಕೆಂದರೆ ನಾನು ಮತ್ತು ನೀವುಗಳು ಪಾಪಿಗಳಾಗಿದ್ದೇವೆ, ನಾವು ದೇವರ ಮಾರ್ಗವನ್ನು ನಿರಾಕರಿಸುತ್ತಾ ನಮ್ಮದೇ ಆದ ಮಾರ್ಗದಲ್ಲಿ ನಡೆಯಲು ಬಯಸುತ್ತೇವೆ. ನಮ್ಮ ಮಾರ್ಗವನ್ನು ಬಯಸುವದೇ ಪಾಪವಾಗಿದೆ. ಕೆಟ್ಟ ಕಾರ್ಯಗಳನ್ನು ಮಾಡುವದು ಅಥವಾ ಹೇಳುವದು ಅಥವಾ ಆಲೋಚಿಸುವದು ಪಾಪವಾಗಿದೆ. ದೇವರು ತನ್ನ ಪುಸ್ತಕವಾದ ಸತ್ಯವೇದದಲ್ಲಿ ಕೊಟ್ಟಿರುವ  ನಿಯಮಗಳಿಗೆ ಅವಿಧೇಯರಾಗುವದೇ ಪಾಪವಾಗಿದೆ. ಪಾಪವು ನಮ್ಮ ಲೋಕದಲ್ಲಿ ದುಃಖವನ್ನು ತರುತ್ತದೆ. ಪಾಪವನ್ನು ಸೂಚಿಸುವ ಕೆಲವು ಕಾರ್ಯಗಳ ಬಗ್ಗೆ ನೀವು ಆಲೋಚಿಸುವಿರಾ?

(ಪ್ರತಿಕ್ರಿಯೆಯನ್ನು ಎದುರುನೋಡಿರಿ). ನೀವು ಪಾಪಿಯಾಗಿದ್ದೀರ ಎಂದು ನಿಮಗೆ ಗೊತ್ತಿದೆಯೇ? "ಎಲ್ಲರೂ ಪಾಪ ಮಾಡಿದ್ದಾರೆ" (ರೋಮಾ 3:23) ಎಂದು ದೇವರ ವಾಕ್ಯವು ಹೇಳುತ್ತದೆ. **ಎಲ್ಲರೂ** ಎಂದು ಹೇಳಿದರೆ, ನಾವೆಲ್ಲರೂ ಅಂದರೆ ನಾನು ಮತ್ತು ನೀವುಗಳು. ಪಾಪವು ನನ್ನನ್ನು ಮತ್ತು ನಿಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ ಯಾಕೆಂದರೆ ಪರಿಪೂರ್ಣನಾಗಿದ್ದಾನೆ–ಆತನಲ್ಲಿ ಯಾವುದೇ ಪಾಪವಿಲ್ಲ. ದೇವರು ತಾನಿರುವ ಸ್ಥಳದಲ್ಲಿ ಪಾಪಕ್ಕೆ ಸ್ಥಳವನ್ನು ಕೊಡುವದಿಲ್ಲ.

ಪಾಪವನ್ನು ಶಿಕ್ಷಿಸಬೇಕು ಎಂದು ದೇವರೇ ಹೇಳಿದ್ದಾನೆ. ಪಾಪದ ಶಿಕ್ಷೆ ಮರಣ–ಅಂದರೆ ಶಾಶ್ವತವಾಗಿ ದೇವರಿಂದ ಬೇರ್ಪಡುವಂಥದ್ದು (ರೋಮಾ 6:23). ನಿಮ್ಮ ಪಾಪದಿಂದ ಹೊರಬರಲು ನಿಮ್ಮಿಂದ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ದೇವರಿಗೆ ಚೆನ್ನಾಗಿ ಗೊತ್ತಿತ್ತು.  ಆತನ ಮೆಚ್ಚಿಕೆಗೆ ಪಾತ್ರರಾಗಲು ನಿಮ್ಮಿಂದ ಸಾಧ್ಯವಿಲ್ಲ ಎಂಬುದೂ ಆತನಿಗೆ ಚೆನ್ನಾಗಿ ಗೊತ್ತಿತ್ತು.  ಆದರೆ ಆತನು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನೀವು ಆತನ ಮಗುವಾಗಿರಬೇಕೆಂದು ಬಯಸುತ್ತಾನೆ. ಆದ್ದರಿಂದ ನಿಮ್ಮನ್ನು ಕ್ಷಮಿಸಲು ಆತನೇ ಮಾರ್ಗವನ್ನು ಸಿದ್ಧಮಾಡಿದನು.



## ಕೆಂಪು ಹಾಳೆಗೆ ಹೋಗಿರಿ

*(ಯೇಸು ಕ್ರಿಸ್ತನ ಮರಣದ ಮೂಲಕವೇ ನಮಗೆ ರಕ್ಷಣೆಯು ದೊರೆಯಿತು ಎಂಬದನ್ನು ಒತ್ತಿ ಹೇಳುವದಕ್ಕೆ ಈ ಪುಟವನ್ನು ಉಪಯೋಗಿಸಿರಿ)*

ಕೆಂಪು ಪುಟವು ಮಾರ್ಗವನ್ನು ತೋರಿಸುತ್ತದೆ. ದೇವರು ನಿಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ. ಆತನ ತನ್ನ ಸ್ವಂತ ಮಗನಾದ ಯೇಸು ಕ್ರಿಸ್ತನನ್ನೇ ಪರಲೋಕದಿಂದ ಭೂಲೋಕಕ್ಕೆ ಕಳುಹಿಸಿಕೊಟ್ಟನು. ಆ ಎಳೆಕೂಸಾಗಿ ಜನಿಸಿದನು. ಆತನು ಬೆಳೆದು ವಯಸ್ಕನಾದನು. ಯೇಸು ಕ್ರಿಸ್ತನು ಈ ಲೋಕದಲ್ಲಿ ಜೀವಿಸುತ್ತಿದ್ದ ಬೇರೆ ಮನುಷ್ಯರಿಗಿಂತಲೂ ವಿಭಿನ್ನನಾಗಿದ್ದನು. ಆತನು ಒಂದೇ ಒಂದು ತಪ್ಪನ್ನು ಮಾಡಲಿಲ್ಲ. ಆತನು ಪರಿಪೂರ್ಣನಾಗಿದ್ದನು.

ಆದರೆ ಒಂದು ದಿನ ದುಷ್ಟಜನರು ಆತನ ತಲೆಯ ಮೇಲೆ ಮುಳ್ಳಿನ ಕಿರೀಟವನ್ನು ಇಟ್ಟರು ಮತ್ತು ಕರ್ತನಾದ ಯೇಸು ಕ್ರಿಸ್ತನನ್ನು ಶಿಲುಬೆಗೆ ಜಡಿದರು. ಆತನು ಅಲ್ಲಿ ನೇತಾಡುತ್ತಿದ್ದಾಗ, ದೇವರು ನಮ್ಮೆಲ್ಲರ ಪಾಪಗಳನ್ನು ಆತನ ಮೇಲೆ ಹಾಕಿದನು ಎಂದು ಸತ್ಯವೇದವು ಹೇಳುತ್ತದೆ (ಯೆಶಾಯ 53:6). ನಿಮ್ಮ ಎಲ್ಲಾ ಕೋಪ, ಎಲ್ಲಾ ಸುಳ್ಳುಗಳು, ಎಲ್ಲಾ ನೀಚತನ–ನಿಮ್ಮ ಎಲ್ಲಾ ಪಾಪಗಳು ದೇವಕುಮಾರನ ಮೇಲೆ ಹಾಕಲ್ಪಟ್ಟವು.

ಯೇಸು ಕ್ರಿಸ್ತನು ಶಿಲುಬೆಗೆ ಜಡಿಯಲ್ಪಟ್ಟಾಗ ಆತನ ಕೈಕಾಲುಗಳಿಂದ ಏನು ಹೊರಬಂದಿತು? (ರಕ್ತ). ರಕ್ತಧಾರಣೆಯಿಲ್ಲದೆ ಕ್ಷಮಾಪಣೆಯು ದೊರೆಯುವದಿಲ್ಲ ಎಂದು ಸತ್ಯವೇದವು ಹೇಳುತ್ತದೆ (ಇಬ್ರಿಯ 9:22). ಯೇಸು ಕ್ರಿಸ್ತನು ನಮ್ಮ ಪಾಪದ ನಿಮಿತ್ತ ನಿಮಗಾಗಬೇಕಾಗಿದ್ದ ಮರಣದ ದಂಡನೆಯನ್ನು ತಾನೇ ಸ್ವೀಕರಿಸಿಕೊಂಡನು. ಆತನು ಬಹಳವಾಗಿ ಕಷ್ಟವನ್ನನುಭವಿಸಿದನು.

ನಂತರ ಆತನು, "ಎಲ್ಲವೂ ತೀರಿತು" ಎಂದು ಗಟ್ಟಿಯಾದ ಧ್ವನಿಯಲ್ಲಿ ಅತ್ತನು. ಕರ್ತನಾದ ಯೇಸು ಕ್ರಿಸ್ತನು ನಮ್ಮ ಪಾಪದ ದಂಡನೆಯನ್ನು ತಾನು ವಹಿಸಿಕೊಳ್ಳುವದಕ್ಕಾಗಿ ಈ ಭೂಮಿಗೆ ಬಂದನು. ಮತ್ತು ಶಿಲುಬೆಯ ಮೇಲೆ ಮರಣವನ್ನುಪ್ಪುವದರ ಮೂಲಕ ತನ್ನ ಕೆಲಸವನ್ನು ಮಾಡಿ ಮುಗಿಸಿದನು. "ಕರ್ತನಾದ ಯೇಸು ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತು ಹೂಣಲ್ಪಟ್ಟನು" ಎಂದು ಸತ್ಯವೇದವು ಹೇಳುತ್ತದೆ (1 ಕೊರಿ 15:3). ಆದರೆ ಮೂರು ದಿವಸಗಳ ನಂತರ ಅತ್ಯಂತ ಸುಂದರವಾದ ಕಾರ್ಯವು ನಡೆಯಿತು. ದೇವರು ಆತನಿಗೆ ಮತ್ತೆ ಜೀವವನ್ನುಕೊಟ್ಟನು. ಆತನು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನು. ಯೇಸು ಕ್ರಿಸ್ತನು ಜೀವಿಸುತ್ತಿರುವ ರಕ್ಷಕನಾಗಿದ್ದಾನೆ (1 ಕೊರಿ 15:4). ಆತನು ನಿಮ್ಮನ್ನು ಪಾಪದೊಳಗಿಂದ ರಕ್ಷಿಸುವದಕ್ಕಾಗಿ – ನಿಮ್ಮ ರಕ್ಷಕನಾಗಿರಲು ಬಯಸುತ್ತಿದ್ದಾನೆ.

(ತೀರ್ಮಾನ ಮತ್ತು ಆಹ್ವಾನ ಪ್ರಾರ್ಥನೆಗಾಗಿ ಕೇಳಿಕೊಳ್ಳಿರಿ)

## ಶುದ್ಧವಾದ ಹಾಳೆಗೆ ಹೋಗಿರಿ

*(ಕರ್ತನಾದ ಯೇಸು ಕ್ರಿಸ್ತನನ್ನು ನಂಬುವದಕ್ಕಾಗಿ ಮತ್ತು ಆತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವದಕ್ಕಾಗಿ ಕೇಳುಗನನ್ನು ಪ್ರೋತ್ಸಾಹಪಡಿಸಲು ಈ ಪುಟವನ್ನು ಉಪಯೊಗಿಸಿರಿ)*

ನೀವು ಪಾಪದಿಂದ ಶುದ್ಧರಾಗಬಹುದೆಂಬದನ್ನು ಈ ಪುಟವು ನನಗೆ ಜ್ಞಾಪಕಪಡಿಸುತ್ತದೆ (ಕೀರ್ತನೆ 51:7). ದೇವರು ಇದರ ಬಗ್ಗೆ ಸತ್ಯವೇದದಲ್ಲಿ ಹೇಳಿದ್ದಾನೆ. (ಆ ವ್ಯಕ್ತಿಯು ನಿಮ್ಮೊಂದಿಗೆ ಇಡೀ ವಚನವನ್ನು ಓದಲಿ). "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನುನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಹೊಂದಬೇಕೆಂದು ಕೊಟ್ಟನು" (ಯೋಹಾನ 3:16). ಹೌದು ದೇವರು ನಮ್ಮನ್ನು ಪ್ರೀತಿಸುತ್ತಾನೆ. ನೀವು ಯೇಸು ಕ್ರಿಸ್ತನನ್ನು ನಂಬುವದಾದರೆ, ನಾಶವಾಗುವದಿಲ್ಲ–ದೇವರಿಂದ ಶಾಶ್ವತವಾಗಿ ಬೇರ್ಪಡಿಸಲ್ಪಡುವದಿಲ್ಲ ಎಂದು ದೇವರು ಹೇಳುತ್ತಿದ್ದಾನೆ. ಆತನು ನಿಮ್ಮ ಪಾಪಗಳನ್ನು ಕ್ಷಮಿಸಿ ನಿಮ್ಮನ್ನು ದೇವರ ಎದುರಿನಲ್ಲಿ ಶುದ್ಧರನ್ನಾಗಿ ಮಾಡುತ್ತಾನೆ. "ಯಾರೆಲ್ಲಾ ನಂಬುತ್ತಾರೋ" ಎಂದು ದೇವರು ಹೇಳುತ್ತಿದ್ದಾನೆ. "ಯಾರೆಲ್ಲಾ" ಎನ್ನುವ ಸ್ಥಳದಲ್ಲಿ ನಾವು ಬೇಕಾದರೆ ನಿಮ್ಮ ಹೆಸರನ್ನು ಹಾಕಬಹುದು. ನೀವು ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ನಂಬುವದಾದರೆ, ಆತನು ನಿಮಗೆ ನಿತ್ಯಜೀವವನ್ನು ಕೊಡುತ್ತಾನೆ. ಆ ರೀತಿಯಾದ ಜೀವಿತವನ್ನೇ ನೀವು ಪರಲೋಕದಲ್ಲಿದೇವರೊಂದಿಗೆ ಜೀವಿಸಬೇಕು. ನೀವು ಕರ್ತನಾದ ಯೇಸು ಕ್ರಿಸ್ತನನ್ನು ರಕ್ಷಕನೆಂದು ನಂಬುವದಾದರೆ, ಆತನು ನಿಮ್ಮ ಪಾಪಗಳನ್ನು ಕ್ಷಮಿಸಿಬಿಡುತ್ತಾನೆ. ಆತನು ಯಾವಾಗಲೂ ನಿಮ್ಮ ಜೊತೆಯಲ್ಲೇ ಇರುತ್ತಾನೆ ಮತ್ತು ದೇವರಿಗೆ ವಿಧೇಯರಾಗಿ ಜೀವಿಸಲು ನಿಮಗೆ ಬಲವನ್ನುಕೊಡುತ್ತಾನೆ. ಇವತ್ತು ನೀವು ಯೇಸು ಕ್ರಿಸ್ತನಿಗೆ ನಾನು ಪಾಪ ಮಾಡಿದ್ದೇನೆ ಮತ್ತು ನೀನು ನನಗಾಗಿಯೇ ಸತ್ತಿದ್ದೀಯ ಎಂದು ಹೇಳಬಹುದು. ನೀವು ಪಶ್ಚಾತ್ತಾಪಪಟ್ಟರೆ, ಅಂದರೆ ನಿಮ್ಮ ಪಾಪವನ್ನು ಬಿಟ್ಟು ತಿರುಗಿಕೊಂಡರೆ, ಅವುಗಳನ್ನು ಅಳಿಸಿಹಾಕಲಾಗುವದೆಂದು ಸತ್ಯವೇದವು ಹೇಳುತ್ತದೆ (ಅ.ಕೃ 3:19). ಮಾತ್ರವಲ್ಲದೇ ನೀವು ಕರ್ತನಾದ ಯೇಸು ಕ್ರಿಸ್ತನನ್ನು ನಂಬುವದಾದರೆ ರಕ್ಷಣೆ ಹೊಂದುವಿರಿ ಎಂದು ಸತ್ಯವೇದವು ಹೇಳುತ್ತದೆ (ಅ.ಕೃ 16:31). ಈಗ ನೀವು ನನ್ನೊಂದಿಗೆ ಇದನ್ನು ಮಾಡಲು ಬಯಸುತ್ತೀರ? (ಒಂದುವೇಳೆ ಉತ್ತರ ಹೌದಾಗಿರುವದಾದರೆ, ಕೇಳುಗನು ಕರ್ತನಾದ ಯೇಸುವನ್ನು ತನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವದಕ್ಕಾಗಿ ಆತನೊಂದಿಗೆ ಪ್ರಾರ್ಥಿಸಿರಿ).

## ಹಸಿರು ಹಾಳೆಗೆ ಹೋಗಿರಿ

*(ಈ ಪುಟದಲ್ಲಿ ಆತ್ಮೀಕ ಬೆಳವಣಿಗೆಗೆ ಒತ್ತು ನೀಡಿರಿ)*

ಹಸಿರು ಪುಟವು ನನಗೆ ಬೆಳವಣಿಗೆಯ ಕುರಿತಾಗಿ ಅಂದರೆ, ಎಲೆಗಳು, ಹುಲ್ಲು, ಹೂವುಗಳು ಮತ್ತು ಮರಗಳ ಬಗ್ಗೆ ಜ್ಞಾಪಕಪಡಿಸುತ್ತದೆ. ಈ ಪುಟವು ನನಗೆ ದೇವರಿಂದ ನೀವು ಪಡೆದುಕೊಂಡಿರುವ ಹೊಸ ಜೀವಿತದ ಬಗ್ಗೆ, ನಿತ್ಯವಾದ ಜೀವಿತದ ಬಗ್ಗೆ ನೆನಪಿಸುತ್ತದೆ. ಕರ್ತನಾದ ಯೇಸು ಕ್ರಿಸ್ತನು ನಿಮ್ಮನ್ನು ಪಾಪದಿಂದ ಬಿಡಿಸುವ ರಕ್ಷಕನಾಗಿದ್ದಾನೆ ಎಂದು ನಂಬುವದಾದರೆ, ದೇವರ ಕುಟುಂಬದಲ್ಲಿ ಹೊಸದಾಗಿ ಹುಟ್ಟಿರುವ ಕೂಸಿನಂತೆ ನೀವಿರುತ್ತೀರ. ನೀವು ವಿಶೇಷವಾದ ರೀತಿಯಲ್ಲಿ ಬೆಳೆಯಬೇಕೆಂಬದು ದೇವರ ಬಯಕೆಯಾಗಿದೆ. "ನಮ್ಮ ಕರ್ತನಾದ ಯೇಸು ಕ್ರಿಸ್ತನ...ಜ್ಞಾನದಲ್ಲಿ ಬೆಳೆಯಿರಿ" ಎಂದು ಸತ್ಯವೇದವು ಹೇಳುತ್ತದೆ (2 ಪೇತ್ರ 3:18).

ನೀವು ಯೇಸು ಕ್ರಿಸ್ತನ ಬಗ್ಗೆ ಸತ್ಯವೇದದಿಂದ ಹೆಚ್ಚೆಚ್ಚಾಗಿ ಕಲಿತಷ್ಟು ಪಾಪ ಮಾಡದಿರುವದನ್ನೂ ಹೆಚ್ಚೆಚ್ಚಾಗಿ ಕಲಿತುಕೊಳ್ಳುತ್ತೀರ (ಕೀರ್ತನೆ 119:11). ಪ್ರತಿದಿನ ಆತನಿಗೆ ವಿಧೇಯನಾಗಲು ಸಹಾಯ ಮಾಡುವಂತೆ ಆತನನ್ನೇ ಕೇಳಿಕೊಳ್ಳಿರಿ. ನೀವು ಪಾಪ ಮಾಡಿದರೆ, ದೇವರೇ ನಾನು ಪಾಪ ಮಾಡಿದ್ದೇನೆ ಎಂದು ದೇವರಿಗೆ ಹೇಳಿರಿ. ಆತನು ತತ್‌ಕ್ಷಣೇ ನಿಮ್ಮನ್ನು ಕ್ಷಮಿಸಿಬಿಡುತ್ತಾನೆ. "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು" (1 ಯೋಹಾನ 1:9) ಎಂದು ಸತ್ಯವೇದವು ಹೇಳುತ್ತದೆ. ಆ ತಪ್ಪನ್ನು ಮತ್ತೊಮ್ಮೆ ಮಾಡದಿರಲು ಸಹಾಯ ಮಾಡುವಂತೆ ಆತನನ್ನು ಕೇಳಿಕೊಳ್ಳಿರಿ.

*(ದೇವರು ನಮಗೆ ಸಹಾಯ ಮಾಡುವ ವಾಗ್ದಾನವನ್ನು ಮಾಡಿರುವದಕ್ಕಾಗಿ ಆತನಿಗೆ ಕೃತಜ್ಞತೆಗಳನ್ನು ಸಲ್ಲಿಸಲು ಆ ವ್ಯಕ್ತಿಯನ್ನು ಮುನ್ನಡೆಸಿರಿ)*

1. ದೇವರೊಂದಿಗೆ ಮಾತನಾಡಿರಿ – ಪ್ರಾರ್ಥಿಸಿರಿ (1 ಥೆಸ 5:17). ಎಡಬಿಡದೆ ಪ್ರಾರ್ಥಿಸಿರೆಂದು ಸತ್ಯವೇದವು ಹೇಳುತ್ತದೆ.
2. ದೇವರಿಂದ ಕೇಳಿಸಿಕೊಳ್ಳಿರಿ – ದೇವರ ವಾಕ್ಯವನ್ನು ಓದುವದರಿಂದ ಮತ್ತು ಕಂಠಪಾಟ ಮಾಡುವದರಿಂದ ಕಲಿಯಿರಿ (ಕೀರ್ತನೆ 119:11)
3. ದೇವರಿಗಾಗಿ ಮಾತನಾಡಿರಿ – ಆತನ ಬಗ್ಗೆ – ಇತರರಿಗೆ ಹೇಳಿರಿ ಅಥವಾ ಸಾಕ್ಷಿ ನೀಡಿರಿ (ಮಾರ್ಕ 16:15)
4. ದೇವರನ್ನು ಆರಾಧಿಸಿರಿ – ಸಂಡೇ ಸ್ಕೂಲ್ ಮತ್ತು ಚರ್ಚ್‌ಗೆ ಹೋಗಿರಿ (ಇಬ್ರಿಯ 10:25)

**ವ್ಯಕ್ತಿಯು ಹೋಗುವದಕ್ಕಿಂತ ಮುಂಚೆ,**

1. ಆತನಿಗೆ ಕರಪತ್ರವನ್ನಾಗಲಿ ಅಥವಾ ಪತ್ರವ್ಯವಹಾರದ ವಿಷಯವನ್ನು ಕೊಡಿರಿ.
2. ಕರ್ತನಾದ ಯೇಸು ಕ್ರಿಸ್ತನು ಆತನಿಗೆ ಮಾಡಿರುವವುಗಳಿಗಾಗಿ ಕೃತಜ್ಞತೆಯ ಪ್ರಾರ್ಥನೆಯನ್ನು ಮಾಡುವಂತೆ ಆತನು ಹೇಳಲಿ.
3. ಆತನಿಗಾಗಿ ಪ್ರಾರ್ಥಿಸಿರಿ.
4. ಮುಂದುವರೆಸುವದಕ್ಕಾಗಿ ಆತನ ಹೆಸರು ಮತ್ತು ವಿಳಾಸವನ್ನು ತಿಳಿದುಕೊಳ್ಳಿರಿ.

[Wordless Book instructions courtesy of
Child Evangelism Fellowship.]

**ಚರ್ಚಾ ಪ್ರಶ್ನೆಗಳು**

1. ಸುವಾರ್ತೆ ಸಾರಲು ನಿಮಗೆ ಯಾವ ಮಾರ್ಗಗಳು ಪರಿಣಾಮಕಾರಿ ಎನಿಸುತ್ತವೆ ಮತ್ತು ಯಾಕೆ?
2. ಸಾಕ್ಷಿ ಹೇಳಲು ಪದಗಳಿಲ್ಲದ ಪುಸ್ತಕವನ್ನು ಯಾವ ಸ್ಥಳಗಳಲ್ಲಿ ಮತ್ತು ಸಮಯಗಳಲ್ಲಿ ನೀವು ಉಪಯೋಗಿಸುತ್ತೀರ?

**ಪ್ರಾರ್ಥನೆ**

*ಪರಲೋಕದಲ್ಲಿರುವ ತಂದೆಯೇ ಸಾಕ್ಷಿಯಾಗಿರಲು ಮತ್ತು ಸುವರ್ತೆ ಸಾರಲು ಸಹಾಯಕವಾಗುವ ಈ ಮಾರ್ಗಗಳನ್ನು ಕಂಠಪಾಠ ಮಾಡಲು ನನಗೆ ಸಹಾಯ ಮಾಡು. ಕೇಳಿಸಿಕೊಳ್ಳುವ ಮನಸುಳ್ಳವರನ್ನು ಮತ್ತು ರಕ್ಷಣೆಯ ದೀನತೆಯಿಂದ ಸ್ವೀಕರಿಸಿಕೊಳ್ಳಲು ಬಯಸುವ ಹೃದಯವಿರುವವರನ್ನು ನನ್ನ ಬಳಿ ಕಳುಹಿಸಿಕೊಡು. ಆಮೆನ್.*

# ನೋಟ್ಸ್

# 8 ಸಮಾರ್ಯದ ಸ್ತ್ರೀ: ಆತ್ಮಗಳನ್ನು ಗೆಲ್ಲುವ ಸಾಕ್ಷಿ

**ಕೀ ವಚನ: ರೋಮಾ 1:16ಎ**

"ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು.... ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ..."

**ಸಮಾರ್ಯದ ಸ್ತ್ರೀಯ ಕುರಿತು ಬರೆಯಲಾಗಿರುವ ವಚನಭಾಗಗಳು:** ಯೋಹಾನ 4:4–42

**ಪರಿಚಯ**

1. ದೈವೀಕವಾದ ಕಾರ್ಯವನ್ನು ನೆರವೇರಿಸಲು ಸಮಾರ್ಯದ ಮಾರ್ಗವಾಗಿ ಪ್ರಯಾಣಿಸುವಂತೆ ಪವಿತ್ರಾತ್ಮನು ಯೇಸು ಕ್ರಿಸ್ತನನ್ನು ಪ್ರೇರೇಪಿಸಿದನು.

2. ಯೆಹೂದಿ ಪ್ರಯಾಣಿಕರು ಸಾಮಾನ್ಯವಾಗಿ ಸಮಾರ್ಯವನ್ನು ಬಳಿಸಿಕೊಂಡು ಪ್ರಯಾಣಿಸುತ್ತಿದ್ದರು–ಅವರ ಪ್ರಯಾಣವು ಆರು ದಿವಸಗಳದ್ದಾಗಿರುತ್ತಿತ್ತು–ಈ ಸಮಯದಲ್ಲಿ ಅವರು ಸಮಾರ್ಯದವರೊಂದಿಗೆ ಯಾವುದೇ ತರಹವಾದ ಸಂಪರ್ಕಗಳನ್ನು ಇಟ್ಟುಕೊಳ್ಳುತ್ತಿರಲಿಲ್ಲ, ಯಾಕಂದರೆ ಅವರು ಸಮಾರ್ಯದವರನ್ನು ಪರಿಶುದ್ಧ ಜನ ಎಂದು ಪರಿಗಣಿಸುತ್ತಿರಲಿಲ್ಲ; ಕಾರಣ ಅವರು ಅನ್ಯಜನರೊಂದಿಗೆ ಮದುವೆ ಸಂಬಂಧವನ್ನು ಬೆಳೆಸಿಕೊಂಡಿದ್ದರು.



3. ಯೇಸು ಕ್ರಿಸ್ತನು ಒಬ್ಬ ಸ್ತ್ರೀಯೊಂದಿಗೆ ಜೀವಿತವನ್ನೇ ಬದಲಾಯಿಸುವಂಥ ಸಂಭಾಷಣೆಯನ್ನು ನಡೆಸುವದಕ್ಕಾಗಿ ತನ್ನ ಶಿಷ್ಯರೊಂದಿಗೆ ಮೈಲಿಗಟ್ಟಲೆ ನಡಕೊಂಡು ಹೋದನು. ಸ್ತ್ರೀಯರ ಜೀವಿತಗಳಿಗೆ ಯೇಸು ಕ್ರಿಸ್ತನು ಬಹು ಬೆಲೆಯನ್ನು ಕೊಡುತ್ತಿದ್ದನು ಎಂಬದನ್ನು ಇದರಿಂದ ತಿಳಿದುಕೊಳ್ಳಬಹುದಾಗಿದೆ.

**ಸಮಾರ್ಯದ ಸ್ತ್ರೀಯ ಜೀವಿತದಿಂದ ಆರಿಸಿತೆಗೆಯಲಾಗಿರುವ, ಆತ್ಮಗಳನ್ನು ಗೆಲ್ಲುವವಳ ಗುಣ–ಸ್ವಭಾವಗಳು**

1. **ಆತ್ಮಗಳನ್ನು ಗೆಲ್ಲುವವಳು ಸಹ ಪಾಪಿಯೇ ಆಗಿದ್ದು ಕರ್ತನಾದ ಯೇಸು ಕ್ರಿಸ್ತನಲ್ಲಿ ರಕ್ಷಣೆಯನ್ನು ಹೊಂದಿದ್ದಾಳಷ್ಟೆ (ಅ.ಕೃ 4:12).**

   ಎ. ಸಮಾರ್ಯದ ಸ್ತ್ರೀಯು ನಮ್ಮೆಲ್ಲರನ್ನೂ ಪ್ರತಿನಿಧಿಸುವವಳಾಗಿದ್ದಾಳೆ; ಸತ್ಯವೇದದಲ್ಲಿ ಆಕೆಯ ಹೆಸರು ಸಹ ಬರೆಯಲ್ಪಟ್ಟಿಲ್ಲ.

   ಬಿ. ಆಕೆಯು ಅನೇಕ ವಿಧವಾದ ಅಡೆತಡೆಗಳನ್ನು ಎದುರಿಸಿದಳು:

   - **ಜನಾಂಗ/ಜನಾಂಗೀಯ**–ಆಕೆಯು ಸಮಾರ್ಯದವಳಾಗಿದ್ದಳು (ವ.9).
   - **ಸಾಮಾಜಿಕ**–ಆಕೆಯು ವ್ಯಭಿಚಾರಿಯಾಗಿದ್ದಳು (ವ.18).
   - **ಧಾರ್ಮಿಕ**–ಆಕೆಯು ಯೆಹೂದ್ಯರಿಗಿಂತ ಭಿನ್ನವಾದ ಆರಧನೆ ಮಾಡುವ ಗುಂಪಿಗೆ (ಸಮಾರ್ಯದವರ) ಸೇರಿದವಳಾಗಿದ್ದಳು (ವ.21–23).
   - ಯೇಸು ಕ್ರಿಸ್ತನು ಆಕೆಯ ಸಂಗಡ ಮಾತನಾಡುವಾಗ ಅಡೆತಡೆಗಳನ್ನು ತೆಗೆದುಹಾಕಿದನು (ವ. 7).

   ಸಿ. ಆಕೆಯು ಗಂಭೀರವಾದ ನೈತಿಕ ಸಮಸ್ಯೆಗಳನ್ನು ಎದುರಿಸಿದಳು (ವ. 16–18)

   - ಆಕೆಯು ಬಹು ಕಷ್ಟಯುತವಾದ ಪಾಪಕ್ಕೆ ದಾಸಳಾಗಿದ್ದಳು.
   - ಆಕೆಯು ಸಂಬಂಧಗಳು ಆಕೆಯ ಆತ್ಮದ ಆಳವಾದ ಬಯಕೆಯನ್ನು ತೃಪ್ತಿಪಡಿಸಲು ವಿಫಲವಾಗಿದ್ದವು (ಕೀರ್ತನೆ 38:4).

   ಡಿ. ಯೇಸು ಕ್ರಿಸ್ತನೊಂದಿಗಿನ ಒಂದು ಸಂಭಾಷಣೆ ಆಕೆಯ ಜೀವಿತವನ್ನೇ ಶಾಶ್ವತವಾಗಿ ಬದಲಾಯಿಸಿತು.

   - ಯೇಸು ಕ್ರಿಸ್ತನು ಆಕೆಯ ಎಲ್ಲಾ ಪ್ರಶ್ನೆಗಳಿಗೆ ತಾಳ್ಮೆಯಿಂದಲೇ ಉತ್ತರಿಸಿದನು (ವ. 12–26).
   - ಯೇಸು ಕ್ರಿಸ್ತನು ಆಕೆಯನ್ನು ಸತ್ಯದ ಕಡೆಗೆ ನಡೆಸಿದನು (ವ. 24).
   - ಯೇಸು ಕ್ರಿಸ್ತನು ರಕ್ಷಕನಿಗಾಗಿ ಆತನಲ್ಲಿದ್ದ ಬಯಕೆಯನ್ನು ಪೂರೈಸಿದನು (ವ. 26).

   ಇ. ಆಕೆಗೆ ಅವಶ್ಯಕವಾಗಿ ಬೇಕಾಗಿದ್ದ ಒಂದು ಕಾರ್ಯವನ್ನು ಒದಗಿಸಲು ಯೇಸು ಕ್ರಿಸ್ತನು ಆಕೆಯ ಬಳಿಗೆ ಬಂದನು: ರಕ್ಷಣೆ–ನೂತನವಾದ ಜೀವಿತ! ಸಮಾರ್ಯದ ಸ್ತ್ರೀಯನ್ನು ಸಂಧಿಸುವದರ ಮೂಲಕವಾಗಿ, ಯೇಸು ಕ್ರಿಸ್ತನು ಪರಿಣಾಮಕಾರಿಯಾದ ಆತ್ಮಗಳನ್ನು ಗೆಲ್ಲುವವನಾಗಿದ್ದಾನೆ.

- ಯೇಸು ಕ್ರಿಸ್ತನು ಆಕೆಯ **ಬದುಕನ್ನು** ಬದಲಾಯಿಸಿದನು–ಆಕೆಯ ಎಲ್ಲಾ ಅಡೆತಡೆಗಳನ್ನು ಜಯಿಸಿದಳು, ಆಕೆಯು ಹೊರಗೆ ಹಾಕಿದ್ದ ಪ್ರತಿಯೊಬ್ಬರ ಬಳಿಗೂ ಹೋಗಿ ಅವರಿಗೆ ಸುವಾರ್ತೆಯನ್ನು ಸಾರಿದಳು (ವ. 28–29).

- ಯೇಸು ಕ್ರಿಸ್ತನು ಆಕೆಯ **ವೃತ್ತಿಯನ್ನು** ಬದಲಾಯಿಸಿದನು–ಈಗ ಅವರ ಪ್ರಾಥಮಿಕವಾದ ಉದ್ದೇಶ ತನ್ನ ಅನುಭವವನ್ನು ಹಂಚಿಕೊಳ್ಳುವಷ್ಟೆ (ವ. 39).

- ಯೇಸು ಕ್ರಿಸ್ತನು ಆಕೆಯ **ವಾತಾವರಣವನ್ನು** ಬದಲಾಯಿಸಿದನು–ಆಕೆಯು ಹಳ್ಳಿಯಲ್ಲಿದ್ದವರೆಲ್ಲರೂ ವಿಶ್ವಾಸಿಗಳಾದರು (ವ. 42).

- ಅಂತಿಮವಾಗಿ ಯೇಸು ಕ್ರಿಸ್ತನು ವಿಶ್ವಾಸಿಗಳಿಗೆ ತನ್ನ ದರ್ಶನವನ್ನೇ ಕೊಡುತ್ತಾನೆ (ವಿಮೋ. 33:14; ಮತ್ತಾ. 1:23), ಮತ್ತು ಇದರಿಂದ ಅವರೆಲ್ಲರೂ ಆತ್ಮಗಳನ್ನು ಗೆಲ್ಲುವವರಾಗುತ್ತಾರೆ.

2. **ಆತ್ಮಗಳನ್ನು ಗೆಲ್ಲುವವಳು ಜೀವಜಲವಾಗಿರುವ ಯೇಸು ಕ್ರಿಸ್ತನಲ್ಲಿ ತೃಪ್ತಿಯನ್ನು ಹೊಂದಿರುವ ವಿಶ್ವಾಸಿಯಾಗಿರುತ್ತಾಳೆ (ಯೋಹಾನ 4:10–15)**.

ಎ. ವಿಶ್ವಾಸಿಗಳು ಯೇಸು ಕ್ರಿಸ್ತನಲ್ಲಿ ನಿಜವಾದ ತೃಪ್ತಿಯನ್ನು ಹೊಂದುತ್ತಾರೆ ಯಾಕಂದರೆ ಅವರನ್ನು ನಿತ್ಯವಾದ ಮರಣದಿಂದ ರಕ್ಷಿಸಲು ದೇವರು ಕೊಟ್ಟಿರುವ ಉಚಿತವಾದ ವರ ಆತನೇ ಆಗಿದ್ದಾನೆ (ವ. 10; ಯೋಹಾನ 3:16; 2 ಕೊರಿ. 9:15 ನೋಡಿರಿ). ಈ ತೃಪ್ತಿಯನ್ನು ಹೊಂದುವವಳು ಅದರ ಶುಭಸಮಾಚಾರವನ್ನು ಇತರರೊಂದಿಗೆ ಹಂಚಿಕೊಳ್ಳಲು ಹಾತೊರೆಯುವವಳಾಗಿರುತ್ತಾಳೆ (ವ. 28–29).

ಬಿ. ಜೀವಿಸಲು ನೀರಿ ಖಂಡಿತವಾಗಿಯೂ ಬೇಕು. ಶೇಕಡಾ 70% ಮನುಷ್ಯನ ಶರೀರ ಮತ್ತು ಭೂಮಿಯು ನೀರಿನಿಂದ ತುಂಬಿಯದೆ. ಯೇಸು ಕ್ರಿಸ್ತನು ತಾನು ಕೊಡುವ ರಕ್ಷಣೆಯ ಮೂಲಕವಾಗಿ ಒಬ್ಬ ವಿಶ್ವಾಸಿಯು ಹೊಂದುವ ತೃಪ್ತಿಯನ್ನು ವಿವರಿಸಲು ಬಾವಿಯ ನೀರನ್ನು ಉದಾಹರಣೆಯಾಗಿ ಉಪಯೋಗಿಸಿದನು. ಯೇಸು ಕ್ರಿಸ್ತನು ಸಂಪೂರ್ಣವಾದ ತೃಪ್ತಿಯನ್ನು ಕೊಡುತ್ತಾನೆ ಯಾಕಂದರೆ ಆತನು:

- **ಜೀವಜಲವಾಗಿದ್ದಾನೆ (ವ. 10)**. ಯೇಸು ಕ್ರಿಸ್ತನು ನಿತ್ಯಜೀವವನ್ನು ಕೊಡುತ್ತಾನೆ (ವ. 14).

- **ಮತ್ತೆ ನೀರಡಿಕೆಯಾಗಿಸದಂಥ ನೀರು (ವ. 13)**. ನಮ್ಮ ಆತ್ಮೀಕ ದಾಹವನ್ನು ತಣಿಸಲು ಯೇಸು ಕ್ರಿಸ್ತನಿಗೆ ಮಾತ್ರ ಸಾಧ್ಯ. ಆಕೆಯ ಬಳಿಗೆ ಬರುವವಳು ಎಂದಿಗೂ ಆತ್ಮೀಕ ಹಸಿವೆಯನ್ನು ಅನುಭವಿಸುವದಿಲ್ಲ; ಮತ್ತು ಆಕೆಯಲ್ಲಿ ನಂಬಿಕೆಯನ್ನಿಡುವವಳು ಎಂದಿಗೂ ಆತ್ಮೀಕ ಬಾಯಾರಿಕೆಯನ್ನು ಅನುಭವಿಸುವದಿಲ್ಲ (ಯೋಹಾನ 6:35).

- **ಶುದ್ಧೀಕರಿಸುವ, ಜೀವಿತವನ್ನೇ ಬದಲಾಯಿಸುವ ನೀರು (ವ. 16–19)**. ಯೇಸು ಕ್ರಿಸ್ತನೊಂದಿಗೆ ಸಮಾರ್ಯದ ಸ್ತ್ರೀಯು ನಡೆಸಿದ ಸಂಭಾಷಣೆಯು, ಆಕೆಯ ಪಾಪಾನ್ನು ತೊಳೆದು ಆಕೆಯನ್ನು ಸಂಪೂರ್ಣವಾಗಿ ಬದಲಾಯಿಸಿತು. ಬದಲಾವಣೆಯನ್ನು ಕಾಣಬಹುದಾಗಿದೆ ಯಾಕಂದರೆ, ಸಾಮಾಜಿಕವಾಗಿ ಅವಳು ತಿರಸ್ಕೃತಳಾಗಿದ್ದರೂ, (ಹಗಲಿನ ಸಮಯದಲ್ಲಿ ಅವಳು ಒಬ್ಬೊಂಟಿಗಳಾಗಿ ಬಾವಿಯ ಬಳಿ ಬಂದಿದ್ದಳು), ಇಡೀ ಹಳ್ಳಿಗೆ ಯೇಸು ಕ್ರಿಸ್ತನ ಸುವಾರ್ತೆಯನ್ನು ಸಾರಲು ಹೋದಳು (ವ. 28–29). ಇವತ್ತಿಗೂ ಸಹ, ಯೇಸು ಕ್ರಿಸ್ತನ ರಕ್ತವು ನಮ್ಮ ಪಾಪಗಳಿಂದ ನಮ್ಮನ್ನು ಶುದ್ಧೀಕರಿಸುತ್ತದೆ ಮತು ನಮ್ಮನ್ನು ನೂತನ ಸೃಷ್ಟಿಗಳನ್ನಾಗಿ ಮಾಡುತ್ತದೆ (2 ಕೊರಿ. 5:17).

- **ಉಕ್ಕಿಹರಿಯುವ ನೀರು (ವ. 14)**. ಯೇಸು ಕ್ರಿಸ್ತನು ಕೊಡುವ ನೀರು (ತೃಪ್ತಿ) ವಿಶ್ವಾಸಿಯಲ್ಲಿ ಉಕ್ಕುವ ಒರತೆಯಾಗಿ ಉಕ್ಕಿಹರಿಯುತ್ತದೆ (ಯೋಹಾನ 7:37–39). ಒಬ್ಬ ವಿಶ್ವಾಸಿಯು ಪವಿತ್ರಾತ್ಮನನ್ನು ಹೊಂದುವಾಗ, ಯೇಸು ಕ್ರಿಸ್ತನು ಅವರಲ್ಲಿ ಎಡಬಿಡದೆ, ಜೀವ ಕೊಡುವ ಸಂಪನ್ಮೂಲವಾಗಿರುತ್ತಾನೆ.

ಸಿ. ಸಮಾರ್ಯದ ಸ್ತ್ರೀಯ ಹಾಗೆ, ಆತ್ಮಗಳನ್ನು ಸಂಪಾದಿಸುವವಳ ಜೀವಿತವು ತಾನು ಜೀವಜಲವನ್ನು ಕುಡಿದಿರುವದನ್ನು ವ್ಯಕ್ತಪಡಿಸಬೇಕು (ಯೇಸು ಕ್ರಿಸ್ತನಲ್ಲಿ ಆಕೆಯು ರಕ್ಷಣೆಯನ್ನು ಹೊಂದಿರಬೇಕು). ಉಕ್ಕಿಹರಿಯುವಿಕೆಯು ಪ್ರತಿಯೊಬ್ಬರನ್ನು ಸಂಧಿಸುವಂಥದ್ದಾಗಿರಬೇಕು ಮತ್ತು ಆಕೆಯು ಹೆಚ್ಚೆಚ್ಚು ಜನರಿಗೆ ಸುವಾರ್ತೆಯನ್ನು ಸಾರುವವಳಾಗಬೇಕು.

3. **ಆತ್ಮಗಳನ್ನು ಗೆಲ್ಲುವವಳು ಸಂದೇಶವುಳ್ಳವಳಾಗಿರುತ್ತಾಳೆ (ಯೋಹಾನ 4:29)**. ಯೇಸು ಕ್ರಿಸ್ತನಿಂದ ರಕ್ಷಿಸಲ್ಪಟ್ಟಿರುವ ಮತ್ತು ಆತನಲ್ಲಿ ಸತತವಾಗಿ ತೃಪ್ತಿಯನ್ನು ಹೊಂದುವ ಆತ್ಮಗಳನ್ನು ಸಂಪಾದಿಸುವವಳು ಸಮಾರ್ಯದ ಸ್ತ್ರೀಯಂತೆಯೇ ಸಂದೇಶವನ್ನು ಹಂಚಿಕೊಳ್ಳುವವಳಾಗಿರುತ್ತಾಳೆ:

ಎ. **ಸತ್ಯದ** ಸಂದೇಶ: **"**ಅಲ್ಲಿ ಒಬ್ಬನಿದ್ದಾನೆ, ನಾನು ಇದುವರೆಗೆ ಮಾಡಿದ್ದನ್ನೆಲ್ಲಾ ನನಗೆ ಹೇಳಿದನು, ಬಂದು ಅವನನ್ನು ನೋಡಿರಿ**"** (ವ. 29). ಯೇಸು ಕ್ರಿಸ್ತನು ಹೇಳಿದವುಗಳೆಲ್ಲವೂ ಸತ್ಯ ಎಂಬದು ಆಕೆಗೆ ಚೆನ್ನಾಗಿ ಗೊತ್ತಿತ್ತು. ತಾನೇ ಸತ್ಯವಾಗಿರುವ ಯೇಸು ಕ್ರಿಸ್ತನ ಸಂದೇಶ ನಮ್ಮ ಬಳಿ ಇದೆ (ಯೋಹಾನ 14:6).

ಬಿ. **ನಿರೀಕ್ಷೆಯ** ಸಂದೇಶ: **"**...ಬರತಕ್ಕ ಕ್ರಿಸ್ತನು ಅವನೇ ಏನೋ?**"** (ವ. 29). ಕ್ರಿಸ್ತನು ಆಕೆಯ ಹಳ್ಳಿಗೆ ಬರುವನೆಂಬ ಶುಭಸಂದೇಶ ಆಕೆಯಲ್ಲಿತ್ತು. ನಿಜವಾಗಿ ನೋಡುವದಾದರೆ ಆತ್ಮೀಕ ಅಂಧಕಾರ, ಆಚಾರ ಮತ್ತು ಪದ್ದತಿಗಳ ಅಡಿಯಲ್ಲಿ ಜೀವಿಸುತ್ತಿದ್ದ ಸಮಾರ್ಯದವರು ಮಸ್ಸೀಯನನ್ನು ಎದುರುನೋಡುತ್ತಿದ್ದರು. ಆಕೆಯು ಅವರಿಗೆ ನಿರೀಕ್ಷೆಯ ಸಂದೇಶವನ್ನು ಮುಟ್ಟಿಸಿದಳು: ಬರಬೇಕಾದ ಕ್ರಿಸ್ತನು ಅವನೇ ಏನೋ! ನಿಜವಾಗಿಯೂ ಆತನು ಮೆಸ್ಸೀಯನೇ ಆಗಿದ್ದಾನೆ (ವ. 26)!

ಸಿ. **ಪ್ರೇರೇಪಣೆಯ** ಸಂದೇಶ: **"**....ಬರತಕ್ಕ ಕ್ರಿಸ್ತನು ಅವನೇ ಏನೋ?**"** (ವ. 29). ಆಕೆಯು ಅವರ ಕುತೂಲಹವನ್ನು ಆಲೋಚಿಸಲು ಮತ್ತು ಕಾರ್ಯ ಮಾಡಲು ಕೆಣಕುತ್ತಿದ್ದಳು.

ಡಿ. **ಆಮಂತ್ರಣದ** ಸಂದೇಶ: **"**ಬಂದು ಅವನನ್ನು ನೋಡಿರಿ...**"** (ವ. 29). ಆಕೆಯು, ಸತ್ಯ, ನಿರೀಕ್ಷೆ ಮತ್ತು ಪ್ರೇರಣೆಯ ತನ್ನ ಸಂದೇಶದೊಂದಿಗೆ ಬಂದು ಯೇಸು ಕ್ರಿಸ್ತನನ್ನು ವೈಯಕ್ತಿಕವಾಗಿ ಅನುಭವಿಸುವಂತೆ ಆಮಂತ್ರಣವನ್ನು ನೀಡಿದಳು.

**4. ಆತ್ಮಗಳನ್ನು ಗೆಲ್ಲುವವಳು ಅತ್ಯುತ್ಸಾಹದ ಸಾಕ್ಷಿಯಾಗಿರುತ್ತಾಳೆ (ಯೋಹಾನ 4:28).** ಆಕೆಯು:

ಎ. **ಸಂತೋಷಭರಿತಳಾಗಿರುತ್ತಾಳೆ (ವ. 28).** ಸಮಾರ್ಯದ ಸ್ತ್ರೀಯು ಸಂತೋಷವುಳ್ಳವಳಾಗಿದ್ದರಿಂದ ತಾನು ತಂದಿದ್ದ ನೀರಿನ ಕೊಡವನ್ನು ಅಲ್ಲಿಯೇ ಬಿಟ್ಟು ಹೊರಟಳು! ಆಕೆಯು ಜೀವಜಲವಾದ (ಯೇಸು ಕ್ರಿಸ್ತನನ್ನು) ಅಂಗೀಕರಿಸಿಕೊಂಡಿದ್ದಳು ಮತ್ತು ಶುದ್ಧೀಕರಿಸಲ್ಪಟ್ಟು, ತುಂಬಿಸಲ್ಪಟ್ಟಿದ್ದಳು ಹಾಗೂ ನಿತ್ಯವಾದ ಲಾಭದೊಂದಿಗೆ ತುಂಬಿ ಹೊರಸೂಸುವವಳಾಗಿದ್ದಳು.

ಬಿ. **ಧರ್ಯಶಾಲಿಯಾಗಿದ್ದಳು (ವ. 28).** ಆಕೆಯು ಅಪಕೀರ್ತಿಗೆ ಪಾತ್ರಳಾಗಿದ್ದರೂ ತನ್ನ ಸ್ವಂತ ಊರಿಗೆ ಮರಳಿದಳು. ಆಕೆಯನ್ನು ಹೊರಹಾಕಿದ್ದವರ ಬಳಿಗೇ ಆಕೆಯು ಹೋದಳು.

ಸಿ. **ಕೆಚ್ಚೆದೆಯುಳ್ಳವಳಾಗಿದ್ದಳು (ವ. 29).** ಆಕೆಯು ಅವರನ್ನು ಪ್ರೇರೇಪಿಸಿದಳು, **"**ಬಂದು ನೋಡಿರಿ.**"** ಯೇಸು ಕ್ರಿಸ್ತನೇ ಮೆಸ್ಸೀಯನೆಂದು ಹೇಳಿದಳು ಮತ್ತು ಅವರನ್ನು ಆತನ ಬಳಿ ಕರೆತರಲು ಅವರಲ್ಲಿ ಕುತೂಹಲವನ್ನು ಮೂಡಿಸಿದಳು.

ಡಿ. **ನಾಚಿಕೆಪಟ್ಟುಕೊಳ್ಳಲಿಲ್ಲ (ವ. 29).** "ನಾನು ಮಾಡಿದೆಲ್ಲವುಗಳನ್ನು ಆತನು ನನಗೆ ಹೇಳಿದನು" ಎಂದು ಆಕೆಯು ಹೇಳಿದಳು. ಇದರ ಮೂಲಕ ತಾನು ಮಾಡಿದ ಕಾರ್ಯಗಳನ್ನು ಒಪ್ಪಿಕೊಂಡಳು, ಆದರೆ ಯೇಸು ಕ್ರಿಸ್ತನು ಅವಳನ್ನು ಶುದ್ಧೀಕರಿಸುವದಕ್ಕೂ ಮೊದಲು ಅವಳ ಕಾರ್ಯಗಳನ್ನು ಅವಳಿಗೆ ಅಸಹ್ಯವನ್ನು ಹುಟ್ಟಿಸುತ್ತಿದ್ದವು. ತನ್ನ ಬದಲಾವಣೆಯ ಕುರಿತು ಹೇಳಲು ಆಕೆಯು ನಾಚಿಕೆಪಟ್ಟುಕೊಳ್ಳಲಿಲ್ಲ.

ಇ. **ಅತ್ಯುತ್ಸಾಹವುಳ್ಳವಳಾಗಿದ್ದಳು (ವ. 29).** ತಕ್ಷಣವೇ ಅವಳು ತನ್ನ ಅನುಭವವನ್ನು ಹಂಚಿಕೊಂಡಳು. ಆಕೆಯು ತನ್ನ ಸಮಯವನ್ನು ವ್ಯರ್ಥ ಮಾಡಲಿಲ್ಲ. ಆಕೆಯು ಯಾರನ್ನೂ ವಿಚಾರಿಸಲಿಲ್ಲ. ತಾನು ತೋರುತ್ತಿರುವ ಧೈರ್ಯದ ನಿಮಿತ್ತ ತನಗೇನಾದರೂ ಕೇಡಾಗಬಹುದೇನೋ ಎಂಬದಾಗಿಯೂ ಆಕೆ ಆಲೋಚಿಸಲಿಲ್ಲ. ಆಕೆಯು ಅದನ್ನು ಸರಿಯಾದ ಸಮಯದಲ್ಲಿ ಮಾಡಿದಳು– ಯೇಸು ಕ್ರಿಸ್ತನು ತನ್ನ ಪ್ರಯಾಣವನ್ನು ಮತ್ತೊಂದು ಪಟ್ಟಣದ ಕಡೆಗೆ ಬೆಳೆಸಿದನು.

ಎಫ್. **ಫಲದಾಯಕತೆ (ವ. 39–42).** ಆಕೆಯ ಸಾಕ್ಷಿಯ ನಿಮಿತ್ತ ಆಕೆಯ ಹಳ್ಳಿಯ ಅನೇಕ ಸಮಾರ್ಯದವರು ನಂಬಿಕೆಯಿಟ್ಟರು ಮತ್ತು ಯೇಸು ಕ್ರಿಸ್ತನ ಬಳಿಗೆ ಬಂದರು. ಅವರ ನಂಬಿಕೆಯು ವೈಯಕ್ತಿಕವಾಗಿರುವದಕ್ಕಾಗಿ, ಆತನು ತಾನೇ ಅವರನ್ನು ಸಂಕ್ಷಿಪ್ತವಾಗಿ ಶಿಷ್ಯೆಯರನ್ನಾಗಿ ಮಾಡಿದನು. ಅವರ ನಂಬಿಕೆಯು ಯೇಸು ಕ್ರಿಸ್ತನಲ್ಲಿತ್ತೇ ಹೊರತು ಆಕೆಯಲ್ಲಲ್ಲ. ಇದು ಒಳ್ಳೆಯ ಸಾಕ್ಷಿಯ ಉತ್ತಮವಾದ ಉದಾಹರಣೆಯಾಗಿದೆ–ಆಕೆಯು ಜನರನ್ನು ಯೇಸು ಕ್ರಿಸ್ತನಲ್ಲಿ ದೊರೆಯುವ ವೈಯಕ್ತಿಕವಾಗಿ ದೊರೆಯುವ ನಂಬಿಕೆಗೆ ನಡೆಸಿದಳು.

**ಚರ್ಚಾ ಪ್ರಶ್ನೆಗಳು**

1. ಸಮಾರ್ಯದ ಸ್ತ್ರೀಯು ತನ್ನ ಪಾಪಮಯವಾದ ಜೀವನಶೈಲಿಯ ಕಾರಣ ತನ್ನ ಸಮುದಾಯದವರಿಂದ ನ್ಯಾಯತೀರ್ಪಿಗೆ ಒಳಗಾಗಿದ್ದಳು. ಆಕೆಯನ್ನು ಸಾಕ್ಷಿಯನ್ನಾಗಿ ನಿಲ್ಲಿಸಲು ಯೇಸು ಕ್ರಿಸ್ತನು ಆ ಅಡಚಣೆಯನ್ನು ಜಯಿಸಿದನು. ಸುವಾರ್ತೆಯನ್ನು ಸಾರಲು ನೀವು ಮುಂದಾಗುವ ಸಂಪ್ರದಾಯ ಪದ್ಧತಿಗಳಿಂದ ಸೃಷ್ಟಿಸಲ್ಪಟ್ಟಿರುವ ಅಡ್ಡಗೋಡೆಗಳನ್ನು ನೀವು ಹೇಗೆ ಜಯಿಸುತ್ತೀರ?

2. ಸಮಾರ್ಯದ ಸ್ತ್ರೀಯ ಹಾಗೆ ಅತ್ಯುತ್ಸಾಹದಿಂದ ಸಾಕ್ಷಿಯಾಗಿ ನಿಲ್ಲಲು ಪ್ರಯತ್ನಿಸುವ ಒಬ್ಬ ವ್ಯಕ್ತಿಯಲ್ಲಿರಬೇಕಾದ ಆರು ಗುಣಗಳು ಯಾವುವು? ನೀವು ಅತ್ಯುತ್ಸಾಹದಿಂದ ಕೂಡಿದ ಸಾಕ್ಷಿಯಾಗಿದ್ದೀರ? ಯಾಕೆ ಅಥವಾ ಯಾಕಿಲ್ಲ?

**ಪ್ರಾರ್ಥನೆ**

ಕರ್ತನೇ, ನನ್ನ ಫಲವುಳ್ಳ ಆತ್ಮಗಳನ್ನು ಗೆಲ್ಲುವವಳನ್ನಾಗಿ ಮಾಡು. ಜೀವಜಲವಾಗಿರುವ ಯೇಸು ಕ್ರಿಸ್ತನು ನನಗೆ ಗೊತ್ತು ಎಂಬದನ್ನು ಧೈಯದಿಂದ ಮತ್ತು ಕೆಚ್ಚೆದೆಯಿಂದ ಹೇಳಲು ಹಾಗೂ ಸಂತೋಷಭರಿತಳಾಗಿರಲು ನನಗೆ ಸಹಾಯಮಾಡು. ಹೀಗೆ ನನ್ನನ್ನು ಶಿಷ್ಯೆಯರನ್ನು ಮಾಡುವವಳನ್ನಾಗಿ ಮಾಡು ಮತ್ತು ನಾನು ಶಿಷ್ಯೆಯರನ್ನಾಗಿ ಮಾಡುವವರು ಒಳ್ಳೇ ಫಲಗಳನ್ನು ಕೊಡುವವರಾಗುವವರೆಗೂ ಬೆಳೆಯುವಂತೆ ಅವರಿಗೆ ಸಹಾಯಮಾಡು. ಆಮೆನ್.



# ನೋಟ್ಸ್

# 9 ನವೋಮಿ ಮತ್ತು ರೂತಳು

## ಒಳ್ಳೆಯ ಶಿಷ್ಯತ್ವಕ್ಕಾಗಿ ವಿಶ್ವಸನೀಯ ಸಲಹೆಗಳನ್ನು ಕೊಡುವದು

**ಕೀ ವಚನ: ತೀತ 2:2–4**

"ಹಾಗೆಯೇ ವೃದ್ಧಸ್ತ್ರೀಯರು ಚಾಡಿಹೇಳುವವರೂ ಮದ್ಯಕ್ಕೆ ಗುಲಾಮರೂ ಆಗಿರದೆ ದೇವಭಕ್ತೆಯರಿಗೆ ಯೋಗ್ಯವಾದ ನಡತೆಯುಳ್ಳವರೂ ಸುಬೋಧನೆ ಹೇಳುವವರೂ ಆಗಿರಬೇಕು....ಹೀಗೆ ಅವರು ಪ್ರಾಯದ ಸ್ತ್ರೀಯರಿಗೆ....ಬುದ್ಧಿಕಲಿಸಲು"

**ವಚನಭಾಗಗಳು: ರೂತಳ ಪುಸ್ತಕ**

**ಪರಿಚಯ**

1. ಶಿಷ್ಯತ್ವದ ತತ್ವವನ್ನು ರೂಪಿಸಿದವನು ಯೇಸು ಕ್ರಿಸ್ತನೇ ಆಗಿದ್ದಾನೆ. ಯೇಸು ಕ್ರಿಸ್ತನು ಹನ್ನೆರಡು ಮಂದಿ ಶಿಷ್ಯರನ್ನು ಆರಿಸಿಕೊಂಡನು, ಆದರೆ ಮೂವರನ್ನು (ಪೇತ್ರ, ಯಾಕೋಬ, ಯೋಹಾನ) ಹತ್ತಿರದಿಂದ ಶಿಷ್ಯತ್ವಕ್ಕೆ ನಡೆಸಲು ಆರಿಸಿಕೊಂಡನು. ಅವರು ಅತ್ಯಲ್ಪ ಅವಧಿಯವರೆಗೆ ಮಾತ್ರವೇ ಒಟ್ಟಾಗಿದ್ದರು, ಆದರೆ ಅದು ಅತ್ಯಮೂಲ್ಯವಾದ ಸಮಯವಾಗಿತ್ತು.

2. ಸಾಮರ್ಥ್ಯವುಳ್ಳ ನಾಯಕರ ಬೆಳವಣಿಗೆಗಾಗಿ ಅವರನ್ನು ಪ್ರೋತ್ಸಾಹಪಡಿಸುವದು ಮತ್ತು ಅವರನ್ನು ಸೇವೆಗಾಗಿ ಬೆಳೆಸುವದು ಶಿಷ್ಯೆಯರನ್ನು ಮಾಡುವ ಸಹೋದರಿಯ ಗುರಿಯಾಗಿರುತ್ತದೆ (2 ತಿಮೊ. 4:1–2). ಶಿಷ್ಯರನ್ನು ಮಾಡುವವರಿಗಿರುವ ಮತ್ತೊಂದು ಹೆಸರು ವಿಶ್ವಸನೀಯ ಸಲಹೆಗಾರರು, ಅಂದರೆ "ಬುದ್ಧಿವಂತ ಅಥವ ಭರವಸೆಯುಳ್ಳ ಬೋಧಕಿ ಅಥವಾ ಸಲಹೆಗಾರ್ತಿ" ಎಂದು ವ್ಯಾಖ್ಯಾನಿಸಲಾಗಿದೆ. ವಿಶ್ವಸನೀಯ ಸಲಹೆಗಾರ್ತಿಯ ಬಳಿ ಕಲಿಯುವವರನ್ನು "ಸಲಹಾ ಕಲಿಯುವಾಕೆ" ಎಂದು ಕರೆಯಲಾಗುತ್ತದೆ.

3. ಸತ್ಯವೇದದ ಪುಸ್ತಕವಾದ ರೂತಳು (ಸಲಹಾ ಕಲಿಯುವಾಕೆ) ಮತ್ತು ನವೋಮಿಯೊಂದಿಗೆ (ಆಕೆಯ ಸಲಹಗಾರ್ತಿ) ಆಕೆಯ ಸಂಬಂಧವನ್ನು ಕಲಿತುಕೊಳ್ಳುವದನ್ನು ಗಮನಿಸಿ ಈ ತತ್ವವನ್ನು ಮಾದರಿಯಾಗಿ ಕೊಡಲಾಗಿದೆ.

**ಒಳ್ಳೆಯ ಸಲಹಗಾರ್ತಿಯ ಗುಣಗಳು**

1. ಒಳ್ಳೆಯ ಸಲಹೆಗಾರ್ತಿಯರು **ಸಾಂಸ್ಕೃತಿಕ/ಸಾಮಾಜಿಕ ಅಡೆ–ತಡೆಗಳನ್ನು ಲೆಕ್ಕಿಸುವದಿಲ್ಲ (1:3–4)**. ನವೋಮಿಯು ಯೆಹೂದ್ಯಳಾಗಿದ್ದಳು, ರೂತಳು ಮೋವಾಬ್ಯಳಾಗಿದ್ದಳು.

   ಎ. ಜನಾಂಗೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಡೆ–ತಡೆಗಳು ನಮ್ಮ ಲೋಕದ ಭಾಗಗಳಾಗಿವೆ, ಆದರೆ ಇವುಗಳು ದೇವರ ರಾಜ್ಯದ ಭಾಗಗಳಾಗಿರಬಾರದು.

   ಬಿ. ದೇವರ ರಾಜ್ಯದ ನಿಯಮವು ಪ್ರೀತಿಯಾಗಿದೆ. ನಮ್ಮಂತೆ ಇರದಿರುವವರನ್ನು ಸಹ ಸಂಧಿಸುವಂತೆ ಪ್ರೀತಿಯು ನಮ್ಮನ್ನು ಪ್ರೇರೇಪಿಸುತ್ತದೆ.

   ಸಿ. ನಮ್ಮ ಸಲಹೆಗಾರ್ತಿಯನ್ನಾಗಿ ಯಾರನ್ನಾದರೂ ಆರಿಸಿಕೊಳ್ಳುವಾಗ, ಸಂಪ್ರದಾಯ ಅಥವಾ ಆಚಾರಗಳ ಅಡೆ–ತಡೆಗಳನ್ನು ಲೆಕ್ಕಿಸದಿರುವ ದೇವರ ತರಹದ ಕಣ್ಣುಗಳು ನಮ್ಮದಾಗಿರಬೇಕು (2 ಪೇತ್ರ 3:9).

2. ಒಳ್ಳೆಯ ಸಲಹೆಗಾರ್ತಿಯರು **ದರ್ಶನ/ಗುರಿ ಹೊಂದಿರುತ್ತಾರೆ (1:6–7)**. ನವೋಮಿಗೆ ತಾನು ಹೋಗುತ್ತಿರುವದು ಎಲ್ಲಿಗೆ ಎಂಬದು ಗೊತ್ತಿತ್ತು–ಆಕೆಯು ಯೆಹೂದಕ್ಕೆ ಮರಳಿ ಹೋಗುತ್ತಿದ್ದಳು.

   ಎ. ಸಲಹೆಗಾರ್ತಿಯರು ಮನಸ್ಸಿನಲ್ಲಿ ಸಂಕಲ್ಪವನ್ನು ಹೊಂದಿದವರಾಗಿರಬೇಕು. ಸಂಬಂಧದ ಅಂತಿಮವಾದ ಫಲಿತಾಂಶ ಏನಾಗಿರಬೇಕು (ಜ್ಞಾನೋ. 29:18)?

   ಬಿ. ಶಿಷ್ಯತ್ವವು ಸ್ವ–ಬೆಳವಣಿಗೆಗಿಂತಲೂ ಹೆಚ್ಚಿನದಾಗಿದೆ; ಇದು ಜನರಿಗೆ ಯೇಸು ಕ್ರಿಸ್ತನಂತೆ ಆಗಲು ನೀಡುವ ಬೋಧನೆಯಾಗಿದೆ (2 ಕೊರಿ. 3:18).

3. ಒಳ್ಳೆಯ ಸಲಹೆಗಾರ್ತಿಯರು **ಸ್ವ–ನಿರ್ಣಯ ತೆಗೆದುಕೊಳ್ಳಲು ಅನುಮತಿಯನ್ನು ಕೊಡುತ್ತಾರೆ (1:8–9)**. ನವೋಮಿಯು ಓರ್ಫಳು ಮತ್ತು ರೂತಳಿಗೆ ತಮಗೆ ಬೇಕಾದದನ್ನು ಆರಿಸಿಕೊಳ್ಳುವ ಅನುಮತಿಯನ್ನು ಕೊಟ್ಟಳು.

   ಎ. ದೇವರು ಮನುಷ್ಯರಿಗೂ ಸಹ ತಮಗೆ ಬೇಕಾದದ್ದನ್ನು ಆರಿಸಿಕೊಳ್ಳಲು ಅಧಿಕಾರವನ್ನು ಕೊಟ್ಟಿದ್ದಾನೆ (ಧರ್ಮೋ. 30:19).

   ಬಿ. ಸಲಹೆಗಾರ್ತಿಯೇ ಮಾರ್ಗವನ್ನು ಆರಿಸಿ ತನ್ನಿಂದ ಕಲಿತುಕೊಳ್ಳುವರನ್ನು ಅದರಲ್ಲಿ ನಡೆಯುವಂತೆ ಎಂದಿಗೂ ಒತ್ತಾಯಪಡಿಸಬಾರದು.

   ಸಿ. ಒಳ್ಳೆಯ ಸಲಹೆಗಾರ್ತಿಯರು ಸರಿಯಾದ ಮಾರ್ಗವನ್ನು ಸ್ಪಷ್ಟವಾಗಿ ತಿಳಿಯಪಡಿಸುತ್ತಾರೆ ಮತ್ತು ಅದನ್ನು ಅಂಗೀಕರಿಸಿಕೊಳ್ಳುವ ಅಥವಾ ತಿರಸ್ಕರಿಸುವ ತೀರ್ಮಾನ ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಕಲಿಯುವವರಿಗೆ ಕೊಡುತ್ತಾರೆ.

   ಡಿ. ಕಲಿತುಕೊಳ್ಳುವವರು ಒಂದುವೇಳೆ ತಪ್ಪು ಮಾಡಿದರು, ಸಲಹೆಗಾರ್ತಿಯರು ದೃಢಪಡಿಸುವವರು ಮತ್ತು ಪ್ರೀತಿಸುವವರಾಗಿರಬೇಕು.

4. ಒಳ್ಳೆಯ ಸಲಹೆಗಾರ್ತಿಯರು **ದೈವೀಕ ದೃಷ್ಟಿಕೋನವನ್ನು ಅಭ್ಯಾಸಿಸುವವರಾಗಿರುತ್ತಾರೆ (2:19)**. ಜವಾಬ್ದಾರಿಯುತಳಾಗಿರುವಂತೆ ನವೋಮಿಯು ರೂತಳನ್ನು ಪ್ರೋತ್ಸಾಹಪಡಿಸಿದಳು.

   ಎ. ಸಲಹೆಗಾರ್ತಿಯರು ತಮ್ಮಿಂದ ಕಲಿತುಕೊಳ್ಳುವವರೊಂದಿಗೆ ನಿಕಟವಾದ ಸಂಪರ್ಕ ಹೊಂದಿರುತ್ತಾರೆ ಮತ್ತು ಅವಿವೇಕತನದ ಕಾರ್ಯಗಳನ್ನು ಮಾಡದಂತೆ ಬುದ್ಧಿಪೂರ್ವಕವಾಗಿ ಸಲಹೆಯನ್ನು ಕೊಡುತ್ತಾರೆ.

   ಬಿ. ಜವಾಬ್ದಾರಿಯುತರಾಗಿರಬೇಕೆಂದು ಬಯಸುವ ಉದ್ದೇಶ ಅವರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವದಕ್ಕಲ್ಲ ಬದಲಾಗಿ ಕಲಿಸಲು ಮತ್ತು ಬೆಳೆಸಲು ಆಗಿದೆ.

5. ಒಳ್ಳೆಯ ಸಲಹೆಗಾರ್ತಿಯರು **ತಮ್ಮ ಜ್ಞಾನ ಮತ್ತು ತಿಳುವಳಿಕೆಯನ್ನು ಹಂಚಿಕೊಳ್ಳುತ್ತಾರೆ (2:20)**. ನವೋಮಿಗೆ ಯೆಹೂದ್ಯರ ಪದ್ಧತಿಗಳು ಮತ್ತು ಆಚಾರಗಳು ಗೊತ್ತಿದ್ದವು– ಆದರೆ ರೂತಳಿಗೆ ಗೊತ್ತಿರಲಿಲ್ಲ. ನವೊಮಿಯು ಈ ಮಾಹಿತಿಗಳನ್ನು ರೂತಳಿಗೆ ಕಲಿಸಿದಳು ಮತ್ತು ಸರಿಯಾದ ತೀರ್ಮಾನಗಳನ್ನು ತೆಗೆದುಕೊಳ್ಳುವಂತೆ ಅವಳನ್ನು ಪ್ರೇರೇಪಿಸಿದಳು.

   ಎ. ಕಲಿತುಕೊಳ್ಳುವವರು ತಮಗೆ ದೊರೆಯುವ ಹೊಸ ಜೀವಿತದೊಂದಿಗೆ ಬುದ್ಧಿಪೂರ್ವಕವಾಗಿ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಶಕ್ತರಾಗುವಂತೆ ಸಲಹೆಗಾರ್ತಿಯರು ತಮ್ಮ ಸ್ವಂತ ಜ್ಞಾನ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು.

   ಬಿ. ಜ್ಞಾನವು ದೇವರ ವಾಕ್ಯವನ್ನು ತಿಳಿದುಕೊಳ್ಳುವದರಿಂದ ಮತ್ತು ದೇವರೊಂದಿಗೆ ಸಮಯವನ್ನು ಕಳೆಯುವದರಿಂದ ಬರುತ್ತದೆ, ಆತನು ಜೀವನ ಮತ್ತು ಸೇವೆಯ ಕುರಿತಾದ ಪ್ರತಿಯೊಂದು ವಿಷಯದಲ್ಲಿಯೂ ಒಳಆಲೋಚನೆಗಳನ್ನು ಕೊಡುತ್ತಾನೆ.

   ಸಿ. ಕಲಿತುಕೊಳ್ಳುವವರು ತಮ್ಮ ಮೇಲಲ್ಲದೇ ದೇವರ ಜ್ಞಾನ ಮತ್ತು ತಿಳುವಳಿಕೆಯ ಮೇಲೆ ಆತುಕೊಳ್ಳುವವರುವಂತೆ ಮಾಡುವದೇ ಒಳ್ಳೆಯ ಸಲಹೆಗಾರ್ತಿಯರ ಅಂತಿಮ ಗುರಿಯಾಗಿರುತ್ತದೆ.

6. ಒಳ್ಳೆಯ ಸಲಹೆಗಾರ್ತಿಯರು **ದೈವೀಕ ಸಲಹೆಗಳನ್ನು ಕೊಡುತ್ತಾರೆ (2:22, 3:3–4)**. ರೂತಳಿಗೆ ಒಳ್ಳೆಯ ಸಲಹೆಯನ್ನು ಕೊಡಲು ನವೋಮಿಯು ತನ್ನ ಜ್ಞಾನವನ್ನು ಬಳಸಿಕೊಂಡಳು.

   ಎ. ದೈವೀಕ ಸಲಹೆಯು ದೇವರ ವಾಕ್ಯಗಳಲ್ಲಿ ಮಾತ್ರವೇ ದೊರೆಯುತ್ತದೆ. ಶಿಷ್ಯೆಯರನ್ನಾಗಿ ಮಾಡುವಾಗ, ಸಲಹೆಯು ಕೇವಲ ಮಾನವ ಜ್ಞಾನ ಅಥವಾ ವೀಕ್ಷಣೆಯ ಮೇಲೆ ಆಧಾರವಾಗಿರಬಾರದು (ಜ್ಞಾನೋ. 2:6).

ಬಿ. ಸಲಹೆಯಲ್ಲಿ ಕೇವಲ ಹೇಳುವಿಕೆ ಮಾತ್ರವಲ್ಲ ಕೇಳಿಸಿಕೊಳ್ಳುವಿಕೆಯು ಇರುತ್ತದೆ (ಯಾಕೋಬ 1:19).

ಸಿ. ಸಲಹೆಗಾರ್ತಿಯ ಆತ್ಮೀಕ ಜೀವಿತವು ಕಲಿತುಕೊಳ್ಳುವವರು ಆಕೆಯ ಅಧಿಕಾರಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಲು ಸಹಾಯ ಮಾಡುತ್ತದೆ.

7. ಒಳ್ಳೆಯ ಸಲಹೆಗಾರ್ತಿಯರು ಚಿಂತಿಸುವ ಹೃದಯವುಳ್ಳವರಾಗಿರುತ್ತಾರೆ (3:1). ನವೋಮಿಯ ರೂತಳ ಹಿತಚಿಂತಕಳಾಗಿದ್ದಳು.

ಎ. ಸಲಹೆಗಾರ್ತಿಯರು ತಾವು ಸಲಹೆ ಕೊಡುತ್ತಿದ್ದೇವೋ ದೇವರ ಪ್ರೀತಿಯ ಸಾಧನವಾಗಿದ್ದೇವೆ ಮತ್ತು ಪ್ರತಿನಿಧಿಗಳಾಗಿದ್ದೇವೆ ಎಂಬದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಬಿ. ಕರುಣೆ ಮತ್ತು ಕೋಮಲ ಸ್ವಭಾವವು, ಪಾಪಕ್ಕೆ ವಿರುದ್ಧ ನಿರ್ಭಯವಾದ ಪ್ರಬೋಧನೆಯೊಂದಿಗೆ ಕೂಡಿ, ಸರಿಯಾದ ಸಮತೋಲವನ್ನು ಕಂಡುಕೊಳ್ಳುತ್ತದೆ (ಎಫೆ. 4:32).

**ಉತ್ತಮವಾಗಿ ಕಲಿತುಕೊಳ್ಳುವವರ ಗುಣಗಳು**

1. ಉತ್ತಮವಾಗಿ ಕಲಿತುಕೊಳ್ಳುವವರು **ತಮ್ಮ ಸಲಹೆಗಾರ್ತಿಯರಿಗೆ ಭಯಭಕ್ತಿಯುಳ್ಳವರಾಗಿ ನಡೆದುಕೊಳ್ಳುತ್ತಾರೆ (1:14–17)**. ರೂತಳು ನವೋಮಿಗೆ ಭಯಭಕ್ತಿಯುಳ್ಳವಳಾಗಿ, ಪ್ರೀತಿ, ಹಿತಚಿಂತನೆ ಮತ್ತು ಗೌರವವನ್ನು ವ್ಯಕ್ತಪಡಿಸಿದಳು.

ಎ. ನವೋಮಿಯ ದೇವರಿಗೆ ಭಯಭಕ್ತಿಯುಳ್ಳವಳಾಗಿ ನಡೆದುಕೊಳ್ಳುವ ಸಲುವಾಗಿ ತಾನು ಇಲ್ಲಿಯವರೆಗೂ ಆರಾಧಿಸುತ್ತಿದ್ದ ಅನ್ಯದೇವತೆಗಳ ಆರಾಧನೆಯನ್ನೇ ತ್ಯಜಿಸಿದಳು (ಜ್ಞಾನೋ. 28:13; ಅ.ಕೃ 3:19).

ಬಿ. ರೂತಳು ತನ್ನ ತವರು ಮನೆಗೆ ಹೋಗದೆ, ನವೋಮಿಯೊಂದಿಗಿರುವ ಆಯ್ಕೆ ಮಾಡಿಕೊಂಡ ಬಯಕೆಯಲ್ಲಿಯೇ ಅವಳ ಪ್ರೀತಿಯು ಪ್ರಕಟವಾಯಿತು (1 ಪೇತ್ರ 1:22).

2. ಉತ್ತಮವಾಗಿ ಕಲಿತುಕೊಳ್ಳುವವರು **ವಿಧೇಯರಾಗಿರುತ್ತಾರೆ (3:5)**. ನವೋಮಿಯು ಕೊಟ್ಟ ಸೂಚನೆಗಳ ಪ್ರಕಾರವೇ, ರೂತಳು ನಡೆದುಕೊಂಡಳು.

ಎ. ವಿಧೇಯತೆಯುಳ್ಳ ಹೃದಯವು ದೀನತೆಯುಳ್ಳ ಹೃದಯವಾಗಿರುತ್ತದೆ, ಮತ್ತು ಯಶಸ್ವೀಕರವಾದ ಶಿಷ್ಯತ್ವದ ಸಂಬಂಧದ ಪ್ರಾಮುಖ್ಯ ವಿಷಯವಾಗಿದೆ (ಕೀರ್ತನೆ 51:10–12).

ಬಿ. ದೇವರ ಬಳಿಗೆ ಬರುವವರು ತಮ್ಮ ಹೃದಯಗಳೊಂದಿಗೆ ಬರಬೇಕೇ ಹೊರತು ಕೇವಲ ಆಲೋಚನೆಗಳ ಮೂಲಕ ಬರಬಾರದು (ಯೋಹಾನ 4:24).

3. ಉತ್ತಮವಾಗಿ ಕಲಿತುಕೊಳ್ಳುವವರು **ತಮ್ಮ ಸ್ವಂತ ಆಲೋಚನೆಗಳುಳ್ಳವರಾಗಿರುತ್ತಾರೆ (2:2)**. ತೆನೆಗಳನ್ನು ಕೂಡಿಸಲು ಹೊಲಕ್ಕೆ ಹೋಗಬಹುದೇ ಎಂದು ರೂತಳು ನವೋಮಿಯನ್ನು ಕೇಳಿಕೊಂಡಳು.

   ಎ. ಕಲಿತುಕೊಳ್ಳುವವರಿಗೆ ಇದಕ್ಕೂ ಮೊದಲು ಇಂಥ ಅನುಭವವಿಲ್ಲದಿದ್ದರು ಅವರು ಕ್ರಿಯಾಶೀಲವಾಗಿ ಆಲೋಚಿಸ ಬೇಕು ಹೊಸ ಆಲೋಚನೆಗಳುಳ್ಳವರಾಗಿರಬೇಕು (ಯೆಶಾಯ 43:19).

   ಬಿ. ಒಂದುವೇಳೆ ಸೋತುಹೋಗುವ ಸನ್ನಿವೇಶವಿದ್ದರೂ, ಹೊಸದಾಗಿ ಪ್ರಯತ್ನಿಸುವ ವಿಧಾನವು ಶಿಷ್ಯೆಯರಿಗೆ ಕಲಿತುಕೊಳ್ಳಲು ಮತ್ತು ಬೆಳೆಯಲು ಸಹಾಯ ಮಾಡುವ ಉತ್ತಮ ಮಾರ್ಗವಾಗಿದೆ.

4. ಉತ್ತಮವಾಗಿ ಕಲಿತುಕೊಳ್ಳುವವರು **ಪ್ರಾಮಾಣಿಕವಾದ ಮತ್ತು ಪರಿಪೂರ್ಣವಾದ ವರದಿಯನ್ನು ಒಪ್ಪಿಸುತ್ತಾರೆ (2:19–22)**.

   ಎ. ರೂತಳು ಅಭದ್ರತೆಯ ಭಾವವಿಲ್ಲದಳಾಗಿ ನವೋಮಿಯ ಪ್ರಶ್ನೆಗಳಿಗೆ ಉತ್ತರಿಸಿದಳು.

   ಬಿ. ನವೋಮಿಯಿಂದ ಒಳ್ಳೆಯ ಮಾರ್ಗದರ್ಶನವನ್ನು ಪಡೆಯುವದಕ್ಕಾಗಿ ಆಕೆಯ ಬೇಕಾದ ಮಾಹಿತಿಗಳನ್ನು ಕೊಡುತ್ತಾ ರೂತಳು ಪ್ರಾಮಾಣಿಕವಾಗಿ ಮತ್ತು ಪರಿಪೂರ್ಣವಾಗಿ ಉತ್ತರಿಸಿದಳು (1 ಪೇತ್ರ 3:15).

**ಸಲಹಾ ಸಂಬಂಧದಿಂದ ದೊರೆಯುವ ಆಶೀರ್ವಾದಗಳು**

1. ಸಲಹೆ ಕೊಡುವವರು ಮತ್ತು ಅದರಿಂದ ಕಲಿತುಕೊಳ್ಳುವವರು **ಇಬ್ಬರೂ ದೇವರ ಆಶೀರ್ವಾದವನ್ನು ಹಂಚಿಕೊಳ್ಳುತ್ತಾರೆ (3:16–18; 4:14–16)**. ನವೋಮಿಯ ರೂತಳ ಆಶೀರ್ವಾದದಲ್ಲಿ ಭಾಗಿಯಾದಳು.

   ಎ. ಸಲಹಾ ಸಂಬಂಧದ ಅಂತಿಮವಾದ ಗುರಿ ದೇವರ ರಾಜ್ಯಕ್ಕೆ ಲಾಭವನ್ನು ಕೊಡುವದಾಗಿದೆ ಮತ್ತು ಎಲ್ಲರೂ ಒಟ್ಟಾಗಿ ಈ ಆಶೀರ್ವಾದದಲ್ಲಿ ಪಾಲುತೆಗೆದುಕೊಳ್ಳುವವರಾಗಿದ್ದಾರೆ.

   ಬಿ. ಕಲಿತುಕೊಳ್ಳುವವರ ಸಫಲತೆಯನ್ನು ಸಲಹೆಗಾರ್ತಿಯರು ಕೊಂಡಾಡ ಬೇಕು ಮತ್ತು ಎಂದಿಗೂ ಹೊಟ್ಟೆಕಿಚ್ಚುಪಡಬಾರದು (1 ಪೇತ್ರ 2:1).

   ಸಿ. ಕಲಿತುಕೊಳ್ಳುವವರು ಈಗ ತಾವೇ ಸಲಹೆಗಾರ್ತಿಯರಾಗುವದಿಂದ ಆಶೀರ್ವಾದವು ಹಾಗೆಯೇ ಮುಂದುವರೆಯುತ್ತಿರಬೇಕು.

2. ಸಲಹೆಗಾರ್ತಿಯರು ಮತ್ತು ಕಲಿತುಕೊಳ್ಳುವವರು ಇಬ್ಬರೂ **ಒಟ್ಟಿಗೆ ಇತರರಿಗೆ ಮತ್ತು ದೇವರ ರಾಜ್ಯಕ್ಕೆ ಆಶೀರ್ವಾದವನ್ನು ತರುವವರಾಗುರುತ್ತಾರೆ (4:18–22)**. ನವೋಮಿ ಮತ್ತು ರೂತಳ ಸಂಬಂಧ, ಮತ್ತು ನಂತರ ಬೋವಜನು ಮತ್ತು ರೂತಳ ಮದುವೆಯ ನಿಮಿತ್ತ, ಹೊಸದೊಂದು ಕುಟುಂಬವು ಪ್ರಾರಂಭಗೊಂಡು, ಅವರೆಲ್ಲರಿಗೂ ಮಹದಾದ ಆಶೀರ್ವಾದ ಮತ್ತು ಸಂತೋಷವನ್ನುಂಟು ಮಾಡಿತು. ದೇವಜನರು ಒಟ್ಟಾಗಿ ಐಕ್ಯತೆಯೊಂದಿಗೆ ದುಡಿಯುವಾಗ, ಆತನ ರಾಜ್ಯವು ಆಶೀರ್ವದಿಸಲ್ಪಡುತ್ತದೆ (ಕೀರ್ತನೆ 133:1). ರೂತಳು ಮತ್ತು ಬೋವಜನ ಯೇಸು ಕ್ರಿಸ್ತನ ಮೂಲಕವಾಗಿ, ಇಡೀ ಲೋಕವು ಆಶೀರ್ವದಿಸಲ್ಪಟ್ಟಿತು (1 ಕೊರಿ. 15:22).

**ಚರ್ಚಾ ಪ್ರಶ್ನೆಗಳು**

1. ಉತ್ತಮವಾದ ಸಲಹೆಗಾರ್ತಿಯ ಪ್ರಾಮುಖ್ಯವಾದ ಗುಣಗಳಾವುವು? ನಿಮ್ಮಲ್ಲಿ ಆ ಸ್ವಭಾವಗಳಿವೆಯಾ? ಅಭ್ಯಾಸಿಸಲು ಯಾವ ಗುಣವು ನಿಮಗೆ ಕಷ್ಟವಾಗುತ್ತಿದೆ, ಯಾಕೆ?

2. ಉತ್ತಮವಾಗಿ ಕಲಿತುಕೊಳ್ಳುವವರಲ್ಲಿರುವ ಪ್ರಾಮುಖ್ಯವಾದ ಗುಣಗಳಾವುವು? ಅಭ್ಯಾಸಿಸಲು ಯಾವ ಗುಣವು ನಿಮಗೆ ಕಷ್ಟವಾಗುತ್ತಿದೆ, ಯಾಕೆ?

**ಪ್ರಾರ್ಥನೆ**

*ಕರ್ತನಾದ ಯೇಸುವೇ, ಕರುಣೆ ಮತ್ತು ಪ್ರೀತಿಯನ್ನು ತೋರಿಸುತ್ತಾ, ನೀನು ನನಗೆ ಕೊಟ್ಟಿರುವ ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳುವ ಒಳ್ಳೆಯ ಸಲಹಗಾರ್ತಿಯಾಗಿರಲು ನನಗೆ ಸಹಾಯಮಾಡು. ನಾನು ಯಾರಿಗೆ ಸಲಹೆಯನ್ನು ಕೊಡಬೇಕು ಎಂಬದನ್ನು ನನಗೆ ತೋರಿಸು ಮತ್ತು ನಿನ್ನ ಮಾರ್ಗಗಳನ್ನು ನನಗೆ ಕಲಿಸುವವರಿಗೆ ಒಳ್ಳೆಯ ಮತ್ತು ನಂಬಿಗಸ್ಥೆಯಾದ ಕಲಿತುಕೊಳ್ಳುವವಳಾಗಿರಲು ನನಗೆ ಸಹಾಯ ಮಾಡು. ಒಳ್ಳೆಯ ಶಿಷ್ಯತ್ವದಲ್ಲಿ ನಾನು ಭಾಗಿಯಾಗುವ ಸಲಹಾ ಸಂಬಂಧಗಳ ಮೂಲಕವಾಗಿ ಲೋಕವು ಆಶೀರ್ವದಿಸಲ್ಪಡಲಿ. ಆಮೆನ್.*



# 10 ಪ್ರಿಸ್ಕಿಲ್ಲಾ: ಶಿಷ್ಯೆಯರನ್ನು ಮಾಡುವವಳು

**ಕೀ ವಚನ: 2 ತಿಮೊಥೆ 4:2**

**"**ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು.**"**

**ಪ್ರಿಸ್ಕಿಲ್ಲಳ ಹೆಸರು ಬರೆಯಲ್ಪಟ್ಟಿರುವ ವಚನಭಾಗಗಳು:** ಅ.ಕೃ 18:1–4, 18–22, 24–26; ರೋಮಾ 16:3–4; 1 ಕೊರಿ. 16:19; 2 ತಿಮೊ. 4:19).

**ಪರಿಚಯ**

1. ಇತಾಲ್ಯದ ದೇಶದ ಪೊಂತದಲ್ಲಿ ಹುಟ್ಟಿದ ಅಕ್ವಿಲನೆಂಬವನು, ತನ್ನ ಹೆಂಡತಿಯಾದ ಪ್ರಿಸ್ಕಿಲ್ಲಳೊಂದಿಗೆ ಕೊರಿಂಥದಲಿ ವಾಸವಾಗಿದ್ದನು (ಅ.ಕೃ 18:2). 52 ಎ.ಡಿರಲ್ಲಿ ಯೆಹೂದ್ಯರೆಲ್ಲರೂ ರೋಮ್ ಬಿಟ್ಟು ಹೋಗಬೇಕೆಂಬ ರೋಮನ್ ಚಕ್ರವರ್ತಿಯಾದ ಕ್ಲಾಡಿಯನ ರಾಜಾಜ್ಞೆಯ ನಿಮಿತ್ತ ಅವರು ಗಡೀಪಾರು ಮಾಡಲ್ಪಟ್ಟಿದ್ದರು. ಹೊಸ ಒಡಂಬಡಿಕೆಯಲ್ಲಿ ಪ್ರಿಸ್ಕಿಲ್ಲ ಮತ್ತು ಅಕ್ವಿಲರ ಹೆಸರನ್ನು ಆರು ಸಲ ಬರೆಯಲಾಗಿದೆ. (ಮೇಲೆ ಕೊಡಲಗಿರುವ ವಚನಭಾಗಗಳನ್ನು ನೋಡಿರಿ).

2. ಅವರು ಹೆಸರನ್ನು ಎಲ್ಲಾ ಸ್ಥಳಗಳಲ್ಲಿಯೂ ಜೋಡಿಯಾಗಿಯೇ ಬರೆಯಲಾಗಿದೆ, ಎಲ್ಲಿಯೂ ಒಂಟಿಯಾಗಿ ಬರೆಯಲಾಗಿಲ್ಲ.

3. ನಾಲ್ಕು ಸ್ಥಳಗಳಲ್ಲಿ ಪ್ರಿಸಿಲ್ಲಳ ಹೆಸರು ಮೊದಲು ಬರೆಯಲ್ಪಟ್ಟಿದೆ. ಪುರುಷರ ಆಧಿಪತ್ಯವಿರುವ ಸಮಾಜದಲ್ಲಿ ಸ್ತ್ರೀಗೆ ಮಾನ್ಯತೆ ದೊರೆತಿರುವದು ಅತ್ಯಂತ ವಿರಳವಾದ ನಿದರ್ಶನವಾಗಿದೆ.

4. ಕೆಳಗೆ ಕೊಡಲಾಗಿರುವ ಆರು ಗುಣಲಕ್ಷಣಗಳು ಪಿಸ್ಕಿಲ್ಲಾ ಮತ್ತು ಅಕ್ವಿಲನ ಸೇವೆಯ ಮೂಲಕ ಪರಿಶ್ರಮಪಟ್ಟು ದುಡಿದು ಶಿಷ್ಯೆಯರನ್ನು ಮಾಡುವದು ಹೇಗೆ ಎಂಬದನ್ನು ಕಲಿಸುತ್ತದೆ.

**ಶಿಷ್ಯೆಯರನ್ನು ಮಾಡುವಾಕೆಯ ಆರು ಗುಣಸ್ವಭಾವಗಳು (ಪ್ರಿಸಿಲ್ಲಳ ಜೀವಿತದಲ್ಲಿ ಕಾಣಬರುವವುಗಳು)**

1. **ಶಿಷ್ಯೆಯರನ್ನು ಮಾಡುವಾಕೆಯು ದೇವರ ವಾಕ್ಯವನ್ನು ಕಲಿಯಬೇಕು ಮತ್ತು ಅದರಲ್ಲಿಯೇ ಮುಂದುವರೆಯಬೇಕು (ಅ.ಕೃ 18:1–11,26).**

   ಎ. ಪ್ರಿಸ್ಕಿಲ್ಲಾ ಮತ್ತು ಅಕ್ವಿಲ ಇಬ್ಬರೂ ಸಮರ್ಪಣೆಯುಳ್ಳ ಕ್ರೈಸ್ತರಾಗಿದ್ದರೂ ಎಂಬದು ಸ್ಪಷ್ಟವಾದ ವಿಚಾರವಾಗಿದೆ.

   ಬಿ. ದೇವರು, ತನ್ನ ಸೌಲಭ್ಯದನುಸಾರವಾಗಿ, ಗುಡಾರ ಮಾಡುವ ಅವರ ಕೆಲಸದ ಮೂಲಕ ಪೌಲನನ್ನು ಸಂಧಿಸುವಂತೆ ಮಾಡಿದನು. ಕೊರಿಂಥದಲ್ಲಿ 18 ತಿಂಗಳ ಕಾಲ ವಾಸಿಸಿದ ಅವಧಿಯ ಸಮಯದಲ್ಲಿ ಪೌಲನು ಅವರಿಗೆ ದೇವರ ವಾಕ್ಯಗಳಿಂದ ಬೇಕಾದ ಸೂಚನೆಗಳನ್ನು ನೀಡಿದನು.

   ಸಿ. ಇದಾದ ನಂತರ, ಅಪೊಲ್ಲೋಸನಿಗೆ ಬೋಧಿಸುವಷ್ಟು ಅವರಿಬ್ಬರೇ ಸಮರ್ಥರಾದರು. ಹೀಗೆ, ಶಿಷ್ಯೆಯಾಗಿದ್ದ ಪ್ರಿಸ್ಕಿಲ್ಲಳು ತಾನೇ ಬೋಧಕಿ ಅಥವಾ ಶಿಷ್ಯೆಯರನ್ನು ಮಾಡುವವಳಾದಳು.

   ಡಿ. ಪ್ರಿಸ್ಕಿಲ್ಲಳ ಸೇವೆಂಯೇ ಆಕೆಂಯು ದೇವರ ವಾಕ್ಯದಲ್ಲಿ ಮುಂದುವರೆಯುತ್ತಿದ್ದಳು ಮತ್ತು ಆತನ ಶಿಷ್ಯೆಯಾಗಿದ್ದಳು ಎಂಬದಕ್ಕೆ ಸೂಚನೆಯಾಗಿದೆ (ಯೋಹಾನ 8:31). ಶಿಷ್ಯೆಯರನ್ನು ಮಾಡುವಾಕೆಯು ಶಿಷ್ಯೆಯಾಗಿದ್ದು ಜೀವನ ಪರ್ಯಂತ ವಾಕ್ಯವನ್ನು ಕಲಿಯುವ ವಿಧ್ಯಾರ್ಥಿನಿಯಾಗಿರುತ್ತಾಳೆ.

   ಇ. ಒಟ್ಟಾಗಿ ದೇವರ ವಾಕ್ಯಗಳನ್ನು ಕಲಿಯುವ ಮತ್ತು ಅದರ ಬೋಧನೆಗನುಸಾರವಾಗಿ ಜೀವಿಸುವ ಗಂಡ–ಹೆಂಡತಿಯು ಶಿಷ್ಯರನ್ನು ಮಾಡುವ ಒಳ್ಳೆಯ ತಂಡವಾಗಿರುತ್ತಾರೆ.

2. **ಶಿಷ್ಯೆಯರನ್ನು ಮಾಡುವಾಕೆಯು ಅತಿಥಿ ಸತ್ಕಾರ ಮಾಡುವವಳಾಗಿರಬೇಕು (ಅ.ಕೃ 18:3; 18:26; 1 ಕೊರಿ. 16:19).**

   ಎ. ಪ್ರಿಸ್ಕಿಲ್ಲಳು ಅತಿಥಿ ಸತ್ಕಾರ ಮಾಡುವವಳಾಗಿದ್ದಳು.

   - *ಪೌಲನಿಗೆ:* ಕೊರಿಂಥದಲ್ಲಿ ಅವರೇ ಆಶ್ರಯಾರ್ಥಿಗಳಾಗಿದ್ದರೂ, ಪೌಲನ ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ಆತನಿಗೆ ಆಶ್ರಯವನ್ನು ನೀಡಿದರು.

   - *ಸಭೆಗೆ:* ಪೌಲನೊಂದಿಗೆ ಅವರು ಎಫೆಸಕ್ಕೆ ಪ್ರಯಾಣಿಸಿದಾಗ, ಆರಾಧನೆ ಮಾಡಲು ಮತ್ತು ವಿಶ್ವಾಸಿಗಳನ್ನು ಶಿಷ್ಯೆಯರನ್ನಾಗಿ ಮಾಡಲು ಅವರು ತಮ್ಮ ಮನೆಯನ್ನು ಕ್ರೈಸ್ತೀಯ ಸ್ಥಳವಾಗಿ ಉಪಯೋಗ ಮಾಡಲು ಅವಕಾಶ ಕೊಟ್ಟರು.

- *ಅಪೊಲ್ಲೋಸನಿಗೆ:* ದೇವರ ಮಾರ್ಗದನುಸಾರವಾಗಿ ಸರಿಯಾದ ಸೂಚನೆಯನ್ನು ಶೀಘ್ರವೇ ಕೊಡಬೇಕೆಂಬದು ಮನವರಿಕೆಯಾದ ಕೂಡಲೇ ಅವರು ಅಪೊಲ್ಲೋಸನಿಗೆ ಅತಿಥಿ ಸತ್ಕಾರ ಮಾಡಿದರು.

ಬಿ. ಅತಿಥಿ ಸತ್ಕಾರವು ಕ್ರೈಸ್ತೀಯ ಸೇವೆಯ ಪ್ರಾಮುಖ್ಯವಾದ ಭಾಗವಾಗಿದೆ (ರೋಮಾ. 12:13).

ಸಿ. ಅತಿಥಿ ಸತ್ಕಾರವು ಸರಳವಾದ ಆದರಣೆಗಿಂತಲೂ ಹೆಚ್ಚಿನದಾಗಿದೆ. ಕಡೆಗಣಿಸಲ್ಪಟ್ಟವರು, ಕುಗ್ಗಿಸಲ್ಪಟ್ಟವರು ಮತ್ತು ನಾಶನದ ಮಾರ್ಗದಲ್ಲಿರುವವರಿಗೆ ದೇವರ ಮಹದಾದ ಪ್ರೀತಿಯನ್ನು ತೋರ್ಪಡಿಸಲು ಅನ್ಯೋನ್ಯತೆಗೆ ಸ್ವಾಗತಿಸುವದೇ ಅತಿಥಿ ಸತ್ಕಾರವಾಗಿದೆ.

ಡಿ. ಆರಾಧನೆ ಮತ್ತು ಶಿಷ್ಯೆಯರಿಗೆ ಸಲಹೆಗಳನ್ನು ಕೊಡುವದರ ಮೂಲಕ ಮಹಾಆಜ್ಞೆಯನ್ನು ನೆರವೇರಿಸುವದರ ಮೇಲೆಯೇ ಅತಿಥಿ ಸತ್ಕಾರವು ನೆಲೆಯಾಗಿದೆ. ಮನೆಯು ಸುವಾರ್ತೆ ಸಾರಲು ಶಿಷ್ಯೆಯರನ್ನಾಗಿ ಮಾಡಲು ಅಮೂಲ್ಯವಾದ ಸಾಧನವಾಗಿದೆ.

**3. ಶಿಷ್ಯೆಯರನ್ನು ಮಾಡುವಾಕೆಯು ವಿವೇಚನೆಯುಳ್ಳವಳಾಗಿರಬೇಕು (ಅ.ಕೃ 18:24–26).**

ಎ. ಅಪೊಲ್ಲೋಸನ ಬೋಧನೆಯಲ್ಲಿದ್ದ ತಪ್ಪುಗಳನ್ನು ವಿವೇಚಿಸಿ ತಿಳಿದುಕೊಳ್ಳಲು ಪ್ರಿಸ್ಕಿಲ್ಲಾ ಮತ್ತು ಅಕ್ವಿಲನಿಗೆ ಸಾಧ್ಯವಾಯಿತು.

- ಅಪೊಲ್ಲೋಸನು ಯೇಸು ಕ್ರಿಸ್ತನ ಬಗ್ಗೆ ಆತ್ಮಭಾರವುಳ್ಳವನಾಗಿ ಮತ್ತು ನಿಖರವಾಗಿ ಕಲಿಸುತ್ತಿದ್ದ ಧೈರ್ಯವಂತನಾಗಿದ್ದನು, ಆದರೆ ಪ್ರಿಸ್ಕಿಲ್ಲಾ ಮತ್ತು ಅಕ್ವಿಲನು ಅವನ ಬೋಧನೆಯನ್ನು ಕೇಳಿಸಿಕೊಂಡಾಗ, ಅವನ ಬೋಧನೆಯಲ್ಲಿದ್ದ ದೋಷವನ್ನು ಕಂಡುಹಿಡಿದರು; ಅವನಿಗೆ ಸ್ನಾನಿಕನಾದ ಯೋಹಾನನ ಬೋಧನೆ ಮಾತ್ರವೇ ಗೊತ್ತಿತ್ತು.
- ಅವರು ಅವನನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು ಮತ್ತು ಅವನಿಗೆ ಪರಿಪೂರ್ಣವಾದ ಸತ್ಯದ ತಿಳುವಳಿಕೆಯನ್ನು ನೀಡಿದರು.

ಬಿ. ಅನೇಕ ಸುಳ್ಳು ಬೋಧಕರು ಮತ್ತು ಬೋಧನೆಗಳು ಬರುತ್ತವೆ ಆದರೆ ತಪ್ಪುಗಳನ್ನು ವಿವೇಚಿಸಿ ತಿಳಿದುಕೊಳ್ಳಲು ಮತ್ತು ಸತ್ಯವನ್ನು ವಿವರಿಸಲು ಶಿಷ್ಯೆಯು ದೇವರ ವಾಕ್ಯವನ್ನು ಕ್ರಮವಾಗಿ ತಿಳಿದುಕೊಂಡಿರಬೇಕು (ಮತ್ತಾ. 24:11–14).

ಸಿ. ವಿವೇಚನೆಯು ವೀಕ್ಷಣೆಗಿಂತಲೂ ಹೆಚ್ಚಿನದಾಗಿದೆ; ಸತ್ಯ ಮತ್ತು ಜ್ಞಾನವನ್ನು ಕೊಡುತ್ತಾ ಪವಿತ್ರಾತ್ಮನು ಕೊಡುವ ಪ್ರಕಟನೆಯೇ ವಿವೇಚನೆಯಾಗಿದೆ.

4. **ಶಿಷ್ಯೆಯರನ್ನು ಮಾಡುವಾಕೆಯು ಸಮಯವನ್ನು ತ್ಯಾಗ ಮಾಡಲು ಸಿದ್ಧಳಾಗಿರಬೇಕು (ಅ.ಕೃ 18:24–26).**

   ಎ. ಪೌಲನಿಂದ ಕಲಿತುಕೊಂಡ ನಂತರ, ಪ್ರಿಸ್ಕಿಲ್ಲಾ ಮತ್ತು ಅಕ್ವಿಲನು ಆತನ ಜೊತೆ ಸೇವಕರಾದರು. ಇದರಿಂದ ಬಹಳ ಸಮಯವು ಹಿಡಿಯುತ್ತಿತ್ತು, ಇಲ್ಲದಿದ್ದರೆ ಅವರು ಈ ಸಮಯವನ್ನು ತಮ್ಮ ಕೆಲಸದಲ್ಲಿ ಉಪಯೋಗಿಸುತ್ತಿದ್ದರು.

   ಬಿ. ಅವರು ಅಪೊಲ್ಲೋಸನನ್ನು ಸಂಧಿಸಿದಾಗ, ದೇವರ ಮಾರ್ಗವನ್ನು ಹೆಚ್ಚು ಸೂಕ್ತವಾಗಿ ಕಲಿಸುವದಕ್ಕಾಗಿ ಅವರು ತಮ್ಮ ಸಮಯವನ್ನು ಕಳೆಯಲು ಬಯಸಿದರು.

   ಸಿ. ಅವರು ಪೌಲನೊಂದಿಗೆ ಎಫೆಸಕ್ಕೆ ಹೋದಾಗ, ತಮ್ಮ ಮನೆಯಲ್ಲಿ ಸಭೆಯನ್ನು ನಡೆಸಲು ಅನುಮತಿ ನೀಡಿದರು. ಇದಕ್ಕೂ ಸಹ ಅವರು ತಮ್ಮ ಸಮಯವನ್ನು ಕೊಡಬೇಕಾಗಿತ್ತು.

   ಡಿ. ಶಿಷ್ಯೆಯರು ಶಿಷ್ಯೆಯರನ್ನು ಮಾಡಬೇಕು. ನಮ್ಮ ಪುನರ್‌ಉತ್ಪಾದನೆಯಲ್ಲಿ ಮೂರು ವಿಷಯಗಳಿರಬೇಕು: ನಾವು ಜನರನ್ನು ಕ್ರಿಸ್ತನಿಗಾಗಿ ವಿನ್ ಮಾಡುತ್ತೇವೆ, ಅವರನ್ನು ದೇವರ ವಾಕ್ಯದಲ್ಲಿ ಬೆಳೆಸುತ್ತೇವೆ, ಮತ್ತು ಇತರರನ್ನು ಶಿಷ್ಯೆಯರನ್ನಾಗಿ ಮಾಡಲು ಕಳುಹಿಸಿಕೊಡುತ್ತಾರೆ. ಇವೆಲ್ಲವುಗಳಿಗೆ ಬಹಳ ಸಮಯವು ಹಿಡಿಯುತ್ತದೆ, ಶಿಷ್ಯೆಯಾಗಿರುವಾಕೆಯು ಅದನ್ನು ಕೊಡಲು ಸಿದ್ಧರಾಗಿರಬೇಕು, ಯೇಸು ಕ್ರಿಸ್ತನಿಗಾಗಿ ತಮ್ಮ ಸಮಯವನ್ನು ತ್ಯಾಗ ಮಾಡುವವರಾಗಿರಬೇಕು.

5. **ಶಿಷ್ಯೆಯರನ್ನು ಮಾಡುವಾಕೆಯು ಶ್ರಮೆಗಳನ್ನು ತಾಳಿಕೊಳ್ಳಲು ಸಿದ್ಧರಾಗಿರಬೇಕು (ರೋಮಾ. 16:3; ಅ.ಕೃ 18:2).**

   ಎ. ಹಿಂಸೆಗಳು ಮತ್ತು ರೋಮನ್ ಚಕ್ರವರ್ತಿಯ ಕ್ರೂರವಾದ ಆಜ್ಞೆಯು ಪ್ರಿಸ್ಕಿಲ್ಲಾ ಮತ್ತು ಅಕ್ವಿಲನನ್ನು ರೋಮಾಪುರದಿಂದ ಹೊರಗೆ ಹಾಕಿದ್ದವು, ಆದರೆ ಅವರು ತಮ್ಮ ಪ್ರಭಾವವನ್ನು ಬೀರಲು ಇದರಿಂದ ಹೆಚ್ಚಿನ ಮಾರ್ಗವು ದೊರೆಯಿತು. ಅವರು ಮೂರು ಬಾರಿ ವರ್ಗಾವಣೆಯಾದರು (ರೋಮಾಪುರದಿಂದ ಕೊರಿಂಥಕ್ಕೆ, ಕೊರಿಂಥದಿಂದ ಎಫೆಸಕ್ಕೆ, ಎಫೆಸದಿಂದ ರೋಮಾಪುರಕ್ಕೆ). ಬದಲಾವಣೆಗಾಗಿ ದೇವರ ಕರೆಯುವಿಕೆಗೆ ಉತ್ತರಿಸುತ್ತಾ ಪ್ರತಿಬಾರಿಯೂ ಅವರು ವ್ಯಕ್ತಿಗಳ ಮತ್ತು ಪಟ್ಟಣಗಳ ಅಗತ್ಯತೆಗಳಿಗೆ ಸ್ಪಂದಿಸುತ್ತಿದ್ದರು.

   ಬಿ. ಪ್ರಿಸ್ಕಿಲ್ಲಾ ಮತ್ತು ಆಕೆಯ ಗಂಡನು ಶಿಷ್ಯೆಯರನ್ನು ಮಾಡುವ ಸೇವೆಯಲ್ಲಿ ತೊಡಗಿದ್ದಾಗ, ಗುಡಾರ ಮಾಡುವ ಕೆಲಸದಿಂದ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಇಂದಿಗೂ ಸಹ ನಮಗೆ ಕೆಲವು "ಗುಡಾರ ಮಾಡುವ"– ಕೆಲವು ವೃತ್ತಿ ಅಥವಾ ವ್ಯಾಪಾರದಿಂದ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾ ಸೌವಾರ್ತಿಕರಾಗಿ ಮತ್ತು ಶಿಷ್ಯೆಯರನ್ನಾಗಿ ಮಾಡುವವರಾಗಿ ಜೀವಿಸುವ ಕ್ರೈಸ್ತರು ಬೇಕಾಗಿದ್ದಾರೆ. ಆರ್ಥಿಕವಾಗಿ ಇತರರ ಸಹಾಯವಿಲ್ಲದೇನೇ ಒಬ್ಬ ಸಹೋದರಿಯು ಶಿಷ್ಯೆಯರನ್ನು ಮಾಡುವವಳಾಗಬಹುದು.

ಸಿ. ಪೌಲನ ಜೊತೆಸೇವಕರಾಗಿದ್ದ ಅವರಿಬ್ಬರು ರೋಮಾಪುರದಲ್ಲಿ ತಮ್ಮ ಸ್ವಂತ ಜೀವಿತವನ್ನು ಪಣಕ್ಕಿಟ್ಟು ಆತನ ಜೀವವನ್ನು ಕಾಪಾಡಲು ತಮ್ಮನ್ನು ಬಹಳಷ್ಟು ಅಪಾಯಕರವಾದ ಪರಿಸ್ಥಿತಿಗಳಿಗೆ ಒಪ್ಪಿಸಿಕೊಂಡಿದ್ದರು. ಪೌಲನ ಜೀವವನ್ನು ಕಾಪಾಡುವದರಿಂದ, ಅನ್ಯಜನಗಳಿಗೆ ಅಪೋಸ್ತಲನಾಗಿದ್ದವನ್ನು ಉಳಿಸಿದರು. ಆದ್ದರಿಂದ, ಪೌಲನು ಹೇಳಿದಂತೆ ಅನ್ಯಜನಗಳಾಗಿದ್ದ ಕ್ರೈಸ್ತರೆಲ್ಲರೂ ಅವರಿಗೆ ಕೃತಜ್ಞತೆಯುಳ್ಳವರಾಗಿದ್ದಾರೆ.

ಡಿ. ಶಿಷ್ಯೆಯರು ಕಷ್ಟಗಳನ್ನು ಎದುರುನೋಡುತ್ತಿರಬೇಕು–ಅವುಗಳು ಖಂಡಿತವಾಗಿಯೂ ಬರುತ್ತವೆ. ಸೇವೆಯಲ್ಲಿ ಸ್ಥಿರವಾಗಿ ನಿಲ್ಲಲು ಕಷ್ಟಗಳನ್ನು ತಾಳಿಕೊಳ್ಳಲು ಆತ್ಮೀಕ ಸಿದ್ಧತೆಯು ಬಹಳ ಅವಶ್ಯಕ.

6. **ಶಿಷ್ಯೆಯರನ್ನು ಮಾಡುವಾಕೆಯು ಸೇವೆಯಲ್ಲಿ ಇತರರೊಂದಿಗೆ ಹೊಂದಿಕೊಳ್ಳಲು ಸಿದ್ಧಳಾಗಿರಬೇಕು (ರೋಮಾ. 16:3–4).**

ಎ. ಪ್ರಿಸ್ಕಿಲ್ಲ ಮತ್ತು ಅಕ್ವಿಲ ಒಟ್ಟಾಗಿ ಸೇರಿ, ಪೌಲನೊಂದಿಗೆ, ಅಪೊಲ್ಲೋಸನೊಂದಿಗೆ ಮತ್ತು ತಿಮೊಥೆಯನೊಂದಿಗೆ ಸೇವೆ ಮಾಡಿದರು. ತಮ್ಮ ಸ್ವಂತ ಅಧಿಕಾರವನ್ನು ಅಭ್ಯಾಸಿಸುವದರಲ್ಲಿ ಅವರು ನಿಸ್ವಾರ್ಥರಾಗಿದ್ದರು. ಪ್ರಿಸ್ಕಿಲ್ಲಳು ಪುರುಷರೊಂದಿಗೆ ಅದರಲ್ಲೂ ವಿಶೇಷವಾಗಿ ತನ್ನ ಗಂಡನೊಂದಿಗೆ ಹೊಂದಿಕೊಂಡು ಸೇವೆ ಮಾಡಿದ್ದನ್ನು ಗಮನಕ್ಕೆ ತಂದುಕೊಳ್ಳಿರಿ. ಅವರ ಬಲಿಷ್ಠವಾದ ಮದುವೆ ಮತ್ತು ವ್ಯಾಪಾರದಲ್ಲಿನ್ನ ಸಹಭಾಗಿತ್ವ ಎಲ್ಲಾ ಕ್ರೈಸ್ತರಿಗೂ ಒಳ್ಳೆಯ ಉದಾಹರಣೆಯಾಗಿದೆ.

ಬಿ. ಪ್ರಿಸ್ಕಿಲ್ಲಾ ಮತ್ತು ಅಕ್ವಿಲ ಅಪೊಲ್ಲೋಸನಿಗೆ ಒಳ್ಳೆಯ ಸಲಹೆಯನ್ನು ನೀಡಿದರು, ನಂತರ ಆತನು ಯೇಸು ಕ್ರಿಸ್ತನ ಸೇವೆಯಲ್ಲಿ ಬಹಳಷ್ಟು ಯಶಸ್ಸು ಸಾಧಿಸಿದನು. ಹೊಸ ನಾಯಕಿಯರನ್ನು ಬೆಳೆಸುವ ಮತ್ತು ಅವರಿಗೆ ಉತ್ತಮ ಸಲಹೆಗಳನ್ನು ನೀಡುವ ಒಳ್ಳೆಯ ಹೃದಯ ಶಿಷ್ಯೆಯರನ್ನು ಮಾಡುವಾಕೆಯಲ್ಲಿರಬೇಕು, ಮತ್ತು ಅವರ ಯಶಸ್ಸನ್ನು ನೋಡಿ ಆಕೆಯು ಹೊಟ್ಟೆಕಿಚ್ಚುಪಡಬಾರದು.

ಸಿ. ತನ್ನ ಗಂಡನೊಂದಿಗೆ ಸೇವೆಯಲ್ಲಿ ಭಾಗಿಯಾಗಿರುವ ಅಥವಾ ಅಧಿಕಾರದಲ್ಲಿರುವ ಇತರ ಪುರುಷರೊಂದಿಗೆ ಸೇವೆಯಲ್ಲಿ ಭಾಗಿಯಾಗಿರುವ ಸ್ತ್ರೀಯ ಪಾತ್ರವು, ಅವರಿಂದ ಅಧಿಕಾರವನ್ನು ಕಿತ್ತುಕೊಳ್ಳುವದಲ್ಲಾ ಬದಲಾಗಿ ಅವರ ಸೇವೆಗೆ ಉಪಯುಕ್ತವಾದ ಕಾಣಿಕೆಯನ್ನು ಕೊಡುವದಾಗಿದೆ. ಸೇವೆಯಲ್ಲಿರುವ ಸ್ತ್ರೀಯರು ಇತರರನ್ನು ಅದರಲ್ಲೂ ವಿಶೇಷವಾಗಿ ಪುರುಷರನ್ನು ಸಾರ್ವಜನಿಕವಾಗಿ ಟೀಕಿಸಬಾರದು.

ಡಿ. ಒಬ್ಬರೊಂದಿಗೊಬ್ಬರಿಗಿರುವ ಸಹಕಾರ ಮತ್ತು ಹೊಂದಾಣಿಕೆಯು ದೇವರ ಪ್ರೀತಿಯನ್ನು ವ್ಯಕ್ತಪಡಿಸುವ ಹಾಗೂ ಸಭೆಯನ್ನು ಕ್ರಿಸ್ತನ ದೇಹವೆಂದು ಪ್ರಕಟಪಡಿಸುವ ಮಾರ್ಗವಾಗಿದೆ. ನಾವು ಜೊತೆಕೆಲಸದವರು, ದೇವರೊಂದಿಗೂ ಜೊತೆಕೆಲಸದವರು ಎಂದು ಪೌಲನು ಹೇಳಿದ್ದಾನೆ (1 ಕೊರಿ. 3:5–9).

**ಚರ್ಚಾ ಪ್ರಶ್ನೆಗಳು**

1. ಶಿಷ್ಯೆಯರನ್ನು ಮಾಡುವಾಕೆಯು ಅತಿಥಿ ಸತ್ಕಾರವನ್ನು ಅಭ್ಯಾಸಿಸುತ್ತಾಳೆ. ಒಂದುವೇಳೆ ಸುಂದರವಾದ ಮನೆ ಅಥವಾ ಹೆಚ್ಚು ಹಣ ನಿಮ್ಮಲ್ಲಿಲ್ಲದಿದ್ದರೂ ಸತ್ಕಾರ ಮಾಡುವ ವಿಧಾನಗಳನ್ನು ನೀವು ಹೇಗೆ ಕಂಡುಕೊಳ್ಳುತ್ತೀರ?

2. ಮಹಾಆಜ್ಞೆಯನ್ನು ನೆರವೇರಿಸುವ ಸಲುವಾಗಿ ಶಿಷ್ಯೆಯರನ್ನು ಮಾಡುವಾಕೆಯು ತನ್ನ ಸಮಯವನ್ನು ಮೀಸಲಿಡಬೇಕು. ಶಿಷ್ಯೆಯರನ್ನು ಮಾಡುವ ಕಾರ್ಯಕ್ಕಾಗಿ ಹೆಚ್ಚು ಸಮಯವನ್ನು ಮೀಸಲಿಡಲು ಯಾವ ಕಾರ್ಯಗಳನ್ನು ನೀವು ವಿಭಿನ್ನವಾಗಿ ಮಾಡುತ್ತೀರ?

**ಪ್ರಾರ್ಥನೆ**

*ಕರ್ತನೇ, ನಾನು ಒಳ್ಳೆಯ ಶಿಷ್ಯೆಯರನ್ನು ಮಾಡುವಾಕೆಯಾಗಿರಲು ನನಗೆ ಸಹಾಯ ಮಾಡು! ನಿನ್ನ ವಾಕ್ಯಗಳನ್ನು ಪ್ರೀತಿಸಲು, ಇತರರೊಂದಿಗೆ ಒಳ್ಳೆ ಸಂಬಂಧವನ್ನು ಬೆಳೆಸಿಕೊಳ್ಳಲು, ಮತ್ತು ಹೊಸ ನಾಯಕಿಯರ ಬೆಳವಣಿಗೆಗಾಗಿ ಸೇವೆಯಲ್ಲಿ ಅವಶ್ಯಕವಾದ ಸಮಯವನ್ನು ಕಳೆಯುವ ತ್ಯಾಗವನ್ನು ಮಾಡಲು ನನಗೆ ಸಹಾಯಮಾಡು.*

# ನೋಟ್ಸ್

# 11 ವಿನ್ ಮತ್ತು ವಿ–ನ್ನರ್ಸ್

**ಕೀ ವಚನ: 2 ತಿಮೊಥೆ 2:2**

"ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು."

**ಪರಿಚಯ ಮತ್ತು ದರ್ಶನ**

1. **ವಿನ್ 'ಸ್ತ್ರೀಯರ ಪರಿಣಾಮಕಾರಿ ರಚನೆಯಾಗಿದೆ.'**

   ಎ. ಇಂಟರ್‌ನ್ಯಾಷನಲ್ ಡಿಸೈಪೈಲ್‌ಶಿಪ್ ಅಡ್ವಾನ್ಸ್‌ಮೆಂಟ್ (ಎಐಡಿಎ) ಸಹಯೋಗದಲ್ಲಿ ಸ್ತ್ರೀಯರ ಹೊಸ ರಚನೆಯನ್ನು ಪ್ರಾರಂಭಿಸಿದೆ: ವಿನ್

   ಬಿ. ಶಿಷ್ಯತ್ವದ ಉದ್ದೇಶಕ್ಕಾಗಿ ಪ್ರತಿವಾರ ಒಟ್ಟಾಗಿ ಸೇರಿ ಬರುವಂತೆ ಕ್ರೈಸ್ತೀಯ ಸ್ತ್ರೀಯರನ್ನು ಪ್ರೇರೇಪಿಸುವದು ಈ ಕಾರ್ಯಚರಣೆಯ ಉದ್ದೇಶವಾಗಿದೆ.

   ಸಿ. ವಿನ್ ಮಾರ್ಗದರ್ಶನಗಳ ಮೂಲಕ ಇತರ ಸ್ತ್ರೀಯರಿಗೆ ಸಲಹೆ ಕೊಡುವ ಕಾರ್ಯದಲ್ಲಿ ಭಾಗಿಯಾಗುವ ಪ್ರತಿಯೊಬ್ಬ ಸ್ತ್ರೀಯನ್ನು "ವಿ–ನ್ನರ್" ಎಂದು ಕರೆಯಲಾಗುತ್ತದೆ.

2. **ದರ್ಶನದ ಪ್ರಸ್ತಾವನೆ**

   *ವಿನ್ ಸ್ತ್ರೀಯರ ಭವಿಷ್ಯವನ್ನು ಸತ್ಯವೇದದನುಸಾರ ಇತ್ಯರ್ಥಿಸುತ್ತದೆ, ಆಳವಾದ ಶಿಷ್ಯತ್ವದ ಹೆಬ್ಬಯಕೆಯನ್ನು ಹುಟ್ಟಿಸುತ್ತದೆ, ಇತರ ಸ್ತ್ರೀಯರೊಂದಿಗೆ ಕೂಡಿ, ಅವರಲ್ಲಿ ಪ್ರಬಲವಾದ ಆತ್ಮೀಕ ಚೇತನವನ್ನು ರೂಪಿಸುವದರ ಮೂಲಕ ಶಿಷ್ಯೆಯರನ್ನು ರೂಪಿಸುವವರನ್ನಾಗಿ ಮಾಡುವಂತೆ ಬಲಗೊಳಿಸುತ್ತದೆ.*

3. **ಸೇವಾ ಪ್ರಸ್ತಾವನೆ**

   ಎ. ವಿನ್ ಶಿಖರದಲ್ಲಿರುವ ಆಯ್ದ ಸ್ತ್ರೀಯರು ಯೇಸು ಕ್ರಿಸ್ತನ ನಿಜವಾದ ಶಿಷ್ಯೆಯರಾಗಿರಲು ತಮ್ಮ ಸಮರ್ಪಣೆಯನ್ನು ಸ್ಥಾಪಿಸಿಕೊಳ್ಳಲು/ ಪುನರ್‌ಸ್ಥಾಪಿಸಿಕೊಳ್ಳಲು ವಿನ್ ಪ್ರಭಾವ ಬೀರುತ್ತದೆ. ಮತ್ತು ಇದರ ನಂತರ,

ಬಿ. ಇತರ ಸ್ತ್ರೀಯರನ್ನು ಪ್ರಬಲವಾದ ಸತ್ಯವೇದದನುಸಾರವಾದ ಆತ್ಮೀಕ ರಚನೆಯ* ಮೂಲಕ ಯೇಸು ಕ್ರಿಸ್ತನ ಕಡೆಗೆ ನಡೆಸಲು ಹಾಗೂ ಸಮರ್ಪಣೆಯುಳ್ಳ ಶಿಷ್ಯತ್ವಕ್ಕೆ ಬೇಕಾದ ಸಲಹೆಗಳನ್ನು ಕೊಡುವವರಾಗುವಂತೆ ಮಾಡಲು ಸಾಹಿತ್ಯ ಮತ್ತು ಪ್ರಾಯೋಗಿಕವಾದ ಯೋಜನೆಗಳ ಮೂಲಕ ಅವರನ್ನು ಸನ್ನಧರನ್ನಾಗಿಸಿ ಬೆಳೆಸಲಾಗುತ್ತದೆ.

**4. ಪಾಠ್ಯಕ್ರಮ**

ವಿನ ಡಿಸೈಪಲ್ (ಶಿಷ್ಯತ್ವ) ಮ್ಯಾನುವಲ್ (ಡಿಎಮ್), ಮಾರ್ಗದರ್ಶಕ ಪುಸ್ತಕವಾಗಿದ್ದು ಶಿಷ್ಯತ್ವ, ಶಿಷ್ಯೆಯರನ್ನು ಮಾಡುವದು, ಸುವಾರ್ತೀಕರಣ, ತಂಡಗಳನ್ನು ಕಟ್ಟುವದು ಮತ್ತು ಸಲಹಾ ಸಾಮರ್ಥ್ಯಗಳ ಕುರಿತಾದ ಪಾಠಗಳನ್ನು ಒಳಗೊಂಡಿದೆ, ಇದು ವಿನ್ ಶಿಖರದಲ್ಲಿರುವವ ಪಠ್ಯಕ್ರಮವಾಗಿದೆ; ಹಾಗೆಯೇ ತಮ್ಮ ತಂಡಗಳಿಗೆ ಸಲಹೆಗಳನ್ನು ಕೊಡಲು ವಿ–ನ್ನರ್ಸ್ ಸಹ ಉಪಯೋಗಿಸಬಹುದಾಗಿದೆ.

**5. ಯೋಜನೆ**

ಎ. ಕಾರ್ಯಚರಣೆಯಲ್ಲಿ ನಾಯಕತ್ವಕ್ಕಾಗಿ ಶಿಫಾರಸ್ಸು ಮಾಡಲ್ಪಟ್ಟಿರುವ ಸ್ತ್ರೀಯರನ್ನು ತರಬೇತಿಗೊಳಿಸುವ ಸಲುವಾಗಿ ವಿನ್ ಶಿಖರಗಳನ್ನು ಪ್ರಾಂತೀಯ ಹಂತಗಳಲ್ಲಿ ನಡೆಸಲಾಗುತ್ತದೆ.

ಬಿ. ವಿನ್ ಶಿಖರಗಳು ವಿನ್ ಡಿಸೈಪಲ್‌ಶಿಪ್ ಮ್ಯಾನುವಲ್ ಸಹಾಯದಿಂದ ಅದರಲ್ಲಿ ಪಾಲ್ಗೊಳ್ಳುವವರ ವೈಯಕ್ತಿಕ ಶಿಷ್ಯತ್ವದ ಮೇಳೆ ಪ್ರಭಾವ ಮತ್ತು ಪರಿಣಾಮವನ್ನು ಬೀರುತ್ತಾರೆ.

ಸಿ. ತಮ್ಮ ಸಭೆಯಲ್ಲಿರುವ ಸ್ತ್ರೀಯರು ಮತ್ತು ಸಮದಾಯದ ಮೇಲೆ ಶಿಷ್ಯೆಯರನ್ನು ಮಾಡುವ ದರ್ಶನ ಮೂಲಕ ಪ್ರಭಾವವನ್ನು ಬೀರುವಂತೆ ವಿನ್ ಶಿಖರಗಳು ಪ್ರೋತ್ಸಾಹಪಡಿಸುತ್ತದೆ. ವಿನ್ನರ್ಸ್ 3x3 ಅಭಿಯಾನದಲ್ಲಿ ಪಾಲುತೆಗೆದುಕೊಳ್ಳುವ ಈ ಸ್ತ್ರೀಯರನ್ನು ಮೊದಲನೆಯ ತಲೆಮಾರಿನ ವಿನ್ನರ್ಸ್ ಎಂದು ಕರೆಯಲಾಗುತ್ತದೆ.

***ಆತ್ಮೀಕ ರಚನೆಯು** ಆತ್ಮೀಕ ಶಿಸ್ತುಗಳಾದ (ಅನುದಿನ ದೇವರ ವಾಕ್ಯದ ಧ್ಯಾನ, ಪ್ರಾರ್ಥನೆ, ಉಪವಾಸ, ಆರಾಧನೆ, ಇತ್ಯಾದಿ.) ಅಭ್ಯಾಸಿಸುತ್ತಾ ಸಮರ್ಪಣೆಯುಳ್ಳ ಶಿಷ್ಯತ್ವಕ್ಕೆ ವಿಧೇಯರಾಗಲು ಬಲಪಡಿಸುವಂತೆ ಪವಿತ್ರಾತ್ಮನಿಗೆ ಅವಕಾಶಕೊಡುವಿಕೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುವ ಶಿಷ್ಯನು ಅಥವಾ ಶಿಷ್ಯೆಯು ಹಾದುಹೋಗುವ ವಿಧಾನವಾಗಿದೆ

**6. ವಿನ್ನರ್ಸ್ 3x3 ಅಭಿಯಾನ–ವಿನ ಸಲಹೆಗಳನ್ನು ಕೊಡುವ ಸರಪಳಿ**

ಎ. ಪ್ರತಿಯೊಬ್ಬ ಮೊದಲನೆಯ ತಲೆಮಾರಿನ ವಿನ್ನರ್ ಮೂವರು ಸ್ತ್ರೀಯರುಳ್ಳ ತಂಡದ ಸಲಹೆಗಾರ್ತಿಯಾಗಿರುವವರು ಮತ್ತು ಅವರಲ್ಲಿಯೂ ಇದೇ ದರ್ಶನವನ್ನು ಬಿತ್ತುವರು (ಅಂದರೆ ಇನ್ನೂ ಮೂವರನ್ನು ಯೇಸು ಕ್ರಿಸ್ತನಿಗಾಗಿ ಗೆಲ್ಲುವದು ಮತ್ತು ಅವರಿಗೆ ಸಲಹೆಗಳನ್ನು ಕೊಡುವದು). ಈ ಮೂವರನ್ನು ಎರಡನೇ ತಲೆಮಾರಿನ ವಿನ್ನರ್ಸ್ ಎಂದು ಕರೆಯಲಾಗುವದು.

ಬಿ. ಎರಡನೆಯ ತಲೆಮಾರಿನ ಪ್ರತಿಯೊಬ್ಬರು ಬೇರೆ ಮೂವರಿಗೆ ಸಲಹೆಗಳನ್ನು ಕೊಡುತಾ ಅವರಲ್ಲಿಯೇ ಇದೇ ದರ್ಶನವನ್ನು ಬಿತ್ತುವರು (ಅಂದರೆ ಇನ್ನೂ ಮೂವರನ್ನು ಯೇಸು ಕ್ರಿಸ್ತನಿಗಾಗಿ ಗೆಲ್ಲುವದು ಮತ್ತು ಅವರಿಗೆ ಸಲಹೆಗಳನ್ನು ಕೊಡುವದು). ಈ ಮೂವರನ್ನು ಮೂರನೇ ತಲೆಮಾರಿನ ವಿನ್ನರ್ಸ್ ಎಂದು ಕರೆಯಲಾಗುವದು.

ಸಿ. ತಮ್ಮ ಸಭೆಗಳಿಗೆ ಮತ್ತು ಅಂತಿಮವಾಗಿ ದೇವರ ರಾಜ್ಯಕ್ಕೆ ಅಪಾರವಾದ ಬೆಳವಣಿಗೆಯಾಗಲು ಎಲ್ಲಾ ವಿನ್ನರ್ಸ್‌ಗಳ ಮೂಲಕ ಸಲಹೆಕೊಡುವ ಸರಪಳಿಯು ಮುಂದುವರೆಯುತ್ತಿರಬೇಕು.

**7. ವಿನ – ಎಡಬಿಡದೆ ಸಾಗುವ ಸೇವೆ**

ಎ, ಪ್ರತಿಯೊಬ್ಬ ವಿನ್ನರ್ಸ್ ತಮ್ಮ ರಾಜ್ಯದ ವಿನ್ ರಾಜ್ಯ ಮೇಲ್ವಿಚಾರಕರ ಮೇಲ್ವಿಚಾರಣೆಯಲ್ಲಿ ರಚನೆಗಳನ್ನು ಪ್ರಾರಂಭಿಸುವರು.

ಬಿ. ಎಲ್ಲಾ ರಾಜ್ಯಗಳ ವಿನ್ ರಾಜ್ಯ ಮೇಲ್ವಿಚಾರಕರು ಎಐಡಿಎ (AIDA) ವಿನ್ ನಿರ್ದೇಶಕರ ನಾಯಕತ್ವದಲ್ಲಿ ರಾಷ್ಟ್ರ ಮಟ್ಟದ ವಿನ್ ಅಸೋಸಿಯೇಷನ್ ರಚಿಸಲು ಕಾರ್ಯನಿರ್ವಹಿಸುವರು.

ಸಿ. ಶಿಷ್ಯತ್ವದ ಕುರಿತು ಸತ್ಯವೇದದನುಸಾರವಾದ ಹೊಸ ಧ್ಯೇಯಗಳೊಂದಿಗೆ ಕ್ರೈಸ್ತೀಯ ಸ್ತ್ರೀಯರಿಗೆ ಹೆಚ್ಚಿನ ತರಭೇತಿಯನ್ನು ಕಾರ್ಯಕ್ರಮಗಳನ್ನು ಆಯೋಜಿಸಲು ವಿನ್ ಎಐಡಿಎ (AIDA)ಯ ರಾಜ್ಯ ಮತ್ತು ರಾಷ್ಟ್ರೀಯ ವೇದಿಕೆಯಾಗಿರುತ್ತದೆ.

ಡಿ. ದೇವರ ಕೃಪೆ ಮತ್ತು ಮಾರ್ಗದರ್ಶನದ ಮೂಲಕ ಎಐಡಿಎ (AIDA) ಭಾರತದಿಂದ ಹೊರಗೆ ಹೊರದೇಶಗಳಲ್ಲಿಯೂ ವಿನ್ ವಿಸ್ತರಿಸುವ ಕಾರ್ಯವನ್ನು ಎಐಡಿಎ ಮಾಡಲಿದೆ.

**ಮುಕ್ತಾಯ**

*"ಪ್ರೀತಿಯ ವಿನ್ನರ್ಸ್, ನಮ್ಮ ಕರ್ತನ ಮಹಾಆಜ್ಞೆಯಾದ; 'ಹೋಗಿರಿ ಶಿಷ್ಯೆಯರನ್ನು ಮಾಡಿರಿ..... ಕಾಪಾಡಿಕೊಳ್ಳಲು ಅವರಿಗೆ ಬೋಧಿಸಿರಿ' (ಮತ್ತಾ. 28:19) ನೆರವೇರಿಸಲು ಸಭೆಯಲ್ಲಿ ಸ್ತ್ರೀಯರು ಪ್ರಾಯೋಗಿಕವಾಗಿ ಕಾರ್ಯಕರ್ತೆಯರಾಗುವದನ್ನು ನೋಡಲು ನಮ್ಮ ದರ್ಶನದಲ್ಲಿ ಪಾಲುತೆಗೆದುಕೊಳ್ಳುವಂತೆ ನಾವು ನಿಮ್ಮನ್ನು ಸ್ವಾಗತಿಸುತ್ತೇವೆ. ನೀವು ಪ್ರಾರ್ಥನಾಪೂರ್ವಕವಾಗಿ ಸಿದ್ಧರಾಗಿ ಆತನ ಕರೆಗೆ ನಿಮ್ಮನ್ನೇ ಒಪ್ಪಿಸಿಕೊಡುವಾಗ, ನಾವೂ ನಿಮಗಾಗಿ ಖಂಡಿತ ಪ್ರಾರ್ಥಿಸುತ್ತೇವೆ. ದೇವರ ಕೃಪೆಯಿಂದ, ನಾವು ಮುಂದುವರೆಯೋಣ."*

– *ವಿನ್ ವಿಷನರೀಸ್*

**ಚರ್ಚಾ ಪ್ರಶ್ನೆಗಳು**

1. "ಆತ್ಮೀಕ ರಚನೆ" ಎಂದರೆ ಏನು?
2. ಆತ್ಮೀಕ ರಚನೆಯಲ್ಲಿ ಸದ್ಯಕ್ಕೆ ನೀವು ಹೇಗೆ ನಿಮ್ಮನ್ನು ತೊಡಗಿಸಿಕೊಂಡಿದ್ದೀರ ಮತ್ತು ವಿನ್ ನಲ್ಲಿ ನಿಮ್ಮ ಭಾಗವಹಿಸುವಿಕೆಯು ಹೇಗೆ ವಿಭಿನ್ನವಾಗಿರುವದು?
3. "ವಿನ್ನರ್ಸ್ 3x3" ಎಂದರೆ ಏನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.

**ಪ್ರಾರ್ಥನೆ**

ಕರ್ತನೇ ನನ್ನ ಯಶಸ್ವಿಯಾದ ವಿನ್ನರ್ ಆಗಿ ಮಾಡು. ವಿನ್ ಡಿಸೈಪಲ್‌ಶಿಪ್ ಮ್ಯಾನುವಲ್ ಸಹಾಯದಿಂದ ನಿನ್ನ ವಾಕ್ಯಗಳನ್ನು ಕಲಿತುಕೊಂಡಿರುವ ಮೇರೆಗೆ ನನ್ನನ್ನು ನಿಜವಾದ ಶಿಷ್ಯೆಯನ್ನಾಗಿ ಮಾಡು. ಇತರರಿಗೆ ಕಲಿಸಲು ಶಕ್ತರಾಗುವಂತೆ ನಂಬಿಗಸ್ತರಾದ ಸ್ತ್ರೀಯರಿಗೆ ಸರಿಯಾದ ಕಲಿಸುವಂತೆ ನನಗೆ ಸಹಾಯಮಾಡು. ಆಮೆನ್.



# 12 ವಿನ್ ತಂಡವನ್ನು ಮುನ್ನಡೆಸುವದು

**ಕೀ ವಚನ: 1 ಕೊರಿಂಥ 2:13**

"ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ."

**ಪರಿಚಯ**

ಪಾಠ 11 ವಿನ್ ದರ್ಶನವನ್ನು ಹೊರಹಾಕುತ್ತದೆ–ಸ್ತ್ರೀಯರ ಪರಿಣಾಮಕಾರಿ ರಚನೆ. ಈ ಪಾಠವು ವಾರದ ವಿನ ತಂಡವನ್ನು ಮುನ್ನಡೆಸುವದು ಹೇಗೆ ಎಂಬದನ್ನು ಸ್ಪಷ್ಟವಾಗಿ ಕಲಿಸುತ್ತದೆ.

**ವಿನ್ ತಂಡವನ್ನು ಮುನ್ನಡೆಸುವದು ಹೇಗೆ**

1. **ಪ್ರತಿವಾರ ಸಂಧಿಸಲು ಸ್ಥಳ ಮತ್ತು ನಿರ್ದಿಷ್ಟವಾದ ಸಮಯವನ್ನು ಆರಿಸಿಕೊಳ್ಳಿರಿ.**

   ಎ. ಸಾಧ್ಯವಾದರೆ, ನಿಮ್ಮ ಮನೆಯಲ್ಲಿಯೇ ಸಂಧಿಸಿರಿ; ಶಿಷ್ಯೆಯರನ್ನು ಮಾಡಲು ಅತಿಥಿ ಸತ್ಕಾರದ ಮಾರ್ಗವನ್ನು ಪ್ರಿಸ್ಕಿಲ್ಲಳು ಬಳಸಿಕೊಂಡಳು ಎಂಬದನ್ನು ನೆನಪಿಸಿಕೊಳ್ಳಿರಿ (ಅ.ಕೃ 18:26).

   ಬಿ. ತುರ್ತು ಪರಿಸ್ಥಿಯನ್ನು ಬಿಟ್ಟರೆ ಕೂಟವನ್ನು ತಪ್ಪಿಸಬೇಡಿರಿ. ಕೂಟದ ಸಮಯದಲ್ಲಿ ಬೇರೆ ಚಟುವಟಿಕೆಗಳನ್ನು ಇಟ್ಟುಕೊಳ್ಳಬಾರದು ಮತ್ತು ಆ ಸಮಯವನ್ನು ಬೆಲೆಯುಳ್ಳದ್ದಾಗಿ ಕಾಣಬೇಕೆಂದು ನಿಮ್ಮ ಗುಂಪಿನವರಿಗೆ ಹೇಳಿರಿ (ಎಫೆ. 5:16). ನಂಬಿಗಸ್ಥಿಕೆಗೆ ಮಾದರಿಯಾಗಿರ್ರಿ.

   ಸಿ. ಒಂದು ಸಮಯ ಮತ್ತು ಸ್ಥಳವನ್ನು ಬದಲಾಯಿಸಬೇಕಿದ್ದರೆ ಸಾಧ್ಯವಾದರೆ ಎಲ್ಲರಿಗೂ ಮೊದಲೇ ತಿಳಿಯಪಡಿಸಿರಿ.

ಡಿ. ಎಲ್ಲರಿಗೂ ಅನುಕೂಲವಾದ ವ್ಯವಸ್ಥೆಯನ್ನು ಕಲ್ಪಿಸಿರಿ, ಶಾರೀರಿಕ ತೊಂದರೆಗಳು ಎದುರಾಗದಂತೆ ನೋಡಿಕೊಳ್ಳಿರಿ; ಪ್ರತಿಯೊಬ್ಬರು ಸುಲಭವಾಗಿ ಬರೆತುಕೊಳ್ಳಲು ಸಹಾಯವಾಗುವ ರೀತಿಯಲ್ಲಿ ನಡೆದುಕೊಳ್ಳಿರಿ.

ಇ. ಬೇರೆ ಅಡಚಣೆಗಳನ್ನು ತಡೆಗಟ್ಟಲು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಿರಿ. ಕೂಟವು ನಡೆಯುವ ಸಮಯದಲ್ಲಿ ಮಕ್ಕಳು ಮತ್ತು ಕುಟುಂಬದ ಇತರ ಸದಸ್ಯರಿಗೆ ಅವಶ್ಯವಾದದ್ದನ್ನು ಮೊದಲೇ ಪೂರೈಸಿರಿ.

2. **ಸಿದ್ಧರಾಗಿರ್ರಿ.**

ಎ. ನೀವು ಕಲಿಸಬೇಕಾಗಿರುವ ಶಿಷ್ಯತ್ವದ ಮ್ಯಾನುವಲ್‌ನಲ್ಲಿರುವ ಪಾಠವನ್ನು ಮುಂಚಿತವಾಗಿಯೇ ಓದಿಕೊಂಡಿರ್ರಿ (2 ತಿಮೊ. 2:15).

ಬಿ. ಪ್ರಾಮುಖ್ಯವಾದ ವಚನಗಳಿಗೆ ಗುರುತುಹಾಕಿರಿ ಇದರಿಂದ ಸುಲಭವಾಗಿ ತೆಗೆಯಲು ಸಾಧ್ಯವಾಗುತ್ತದೆ.

ಸಿ. ಉತ್ತಮವಾಗಿ ಕಲಿಸಲು ಬೇಕಾಗುವ ನೋಟ್ಸ್‌ಗಳನ್ನು ಸಿದ್ಧಮಾಡಿಕೊಳ್ಳಿರಿ.

ಡಿ. ವಿನ್ ತಂಡವು ಸೇರಿ ಬರುವದಕ್ಕೂ ಮೊದಲೇ ನಿಮ್ಮ ಸಾಮಗ್ರಿಗಳನ್ನು ಪರಿಶೀಲಿಸಲು ಸಮಯವನ್ನು ಹೊಂದಿಸಿಕೊಳ್ಳಿರಿ.

ಇ. ಒಳ್ಳೆಯ ಮಾದರಿಯಾಗಿರ್ರಿ; ನೀವು ಸಿದ್ಧರಾಗಿರುವಾಗ, ನೀವು ಸಹ ಕೂಟಕ್ಕೂ ಮೊದಲೇ ಸಿದ್ಧರಾಗಿರಬೇಕು ಎಂಬದನ್ನು ನಿಮ್ಮಿಂದ ಕಲಿತುಕೊಳ್ಳುವವರಿಗೆ ಮನವರಿಕೆ ಮಾಡಿಕೊಳ್ಳುತ್ತಾರೆ (2 ತಿಮೊ. 4:2).

3. **ಕೂಟವನ್ನು ಪ್ರಾರಂಭಿಸುವಾಗ ಮತ್ತು ಮುಗಿಸುವಾಗ ಪ್ರಾರ್ಥಿಸಿರಿ.**

ಎ. ಇದರಿಂದ ಕೂಟಕ್ಕೆ ಶುಭಾರಂಭ ದೊರೆಯುತ್ತದೆ ಮತ್ತು ಕಲಿತುಕೊಳ್ಳುವವರು ಯೇಸು ಕ್ರಿಸ್ತನ ಮೇಲೆ ಗಮನಹರಿಸಲು ಸಹಾಯವಾಗುತ್ತದೆ (ಇಬ್ರಿ. 12:2).

ಬಿ. ಇದು ಪ್ರಾರ್ಥನಾ ಕೂಟವಲ್ಲ ಎಂಬದನ್ನು ಮರೆಯಬೇಡಿರಿ. ನಿಮ್ಮ ವಿನ್ ತಂಡದಲ್ಲಿ ಪಾಠವನ್ನು ಕಲಿಯಲು ಆಶೀರ್ವದಿಸು ಎಂದು ಪ್ರಾರ್ಥಿಸಬೇಕು ಮತ್ತು ಅದರ ಮೂಲಕ ಸಮರ್ಪಣೆಯುಳ್ಳ ಶಿಷ್ಯತ್ವದ ಬೆಳವಣಿಗೆಯು ಸಾಧ್ಯ. ಶಿಷ್ಯತ್ವದಲ್ಲಿ ಬೆಳವಣಿಗೆ ಕಾಣಲು ಅಡ್ಡಿಪಡಿಸಲು ಕಾರ್ಯಗಳ ನಿರ್ಗಮನಕ್ಕಾಗಿ ಮತ್ತು ಪ್ರತಿಯೊಬ್ಬ ಸ್ತ್ರೀಯು ತನ್ನ ಕ್ರೈಸ್ತೀಯ ಜೀವಿತದಲ್ಲಿ ಪರಿಣಾಮಕಾರಿಯಾಗಿರಲು ಪ್ರಾರ್ಥಿಸಿರಿ.

ಸಿ. ಒಂದುವೇಳೆ ಯಾರಿಗಾದರೂ ಪ್ರಾಮುಖ್ಯವಾದ ಪ್ರಾರ್ಥನಾ ಮನವಿಯಿದ್ದರೆ, ಕೂಟದ ನಂತರ ಸಮಯ ತೆಗೆದುಕೊಂಡು ಅವರೊಂದಿಗೆ ಪ್ರಾರ್ಥಿಸಿರಿ.

ಡಿ. ಮುಕ್ತಾಯದ ಪ್ರಾರ್ಥನೆಯ ಸಮಯದಲ್ಲಿ ಸ್ತ್ರೀಯರನ್ನು ಮರೆಯದೆ ಆಶೀರ್ವದಿಸಿರಿ ಯಾಕಂದರೆ ಅವರು ಹೋಗಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುವಾಗ ಮತ್ತು ಶಿಷ್ಯೆಯರನ್ನು ಮಾಡುವಾಗ ದೇವರನ್ನು ಫಲ ಕೇಳುವವರಾಗಿರುತ್ತಾರೆ.

ಇ. ನಿಮ್ಮ ವಿನ್ ತಂಡದಲ್ಲಿರುವವರಿಗಾಗಿ ಮತ್ತು ಅವರ ವಿಶೇಷವಾದ ಬೇಡಿಕೆಗಳು ಹಾಗೂ ಅವಶ್ಯಕತೆಗಳ ಪೂರೈಕೆಗಾಗಿ ತಪ್ಪದೇ ವಾರವಿಡೀ ಪ್ರಾರ್ಥಿಸಿರಿ (ಎಫೆ. 6:18). ಹಾಗೆಯೇ ನಿಮಗಾಗಿಯೂ ಮತ್ತು ಒಬ್ಬರಿಗಾಗೊಬ್ಬರು ಪ್ರಾರ್ಥಿಸುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ.

4. **ಹಿಂದಿನ ಪಾಠದ ಪರಿಶೀಲನೆಯೊಂದಿಗೆ ಪ್ರತಿಯೊಂದು ಪಾಠವನ್ನು ಪ್ರಾರಂಭಿಸಿರಿ.**

ಎ. ಮತ್ತೆಮತ್ತೆ ಓದುವದು ಕಲಿತುಕೊಳ್ಳಲು ಹೆಚ್ಚು ಸಹಕಾರಿಯಾಗಿರುತ್ತದೆ.

ಬಿ. ಕಳೆದ ವಾರ ತಾವು ಕಲಿತುಕೊಂಡ ವಿಷಯ ಯಾವುದೇ ಎಂದು ಸ್ತ್ರೀಯರು ಹೇಳವರಾ ಪರೀಕ್ಷಿಸಿರಿ; ಒಂದುವೇಳೆ ಇಲ್ಲವಾದರೆ ನೀವು ನಿಮ್ಮನ್ನು ಸರಿಪಡಿಸಿಕೊಳ್ಳಬೇಕು/ನಿಮ್ಮ ಕಲಿಸುವಿಕೆಯ ವಿಧಾನವನ್ನು ಬದಲಾಯಿಸಿಕೊಳ್ಳಬೇಕು.

ಸಿ. ಕಲಿತುಕೊಳ್ಳುವವರು ತಾವು ಕಲಿತುಕೊಂಡಿರುವ ವಿಷಯಗಳನ್ನು ಹೇಗೆ ಅಭ್ಯಾಸ ಮಾಡುತ್ತಿದ್ದಾರೆ ಎಂಬದನ್ನು ತಂಡದಲ್ಲಿ ಹಂಚಿಕೊಳ್ಳುವಂತೆ ಹೇಳಿರಿ. ವಿಜಯಗಳನ್ನು ಆಚರಿಸಿರಿ; ಪ್ರೇರಣೆಗಳಿಗೆ ಒತ್ತುಕೊಡಿರಿ (ರೋಮಾ. 12:15).

5. **ನೀವು ಬೋಧಕಿಯಲ್ಲ ಬದಲಾಗಿ ಅಧ್ಯಾಪಕಿ ಎಂಬದನ್ನು ಮರೆಯಬೇಡಿರಿ.**

ಎ. ನೀವು ವಿನ್ ಡಿಸೈಪಲ್‌ಶಿಪ್ ಮ್ಯಾನುವಲ್ ನಿಂದ ಕಲಿಸಬೇಕು ಆದರೆ ಅದು ಯಾವುದೇ ಅಡಚಣೆಗಳಿಲ್ಲದ ಬೋಧನೆಯಾಗಿರಬೇಕು.

ಬಿ. ಪ್ರಶ್ನೆಗಳನ್ನು ಕೇಳಿರಿ ಮತ್ತು ಕಲಿತುಕೊಳ್ಳುವವರು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಸಮಯ ಕೊಡಿರಿ. ಅವರ ಅಭಿಪ್ರಾಯ ಮತ್ತು ಆಲೋಚನೆಗಳನ್ನು ಕೇಳಿರಿ.

ಸಿ. ತಿದ್ದಬೇಕಾದ ವಿಷಯಗಳನ್ನು ಒಂದುವೇಳೆ ಅವರು ಹಂಚಿಕೊಂಡರು ಅವುಗಳನ್ನು ಗೌರವಿಸಿರಿ (ಇಬ್ರಿ. 5:2).

ಡಿ. ಟೀಕೆ ಮಾಡಬೇಡಿರಿ ಅಥವಾ ಕಲಿತುಕೊಳ್ಳುವವರು ಬೇಸರ ಮಾಡಿಕೊಳ್ಳುವಂತೆ ನಡೆದುಕೊಳ್ಳಬೇಡಿರಿ (ಫಿಲಿ. 2:3).

6. **ವಿಷಯದಲ್ಲಿಯೇ ಇರ್ರಿ; ಬೇರೆ ಕಡೆಗೆ ಹೋಗಬೇಡಿರಿ.**

ಎ. ಭಾಗವಹಿಸುವಿಕೆಯನ್ನು ಪ್ರೋತ್ಸಾಹಪಡಿಸುವಾಗ, ಪಾಠಕ್ಕೆ ಸಂಬಂಧಿಸದ ವಿಷಯಗಳ ಚರ್ಚೆಯನ್ನು ಪ್ರಾರಂಭಿಸುವದು ಸುಲಭವಾಗಿರುತ್ತದೆ.

ಬಿ. ಒಂದುವೇಳೆ ಇದು ಸಾಧ್ಯವಾದರೆ, ತಂಡವನ್ನು ಮತ್ತೆ ಪಾಠದ ಕಡೆಗೆ ನಡೆಸಿರಿ–ವಿನ್ ಡಿಸೈಪಲ್‌ಶಿಪ್ ಮ್ಯಾನುವಲ್‌ನಲ್ಲಿರುವ ಪಾಠಗಳ ಮೇಲೆ ಗಮನಹರಿಸಬೇಕು ಎಂಬದನ್ನು ಮರೆಯಬೇಡಿರಿ.

ಸಿ. ಒಂದುವೇಳೆ ಪ್ರಾಮುಖ್ಯವಾದ ವಿಷಯುವನ್ನೇನಾದರೂ ಚರ್ಚಿಸುತ್ತಿರುವದಾದರೆ, ಪಾಠವು ಮುಗಿದ ನಂತರ ಅದಕ್ಕೆ ಸಂಬಂಧಪಟ್ಟ ವ್ಯಕ್ತಿಯೊಂದಿಗೆ ಮಾತನಾಡಲು ಪ್ರಯತ್ನಿಸಿರಿ.

ಡಿ. ಸಂಭಾಷಣೆಯು ಪೂರ್ತಿಯಾಗಿ ಒಬ್ಬ ವ್ಯಕ್ತಿಯ ಹಿಡಿತಕ್ಕೆ ಹೋಗದಂತೆ ಎಚ್ಚರವಹಿಸಿರಿ. ಪ್ರತಿಯೊಬ್ಬರಿಗೂ ಭಾಗವಹಿಸುವ ಅವಕಾಶ ದೊರಬೇಕು ಆದ್ದರಿಂದ ಅಂಥ ಸನ್ನಿವೇಶ ಎದುರಾಗುವಾಗ ವಿನಯವಾಗಿ ಅಡಚಣೆಯನ್ನುಂಟು ಮಾಡಿರಿ (ರೋಮಾ 12:10).

**ಮುಕ್ತಾಯ**

ವಿನ್ನರ್ಸ್ 3x3 ಅಭಿಯಾನಕ್ಕೆ ನಿಮ್ಮ ಸಮರ್ಪಣೆಯು ಈ ಸೇವೆಯ ಯಶಸ್ಸಿನಲ್ಲಿ ಪ್ರಾಮುಖ್ಯವಾದದ್ದಾಗಿದೆ. ಈ ಪಾತ್ರವನ್ನು ನೆರವೇರಿಸುವದು ನಿಧಾನದ ಕಾರ್ಯವಾಗಿದೆ, ಆದರೆ ದೇವರ ಎದುರಿನಲ್ಲಿ ಸಂತೋಷಭರಿತವಾದ ಜವಾಬ್ದಾರಿಕೆಯಾಗಿದೆ. ಯಶಸ್ವಿಯಾಗಲು ಬೇಕಾಗುವ ವರಗಳನ್ನು ನೀಡಿ ಆತನು ನಿಮ್ಮನ್ನು ಬಲಗೊಳಿಸುತ್ತಾನೆ. ದೇವರು ಈ ಸೇವೆಗಾಗಿ ಕರೆದಿರುವವರನ್ನೆಲ್ಲಾ, ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಬಲಗೊಳಿಸುತ್ತಾನೆ.

**ಚರ್ಚಾ ಪ್ರಶ್ನೆಗಳು**

1. ಹಿಂದಿನ ಕೂಟದ ಸಾಮಗ್ರಿಗಳನ್ನು ಪರಿಶೀಲನೆ ಮಾಡುವದು ಕಲಿತುಕೊಳ್ಳಲು ಯಾಕೆ ಪ್ರಾಮುಖ್ಯ?

2. ನಿಮ್ಮ ಧ್ಯಾನದ ಸಮಯಾದಲ್ಲಿ ವಿನ್ ತಂಡವನ್ನು ನಿಮ್ಮ "ವಿಷಯದಲ್ಲಿಯೇ" ಇರಿಸಿಕೊಳ್ಳಲು ಒಬ್ಬ ನಾಯಕಿಯಾಗಿ ನೀವು ಮಾಡಬಹುದಾದ ಕಾರ್ಯಗಳು ಯಾವುವು?

**ಪ್ರಾರ್ಥನೆ**




ಕರ್ತನೇ, ಶಿಷ್ಯೆಯರನ್ನು ಮಾಡುವದಕ್ಕಾಗಿ ಮತ್ತು ವಿನ ತಂಡದ ನಾಯಕಿಯಾಗಿರುವದಕ್ಕಾಗಿ ನೀನು ನನ್ನನ್ನು ಕರೆದಿದ್ದೀಯ ಎಂದು ನಾನು ನಂಬುತ್ತೇನೆ. ಪರಿಣಾಮಕಾರಿಯಾದ ಸಲಹೆಗಾರ್ತಿಯಾಗಲು ಜ್ಞಾನ, ತಾಳ್ಮೆ, ವಿವೇಚನೆ ಮತ್ತು ಉತ್ಸಾಹವನ್ನು ಈಗ ನನಗೆ ದಯಪಾಲಿಸು. ನಾವೆಲ್ಲರೂ ಶಿಷ್ಯತ್ವದ ಕಾರ್ಯಕ್ಕಾಗಿ ನಮ್ಮನ್ನೇ ಒಪ್ಪಿಸಿಕೊಟ್ಟಿರುವಾಗ ನಾವೆಲ್ಲರೂ ಜ್ಞಾನದಲ್ಲಿ ಬೆಳೆಯಲು ನಮಗೆ ಸಹಾಯಮಾಡು. ಆಮೆನ್.

# ನೋಟ್ಸ್

# ಸಮರ್ಪಣೆ

## ವಿನ್ನರ್ಸ್ 3x3 ಅಭಿಯಾನ



ಗೆ: ಇತರ ಮೂವರು ಸ್ತ್ರಿಯರೊಂದಿಗೆ ಪ್ರಬಲವಾದ ಆತ್ಮೀಕ ರಚನೆಯನ್ನು ಮುಂದುವರೆಸಲು ಹಾತೊರೆಯುತ್ತಿರುವ ಯೇಸು ಕ್ರಿಸ್ತನ ಸಮರ್ಪಣೆಯುಳ್ಳ ಶಿಷ್ಯೆಯರಿಗೆ, ಕೆಳಗೆ ಕೆಲವು ಸೂಚನೆಗಳನ್ನು ಕೊಡಲಾಗಿದೆ:

1. ನೀವು ಆರಿಸಿಕೊಳ್ಳುವ ಮೂವರು ಸ್ತ್ರೀಯರು ಶಿಷ್ಯೆಯರನ್ನು ಮಾಡುವವರಾಗಿ ಬಲಗೊಳ್ಳಬೇಕು ಆದ್ದರಿಂದ ಆಳವಾದ ಶಿಷ್ಯತ್ವಕ್ಕೆ ನಡೆಸಲು ನೀವು ಆರಿಸಿಕೊಳ್ಳಬೇಕಾಗಿರುವ ಆ ಮೂವರು ಯಾರು ಎಂಬದನ್ನು ತೋರಿಸುವಂತೆ ದೇವರನ್ನು ಪ್ರಾರ್ಥಿಸಿರಿ.

2. ದೇವರು ಅವರ ಹೃದಯಗಳನ್ನು ಅರ್ಥಗರ್ಭಿತವಾದ ಶಿಷ್ಯತ್ವಕ್ಕಾಗಿ ಸಿದ್ಧಗೊಳಿಸುವಂತೆ ಆ ಪ್ರತಿಯೊಬ್ಬರಿಗಾಗಿಯೂ ವಾರದ ಎಲ್ಲಾ ದಿವಸಗಳೂ ಪ್ರಾರ್ಥಿಸಿರಿ.

3. ಅವರಿಗೆ ಶಿಷ್ಯತ್ವದ ಅವಶ್ಯಕತೆಯನ್ನು ದೈವೀಕ ಆಲೋಚನೆ ಮತ್ತು ಪರಿಶುದ್ಧವಾದ ಭಯದೊಡನೆ ವಿವರಿಸುವದಕ್ಕಾಗಿ ಅವರನ್ನು ವ್ಯಕ್ತಿಗತವಾಗಿ ಭೇಟಿ ಮಾಡಿರಿ.

4. ನಿಮ್ಮೊಂದಿಗೂ ಮತ್ತು ಇನ್ನೊಬ್ಬರೊಂದಿಗೂ ಸೇರಿ ಶಿಷ್ಯತ್ವದ ಮ್ಯಾನುವಲ್‌ನಿಂದ ಕಲಿತುಕೊಳ್ಳುವಂತೆ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಿರಿ ಮತ್ತು ಒಬ್ಬರಿಗಾಗೊಬ್ಬರು ಪ್ರಾರ್ಥನೆ ಮಾಡಿರಿ.

5. ನಿಮ್ಮ ವಿನ್ ತಂಡದಲ್ಲಿ ಪ್ರತಿವಾರ ನಡೆಯುವ ಶಿಷ್ಯತ್ವದ ಸಮರ್ಪಣೆ ಮತ್ತು ಪ್ರಾರ್ಥನೆಗಾಗಿ ಮೂವರನ್ನು ಒಟ್ಟಾಗಿ ಕರೆಯಿರಿ.

6. ಮೂವರೂ ಸಮರ್ಪಣೆಯುಳ್ಳ ಶಿಷ್ಯೆಯರಾಗಲು ಮತ್ತು ಆ ಪ್ರತಿಯೊಬ್ಬರು ಮೂರುಮೂರು ಸ್ತ್ರೀಯರನ್ನು ಸೇರಿಸಿ ವಿನ್ ಶಿಷ್ಯತ್ವದ ತಂಡಗಳನ್ನು ಪ್ರಾರಂಭಿಸುವವರಾಗುವಂತೆ ವಿನ್ ಡಿಸೈಪಲ್‌ಶಿಪ್ ಮ್ಯಾನುವಲ್ ಕಲಿಸುವಿಕೆಯನ್ನು ಪ್ರಾರ್ಥನಾಪೂರ್ವಕವಾಗಿ ಮುಗಿಸಿರಿ.

# ದೇವರೇ ನಾನು ಭರವಸೆಯುಳ್ಳವಳಾಗಿದ್ದೇನೆ...

1. ನೀನು ನನ್ನ ಪಾಪಗಳಿಗಾಗಿ ಮತ್ತು ನನ್ನ ನೆರಯವರ ಪಾಪಗಳಿಗಾಗಿ ಶಿಲುಬೆಯ ಮೇಲೆ ಸತ್ತಿದ್ದೀಯ (ನಾವಿನ್ನೂ ಪಾಪಿಗಳಾಗಿರುವಾಗಲೇ ಕ್ರಿಸ್ತನು ನಮಗಾಗಿ ಸತ್ತನು – ರೋಮಾ 5:8).

2. ನಾನು ನಂಬಿಕೆಯಿಂದ ನಿನ್ನ ಕಡೆಗೆ ತಿರುಗಿಕೊಂಡಾಗ ನೀನು ನನ್ನನ್ನು ರಕ್ಷಿಸಿದ್ದೀಯ ಮತ್ತು ನನ್ನ ನೆರೆಯವರು ನಂಬಿಕೆಯಿಂದ ನಿನ್ನ ಕಡೆಗೆ ತಿರುಗಿಕೊಳ್ಳುವಾಗ ನೀವು ಅವರನ್ನೂ ರಕ್ಷಿಸುತ್ತೀಯ (ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟ ಮಾಡುವನು. ಪ್ರಕ 3:20).

3. ನಾನು ನನ್ನ ನೆರೆಯವನನ್ನು ನಿನ್ನ ರಕ್ಷಣೆ ಮಾರ್ಗಕ್ಕೆ ತರುವದಕ್ಕಾಗಿ ನೀನು ನನ್ನನ್ನು ರಕ್ಷಿಸಿದ್ದೀಯ (ನಾನು ನಿಮ್ಮನ್ನು ಆರಿಸಿತೆಗೆದುಕೊಂಡೆನು. ನೀವು ಹೊರಟು ಹೋಗಿ ಫಲಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು ನಿಲ್ಲುವಂಥದ್ದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ. ಯೋಹಾನ 15:16).

4. ನಾನು ನಿನ್ನ ವಾಕ್ಯಗಳಲ್ಲಿ ಮುಂದುವರೆಯುವದಾದರೆ ನಿನ್ನ ನಿಜವಾದ ಶಿಷ್ಯೆಯಾಗಿರುವೆನು ("ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯೆಯರು." ಯೋಹಾನ 8:31).

5. ಶಿಷ್ಯೆಯರನ್ನು ಮಾಡಿರಿ ಎಂಬ ಮಹಾಆಜ್ಞೆಯನ್ನು ನೀನು ನನಗೆ ಕೊಟ್ಟಿದ್ದೀಯ "..ಹೋಗಿರಿ ಎಲ್ಲಾ ದೇಶಗಳ ಜನರನ್ನು ಶಿಷ್ಯೆಯರನ್ನಾಗಿ ಮಾಡಿರಿ." ಮತ್ತಾ. 28:19).

6. ನಿನ್ನ ಮಾತಿನ ಮೇರೆಗೆ ಮೂವರು ಸ್ತ್ರೀಯರೊಂದಿಗೆ ಆತ್ಮೀಕ ರಚನೆಯ ಜವಾಬ್ದಾರಿಕೆಯನ್ನು ವಹಿಸಿಕೊಳ್ಳಬೇಕು ಮತ್ತು ಆ ಮೂವರು ಇನ್ನೂ ಮೂವರು ಸ್ತ್ರೀಯರೊಂದಿಗೆ ವಿನ್ ತಂಡಗಳನ್ನು ಪ್ರಾರಂಭಿಸುವಂಥ ಮತ್ತು ಸಮರ್ಪಣೆಯುಳ್ಳ ಶಿಷ್ಯೆಯರನ್ನು ಮಾಡುವವರಾಗಬೇಕು ("..ಒಬ್ಬರನ್ನೊಬ್ಬರು ಸಂತೈಸಿಕೊಳ್ಳುತ್ತಾ ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಪಡಿಸುತ್ತಾ ಇರ್ರಿ." 1 ಥೆಸ. 5:11).

7. ಮಹಾಆಜ್ಞೆಯ ಎರಡೂ ಜವಾಬ್ದಾರಿಕೆಗಳನ್ನು ಹೊತ್ತುಕೊಳ್ಳಲು ಮತ್ತು ಪ್ರಾರ್ಥಿಸಲು ಒಟ್ಟಿಗೆ ನಾನು ಪ್ರಾರಂಭಿಸಬೇಕು: ನಾಶನದ ಮಾರ್ಗದಲ್ಲಿರುವವರನ್ನು ಗೆಲ್ಲಬೇಕು ಮತ್ತು ಶಿಷ್ಯೆಯರನ್ನಾಗಿ ಮಾಡಬೇಕು ("ರಾತ್ರಿ ಬರುತ್ತದೆ ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು." ಯೋಹಾನ 9:4).

8. ಪವಿತ್ರಾತ್ಮನನ್ನು ಆತುಕೊಂಡು, ನಾನು ಫಲಭರಿತಳಾದ ವಿನ್ನರ್ ಆಗಿರುವೆನು, ನಿನಗೂ ಮತ್ತು ಈ ಸೇವೆಗೂ ಲೆಕ್ಕಕೊಡುವವಳಾಗಿರುವೆನು ಎಂಬ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕು. ಇದಕ್ಕಾಗಿ ನಾನು ನನ್ನ ಕರವನ್ನು ಚಾಚುವವಳಾಗಿದ್ದೇನೆ.

**ಸಹಿ:** ______________________ **ದಿನಾಂಕ:** ______________________

***ಯೇಸು ಕ್ರಿಸ್ತನ ಶಿಷ್ಯೆಯರನ್ನಾಗಿ ನಾನು ಮಾಡಬಯಸುವ ನನ್ನ 3 ಸ್ನೇಹಿತೆಯರು ಯಾರೆಂದರೆ:***

**1.** ______________________________________________

**2.** ______________________________________________

**3.** ______________________________________________

# Appendix

## Helpful Websites

**http://coregroups.org**.
Core Discipleship. Resources for discipleship groups.

**http://www.telintl.org.**
Training Evangelistic Leadership. Books and resources for sale.

**http://www.navigators.org.**
Navigators. Resources for discipleship and Bible studies.

**http://www.gospelcentereddiscipleship.com.**
Articles and resources on discipleship.

**http://www.discipleshiplibrary.com.**
Audio and pdf articles and curriculum on discipleship.

**http://www.disciplers.org.**
Free discipleship lessons.

## Promising Ministries

If you are seeking the Lord for guidance about a particular ministry you can do to be a woman who is an effective soul-winner, contact the WIN/ AIDA offi ce for the *AIDA Package of Promising Ministries* for women. The contact information is:

Address: AIDA
C-1/1493, Vasant Kunj,
New Delhi-110 070, INDIA

E-mail: ***stephenrawate@gmail.com***

Phone: ***01126122930***, or ***9871639100***